ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಆಗಸ್ಟ್ 2020 ಮಾಸ ಪತ್ರಿಕೆ

ಸಂಪುಟ/Volume : 42

ಸಂಚಿಕೆ/Issue : 11

ಪುಟ/Pages : 25

ಬೆಲೆ/Price : ₹ 10/–

Akhila Karnataka Shikshaka Samachar | August 2020 | Monthly

"ಭಾರತದ ಶಿಕ್ಷಣವನ್ನು ಭಾರತೀಕರಣ ಅಥವಾ ಸ್ವದೇಶಿಕರಣಗೊಳಿಸಿದ ಮಹಾನ್ ನಾಯಕರೇ ತಿಲಕರು.



ಶ್ರೀ ಬಿ. ಎಲ್. ಸಂತೋಷ್ ಜೀ
ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳು, ಬಿಜೆಪಿ

('ಸ್ವಾತಂತ್ರ್ಯ ಹೋರಾಟಕ್ಕೆ ತಿಲಕರ ಕೊಡುಗೆ' ವೆಬಿನಾರ್ ಕಾರ್ಯಕ್ರಮದಲ್ಲಿ)

"ಯಾವುದೇ ವ್ಯಕ್ತಿಯ ಜೀವನದ ಮೇಲೆ ಅತ್ಯಂತ ಹೆಚ್ಚು ಪ್ರಭಾವ ಬೀರುವ ವ್ಯಕ್ತಿ ಮತ್ತು ವ್ಯಕ್ತಿತ್ವವೆಂದರೆ ಶಿಕ್ಷಕ.



ಶ್ರೀಮತಿ ನಿರ್ಮಲಾ ಸೀತಾರಾಮನ್
ವಿತ್ತ ಸಚಿವರು, ಭಾರತ ಸರ್ಕಾರ

('ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕಿಯ ಪಾತ್ರ' ವೆಬಿನಾರ್ ಕಾರ್ಯಕ್ರಮದಲ್ಲಿ)

A Journal of Karnataka State Secondary Teachers' Association

## ಸಂಪಾದಕೀಯ

ಈ ಹಿಂದಿನ ಸಂಚಿಕೆಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಸುರಕ್ಷತೆಯಿಂದ ಸುಗಮವಾಗಿ ನಡೆಸಿದ್ದಕ್ಕಾಗಿ ನಾವೆಲ್ಲಾ ಶಿಕ್ಷಣ ಮಂತ್ರಿಗಳಾದ ಶ್ರೀ ಸುರೇಶ್‌ಕುಮಾರ್‌ರವರಿಗೆ ಅಭಿನಂದನೆಯನ್ನು ತಿಳಿಸಿದ್ದು, ತಮಗೆಲ್ಲಾ ನೆನಪಿರಬಹುದು. ಈ ಸಂಚಿಕೆಯಲ್ಲಿ ಮತ್ತೊಂದು ವಿಷಯಕ್ಕೆ ಅವರಿಗೆ ಮತ್ತೊಂದು ಬಾರಿ ಅಭಿನಂದನೆ ಸಲ್ಲಿಸಬೇಕಾಗಿದೆ, ಆ ವಿಷಯವೇನೆಂದು ತಮಗೆಲ್ಲಾ ಗೊತ್ತೇ ಇದೆ. ಹೌದು, ಅದೇ ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶವನ್ನು ಸಹ ಅಷ್ಟೇ ಬೇಗ ನೀಡಿ, ವಿದ್ಯಾರ್ಥಿಗಳು ಹಾಗೂ ಪೋಷಕರ ನೆನೆಗುದಿಯನ್ನು ನಿವಾರಿಸಿದ್ದಕ್ಕಾಗಿ ಹಾಗು ಕೊರೋನಾ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಮಾಡಿ ಫಲಿತಾಂಶವನ್ನು ನೀಡಿ, ಇಡೀ ದೇಶಕ್ಕೆ ಮಾದರಿಯಾಗಿರುವುದಕ್ಕಾಗಿ, ಇಡೀ ನಾಡಿನ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪರವಾಗಿ ಹೃದಯ ಪೂರ್ವಕ ಅಭಿನಂದನೆಗಳು ಸರ್.

### ರಾಷ್ಟ್ರೀಯ ಶಿಕ್ಷಣ ನೀತಿ– 2020

1986ರ ನಂತರ ಅಂದರೆ 34 ವರ್ಷಗಳ ನಂತರ ಇಡೀ ಭಾರತ ದೇಶಕ್ಕೆ ನವೀನ ದಿಕ್ಕನ್ನು ತೋರಿಸುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಬಂದಿರುವುದು, ಭಾರತದ ಸುಂದರ ಭವಿಷ್ಯಕ್ಕೆ ಬರೆದ ಮುನ್ನುಡಿಯಾಗಿದೆ. ವಿವಿಧ ಹಂತದಲ್ಲಿ ದೀರ್ಘವಾದ ಚರ್ಚೆ, ವಿಮರ್ಶೆ, ಸಮಾಲೋಚನೆಯನ್ನು ನಡೆಸಿದ ನಂತರ ಕೇಂದ್ರ ಸರ್ಕಾರವು ಸಂಪುಟ ಸಭೆಯಲ್ಲಿ ಹೊಸ ಶಿಕ್ಷಣ ನೀತಿಗೆ ಸಮ್ಮತಿ ನೀಡಿರುವುದು ಅತ್ಯಂತ ಸಂತೋಷಕರ. ಹೊಸ ಶಿಕ್ಷಣ ನೀತಿಯು ಶಾಲಾ ಶಿಕ್ಷಣ, ಪಠ್ಯಕ್ರಮ, ಉನ್ನತ ಶಿಕ್ಷಣ, ಶಿಕ್ಷಕರ ಶಿಕ್ಷಣ, ಶಿಕ್ಷಣದಲ್ಲಿ ತಂತ್ರಜ್ಞಾನದ ಬಳಕೆ, ಗ್ರಾಮೀಣಾಭಿವೃದ್ಧಿ ಹಾಗೂ ಭಾರತೀಯ ಭಾಷೆಗಳಿಗೆ ಪ್ರಾಧಾನ್ಯತೆ ಹೀಗೆ ಹತ್ತು ಹಲವು ವಿಷಯಗಳ ಬಗ್ಗೆ ಆಳವಾದ ಮತ್ತು ಸಮಗ್ರವಾದ ಮಾಹಿತಿಯನ್ನು ಹೊಂದಿದ್ದು, ಶಿಕ್ಷಣ ಕ್ಷೇತ್ರಕ್ಕೆ ನೂತನ ಕಾಯಕಲ್ಪವನ್ನು ಕಲ್ಪಿಸಲಿದೆ. 5ನೇ ತರಗತಿವರೆಗೆ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಿಯೇ ಶಿಕ್ಷಣ ನೀಡಬೇಕೆಂಬುದು ಮಹತ್ವಪೂರ್ಣ ನಿರ್ಧಾರ. ವಿದ್ಯಾರ್ಥಿಗಳ ಪ್ರಗತಿಯನ್ನು ಕೇವಲ ಅಂಕಗಳ ಮೂಲಕ ಮಾಡದೇ ಅವರ ಕೌಶಲ್ಯ ಮತ್ತು ಸಾಮರ್ಥ್ಯಗಳನ್ನು ಮೌಲ್ಯಮಾಪನ ಮಾಡುವ ನಿರ್ಧಾರ ಅತೀ ಉತ್ತಮವಾದದ್ದು. ಕರಡು ರಾಷ್ಟ್ರೀಯ ಶಿಕ್ಷಣ ನೀತಿ ಸಮಿತಿಯ ಅಧ್ಯಕ್ಷರಾದ ಪ್ರೊ. ಕಸ್ತೂರಿ ರಂಗನ್, ಪ್ರೊ. ಎಂ.ಕೆ ಶ್ರೀಧರ್ ಅವರನ್ನು ಒಳಗೊಂಡ ಸಮಿತಿ ಸದಸ್ಯರು ಹಾಗೂ ತೆರೆಮರೆಯಲ್ಲಿ ಶ್ರಮಿಸಿದ ಅಸಂಖ್ಯ ಶಿಕ್ಷಣ ತಜ್ಞರನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಅಭಿನಂದಿಸುತ್ತದೆ.

### ಗಣೇಶ ಚತುರ್ಥಿಯ ಶುಭಾಶಯಗಳು

ಆತ್ಮೀಯ ಓದುಗ ಮಿತ್ರರೆಲ್ಲರಿಗೂ ಗೌರಿ–ಗಣೇಶ ಹಬ್ಬದ ಶುಭಾಶಯಗಳು. ವಿಘ್ನನಿವಾರಕ ಗಣೇಶ ಕೊರೋನಾ ಎಂಬ ಮಹಾಮಾರಿಯನ್ನು ಹೊಡೆದೋಡಿಸಿ ನಮ್ಮೆಲ್ಲರಿಗೂ ಭಯಭೀತ ಮುಕ್ತ ಜೀವನವನ್ನು ನೀಡಲಿ. ಶಿಕ್ಷಣ ಕ್ಷೇತ್ರವು ಸಹ ಭಯರಹಿತವಾಗಿ ಹಿಂದಿನಂತೆ ಮಕ್ಕಳೊಂದಿಗೆ ಸೇರಿ ತನ್ನ ಕಾರ್ಯವನ್ನು ನಡೆಸುವಂತಾಗಲಿ ಎಂದು ಎಲ್ಲರೂ ಪ್ರಾರ್ಥನೆ ಮಾಡೋಣ.

### ಶಿಕ್ಷಕರ ದಿನಾಚರಣೆಯ ಶುಭಾಶಯಗಳು

ಡಾ॥ ಸರ್ವಪಲ್ಲಿ ರಾಧಾಕೃಷ್ಣನ್‌ರವರ ಜನ್ಮ ದಿನದ ನಿಮಿತ್ತ ಆಚರಿಸುವ ಶಿಕ್ಷಕ ದಿನಾಚರಣೆಯ ಶುಭಾಶಯಗಳು. ಕೊರೋನಾ ಸಮಯದಲ್ಲಿ ವಿದ್ಯಾರ್ಥಿಗಳು ವಿದ್ಯಾಭ್ಯಾಸದಿಂದ ದೂರವಾಗಬಾರದು. ವಿದ್ಯಾರ್ಥಿಗಳು ನಿರಂತರವಾಗಿ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿರಬೇಕೆಂಬ ಸದಾಶಯದಿಂದ ಶಿಕ್ಷಣ ಇಲಾಖೆಯು "ವಿದ್ಯಾಗಮ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ್ದು, ಶಿಕ್ಷಕರು ಉತ್ಸಾಹದಿಂದ ಈ ಕಾರ್ಯಕ್ರಮದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ಅಭಿನಂದನಾರ್ಹ.

### ಭಾವಪೂರ್ಣ ಶ್ರದ್ಧಾಂಜಲಿ

ಇಷ್ಟೆಲ್ಲಾ ಅಭಿನಂದನಾರ್ಹ ವಿಷಯಗಳ ಮಧ್ಯದಲ್ಲಿ ಒಂದು ದುಃಖಕರ ವಿಚಾರವೂ ನಮ್ಮನ್ನು ಕಾಡುತ್ತಿದೆ. ನಮ್ಮೆಲ್ಲರ ಮಧ್ಯದಲ್ಲಿ ಅತ್ಯಂತ ಉತ್ಸಾಹದಿಂದ ಸಂಘದ ಕಾರ್ಯವನ್ನು ಮಾಡುತ್ತಿದ್ದ, ಬೆಳಗಾವಿ ವಿಭಾಗದ ಮುಖ್ಯಸ್ಥರು, ಅತ್ಯಂತ ನಗುಮೊಗದಿಂದ ಎಲ್ಲರನ್ನು ಆತ್ಮೀಯತೆಯಿಂದ ಮಾತನಾಡಿಸುತ್ತಾ ಸಂಘಟನೆ ಮಾಡುತ್ತಿದ್ದ ಶ್ರೀ ಸಂತೋಷ್ ಹುನಳ್ಳರವರನ್ನು ಕಳೆದುಕೊಂಡಿರುವುದು ಸಂಘಟನೆಗೆ ತುಂಬಲಾಗದ ನಷ್ಟ. ಆ ದೇವರು ಆ ಆತ್ಮಕ್ಕೆ ಸದ್ಗತಿಯನ್ನು ನೀಡಲಿ ಹಾಗೂ ಕುಟುಂಬದವರೆಲ್ಲರಿಗೂ ಈ ನೋವನ್ನು ತಡೆದುಕೊಂಡು ಮುಂದೆ ಸಾಗುವ ಧೈರ್ಯವನ್ನು ನೀಡಲಿ ಎಂದು ಪ್ರಾರ್ಥನೆ.

**ಸಂಪಾದಕ**

## ಪರಿವಿಡಿ


- ಸ್ವಾತಂತ್ರ್ಯವೆಂಬ ಮರೀಚಿಕೆ? 3
- ಶೈಕ್ಷಣಿಕ ಇತಿಹಾಸದ ಮತ್ತೊಂದು ಮಜಲು 4
- ಜ್ಞಾನಾರ್ಜನೆಗೆ ದಾರಿ ದೀಪಗಳು – ಭಾಗ 2 6
- ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತೀಯ ಮಹಿಳೆಯರ ಪಾತ್ರ 8
- ಅಮೂಲ್ಯ ನಿಧಿ– ರಾಮಾಯಣ 10
- "ಗುರುವಂದನಾಚರಣೆ" – ಶ್ರೀ ಗುರುರಾಜ ಕರ್ಜಗಿ 11
- ವಿದ್ಯಾರ್ಥಿಗಳಲ್ಲಿ ಆಲೋಚನಾ ಸಾಮರ್ಥ್ಯ 13
- ಶಕುನಗಳ ಸಂದೇಶ 14
- ಸ್ವಾತಂತ್ರ್ಯ ಹೋರಾಟಕ್ಕೆ ತಿಲಕರ ಕೊಡುಗೆ – ಶ್ರೀ ಬಿ. ಎಲ್. ಸಂತೋಷ್ ಜಿ 16
- "ಪ್ರಾಥಮಿಕ ಹಂತದಲ್ಲಿ ಶಿಕ್ಷಕಿಯರ ಸಂಖ್ಯೆ ಶೇಕಡ ನೂರಾಗಲಿ" – ನಿರ್ಮಲಾ ಸೀತಾರಾಮನ್ 17
- 'ಕೊರೊನೋತ್ತರ ಕಾಲದಲ್ಲಿ ಶಿಕ್ಷಣದ ಪುನಶ್ಚೇತನ ಹೇಗೆ?' 18
- ಸ್ವರಾಜ್ಯದ ಮಂತ್ರ ಕೊಟ್ಟ ತಿಲಕರು 19
- ಒಳ್ಳೆಯವರ ಸಹವಾಸವನ್ನೇ ಮಾಡಿ 22
- ಗುರುವಂದನಾ ಕಾರ್ಯಕ್ರಮ–ಕುಷ್ಟಗಿ 23
- ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಪ್ರಮುಖರ ಹೇಳಿಕೆ 24
- ಶಿಕ್ಷಕರ ಮತ್ತು ಶೈಕ್ಷಣಿಕ ಸಮಸ್ಯೆಗಳ ಚರ್ಚೆ 25

# ಸ್ವಾತಂತ್ರ್ಯವೆಂಬ ಮರೀಚಿಕೆ?



**ಡಾ|| ಟಿ. ಎನ್. ಲೋಕೇಶ್**
**ಪ್ರಾಧ್ಯಾಪಕರು & ಚಿಂತಕ**
**ಎಸ್.ಎಂ.ಕೆ.ಆರ್.ವಿ ಮಹಿಳಾ ಕಾಲೇಜು**
**ಜಯನಗರ, ಬೆಂಗಳೂರು**

ಭಾರತ ಬ್ರಿಟೀಷರ ದಾಸ್ಯದಿಂದ ಮುಕ್ತಗೊಂಡು ಇಂದಿಗೆ 74 ಸಂವತ್ಸರಗಳು ತುಂಬುತ್ತಿವೆ. ಇಂತಹ ಸನ್ನಿವೇಶದಲ್ಲಿ ನಾವು ಸ್ವಾತಂತ್ರ್ಯವನ್ನು ಸರಿಯಾದ ಮಾರ್ಗದಲ್ಲಿ ಅನುಭವಿಸುತ್ತಿದ್ದೇವೆಯೇ ಎಂಬ ಜಿಜ್ಞಾಸೆ ಮೂಡುತ್ತದೆ. ಈ ರಾಷ್ಟ್ರದ ಹೆಮ್ಮೆಯ ವಾರಸುದಾರರಾದ ನಾವು ಸ್ವಾತಂತ್ರ್ಯದ ಬೆಲೆಯನ್ನು ಆತ್ಮಾವಲೋಕನ ಮಾಡಿಕೊಳ್ಳುವ ಸಂದಿಗ್ಧತೆ ಈಗ ಎದುರಾಗಿದೆ. ನಾವೆಲ್ಲ ಕೇವಲ ಆಗಸ್ಟ್ 15ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮಿಸಿದರೆ ಸಾಕೆ? ಪೂರ್ಣ ಸ್ವಾತಂತ್ರ್ಯದ ಸಾಕ್ಷಾತ್ಕಾರ ಆಗಿಲ್ಲವೆ? ಮುಂಬರುವ ದಿನಗಳಲ್ಲಿ ಸ್ವಾತಂತ್ರ್ಯವನ್ನು ಜೋಪಾನ ಮಾಡುವುದು ಹೇಗೆ ಎಂಬುದು ದೊಡ್ಡ ಸವಾಲಾಗಿ ಪರಿಣಿಮಿಸಿದೆ.

'ಸ್ವಾತಂತ್ರ್ಯದ ಬೆಲೆ ತಿಳಿಯದ ಹೊರತು ಅದನ್ನು ಪೂರ್ಣವಾಗಿ ಅನುಭವಿಸಲು ಸಾಧ್ಯವಿಲ್ಲ? ಸ್ವಾತಂತ್ರ್ಯ ನಮಗೆ ದೊರೆತ ಉಡುಗೊರೆಯಲ್ಲ. ಬದಲಿಗೆ ಅದು ನಮ್ಮೆಲ್ಲರ ಹೆಗಲಿನ ಮೇಲಿರುವ ಜವಾಬ್ದಾರಿ. ಇತಿಹಾಸದ ವಾಸ್ತವತೆಗೆ ಭಿನ್ನ ಸ್ವರೂಪವಿದೆ. ನಾವು ಅಂದುಕೊಂಡಂತೆ ಸ್ವಾತಂತ್ರ್ಯ ಅಹಿಂಸೆ, ಶಾಂತಿ ಮತ್ತು ಸತ್ಯಾಗ್ರಹಗಳ ತತ್ಪರಿಣಾಮ ಬ್ರಿಟಿಷರಿಂದ ಪಡೆದುಕೊಂಡ ಭಿಕ್ಷೆಯಲ್ಲ, ಬದಲಿಗೆ ಸ್ವಾತಂತ್ರ್ಯ, ಲಕ್ಷಾಂತರ ರಾಷ್ಟ್ರಭಕ್ತರ ನೆತ್ತರಿನ ಹೊಳೆ ಹರಿಸಿದ ಬಲಿದಾನದ ಫಲ: ಅದೆಷ್ಟೋ ಉತ್ಕೃಷ್ಟ ರಾಷ್ಟ್ರಪ್ರೇಮಿಗಳು ಬ್ರಿಟೀಷರ ಗುಂಡಿಗೆ ಎದೆಯೊಡ್ಡಿ ನೇಣಿನ ಕುಣಿಕೆಗೆ ಕೊರಳೊಡ್ಡಿ ತಮ್ಮ ಅಪ್ರತಿಮ ಮತ್ತು ಪರಮೋಚ್ಚ ತ್ಯಾಗ, ಆತ್ಮಾರ್ಪಣೆ, ಬಲಿದಾನ, ಸಮರ್ಪಣೆಯ ಮೂಲಕ ರಕ್ತದ ಕೋಡಿ ಹರಿಸಿ ತಾಯಿ ಭಾರತಿಯನ್ನು ದಾಸ್ಯದ ಸಂಕೋಲೆಗಳಿಂದ ಮುಕ್ತಗೊಳಿಸಿ ಗಳಿಸಿದ್ದೆ ಸ್ವಾತಂತ್ರ್ಯ.

ಇಂದಿನ ಪೀಳಿಗೆಯವರು ಸ್ವಾತಂತ್ರ್ಯದ ಮೌಲ್ಯ ತಿಳಿಯದೇ ಮನಬಂದಂತೆ ಸ್ವಾತಂತ್ರ್ಯವನ್ನು ಒಂದು ಭೌತಿಕ ಪರಿಚಯದಂತೆ ಉಪಯೋಗಿಸುತ್ತಿರುವುದು ಸಹ ಅಕ್ಷಮ್ಯ ಅಪರಾಧವಾಗಿದೆ. ಸ್ವಾತಂತ್ರ್ಯವೆಂದರೆ ಸ್ವೇಚ್ಛಾಚಾರವಲ್ಲ ಬದಲಿಗೆ ಮಿತಿಯಲ್ಲಿರುವುದು ಎಂದರ್ಥ. ನ್ಯಾಯ, ನೀತಿ, ಧರ್ಮ ಮತ್ತು ಸತ್ಯ ಮಾರ್ಗದಲ್ಲಿ ಬದುಕನ್ನು ಕ್ರಮಿಸುವ ಪರಿಯೇ ಸ್ವಾತಂತ್ರ್ಯದ ಅನುಭವಿ ಮೊದಲ ಹೆಜ್ಜೆ.

ನಿಜ ಅರ್ಥದಲ್ಲಿ ವ್ಯಕ್ತಿ ತನ್ನ ಸ್ವಾತಂತ್ರ್ಯ ಗಳಿಸದ ಹೊರತು ರಾಷ್ಟ್ರ ಸ್ವಾತಂತ್ರ್ಯ ಹೊಂದಲು ಸಾಧ್ಯವಿಲ್ಲ? ಪ್ರಸಕ್ತ ಕಾಲಘಟ್ಟದಲ್ಲಿ ನಾವು ರಾಜಕೀಯ ಸ್ವಾತಂತ್ರ್ಯ ಪಡೆದುಕೊಳ್ಳಲು ಸಫಲರಾಗಿದ್ದೇವೆ. ದುರಾದೃಷ್ಟವಶಾತ್ ಸಾಮಾಜಿಕ, ಆರ್ಥಿಕ ಸಮಾನತೆಯ ಸ್ವಾತಂತ್ರ್ಯ ಹೊಂದಲು ವಿಫಲರಾಗಿದ್ದೇವೆ. ಈ ನಿಟ್ಟಿನಲ್ಲಿ ನಾವೆಲ್ಲರು ಸಮಗ್ರತಾ ದೃಷ್ಟಿಯಿಂದ ತೊಡೆದುಹಾಕುವ ಅನಿವಾರ್ಯತೆ ಬಂದೊದಗಿದೆ.

ಶಿಕ್ಷಣ, ರಕ್ಷಣೆ, ನ್ಯಾಯಾಂಗ, ಉದ್ಯೋಗ, ಉತ್ಪಾದನೆ ಹಾಗೂ ಕೃಷಿ ಕ್ಷೇತ್ರಗಳಲ್ಲಿ 'ಆತ್ಮನಿರ್ಭರತೆ' ಹೊಂದುವ ಕಾಲ ಕೂಡಿಬಂದಿದೆ. 'ಸರ್ವರಿಗೂ ಸೂರು', 'ಸರ್ವರಿಗೂ ಸಮಬಾಳು', 'ಸರ್ವರಿಗೂ ಸಮಪಾಲು' ಎಂಬುದನ್ನು ನನಸಾಗಿಸಿ ಭಾರತದ ಅಖಂಡತೆಯನ್ನು ಕಾಪಾಡಬೇಕಾಗಿದೆ.

ಭಾರತೀಯ ಶಿಕ್ಷಣ ಪರಂಪರೆಯ ಗುರುಕುಲಗಳ ವಿನಾಶಕ್ಕೆ ಕಾರಣವಾದ ಬ್ರಿಟಿಷ್ ಶಿಕ್ಷಣ ಕ್ರಮವನ್ನು ಕಿತ್ತೊಗೆದು ಅಪ್ಪಟ ದೇಶಿ ಭಾರತೀಯ ಪರಂಪರೆ ಆಶೋತ್ತರ ಮತ್ತು ಆಶಯಗಳಂತೆ ಶಿಕ್ಷಣ ದೊರೆಯಬೇಕೆಂಬ ಸದುದ್ದೇಶದಿಂದ ರಾಷ್ಟ್ರೀಯ ಶಿಕ್ಷಣ ನೀತಿ –2020ರ ಅನುಷ್ಠಾನ ಅಭಿನಂದನೀಯ. ಕರಿತೊಗಲಿನ ಬಿಳಿಯರ ಮನಸ್ಥಿತಿ ಹೊಂದಿದ ಭಾರತೀಯರನ್ನು ತಯಾರುಮಾಡಿ, ತಾಯ್ನೆಲದಲ್ಲಿ ಭಾರತೀಯರನ್ನು ವಿದೇಶಿಗರನ್ನಾಗಿ ಸೃಷ್ಟಿಸುತ್ತಿದ್ದ ವಸಾಹತುಶಾಯಿ ಶಿಕ್ಷಣದ ನಮೂನೆಯನ್ನು ಕಿತ್ತೊಗೆದು ಶಿಕ್ಷಣವನ್ನು ಭಾರತೀಯಕರಣಗೊಳಿಸಿದ್ದು ಶಿಕ್ಷಣಕ್ಷೇತ್ರದಲ್ಲಿನ ಆತ್ಮನಿರ್ಭರತೆಗೆ ಜೀವಂತ ಸಾಕ್ಷಿಯಾಗಿದೆ.

ರಾಷ್ಟ್ರದ ರಕ್ಷಣೆಗೆ ಸಂಬಂಧಿಸಿದಂತೆ ಸೇನೆಯನ್ನು ಬಲಗೊಳಿಸಿ, ಜಗತ್ತಿನಲ್ಲೆ ಸರ್ವಶ್ರೇಷ್ಠ ಸೇವೆಯನ್ನು ಹೊಂದುವ ಅನಿವಾರ್ಯತೆ ಬಂದಿದೆ. ಶತ್ರು ರಾಷ್ಟ್ರಗಳ ಅಟ್ಟಹಾಸವನ್ನು ಬಗ್ಗುಬಡಿಯಲು ಬೇಕಾದ ಯುದ್ಧ ಸಾಮಗ್ರಿಗಳನ್ನು ನಾವೇ ತಯಾರಿಸಿಕೊಳ್ಳುವ ಸ್ಥಿತಿಯ ನಿರ್ಮಾಣವೇ ನಮ್ಮ ನಿಜವಾದ ಸ್ವಾತಂತ್ರ್ಯವಾಗಿದೆ.

ಸಿಎಎ ಮತ್ತು ಎನ್‌ಆರ್‌ಸಿಗಳ ಅನುಷ್ಠಾನ ಕಾಶ್ಮೀರದಲ್ಲಿ 370ನೇ ವಿಧಿಯನ್ನು ರದ್ದುಪಡಿಸಿ ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆಂಬ ಘೋಷಣೆ, ಚೀನಾ ಉತ್ಪಾದಿತ ವಸ್ತುಗಳ ಬಹಿಷ್ಕಾರ, ಜಗತ್ತಿನ ಶಕ್ತಿಶಾಲಿ ರಾಷ್ಟ್ರಗಳ ಜೊತೆಗಿನ ಉತ್ತಮ ಬಾಂಧವ್ಯ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ಗಣನೀಯ ಅಭಿವೃದ್ಧಿಗಳು ಆತ್ಮನಿರ್ಭರ ಭಾರತದ ದ್ಯೋತಕಗಳಾಗಿವೆ.

ಭಾರತದ ಸ್ವಾತಂತ್ರ್ಯಕ್ಕಾಗಿ ಅವಿರತ ಹೋರಾಟ ಮಾಡಿ, ನಿಸ್ವಾರ್ಥ ತ್ಯಾಗ ಮತ್ತು ಬಲಿದಾನ ಮಾಡಿದ ಲಕ್ಷಾಂತರ ಸಾಮಾನ್ಯ ಜನರ, ರೈತರು, ಕಾರ್ಮಿಕರು, ಸೈನಿಕರು ಹಾಗೂ ಕ್ರಾಂತಿಕಾರಿಗಳ ಆತ್ಮಾರ್ಪಣೆಯ ಫಲಶೃತಿಯೇ ಇಂದಿನ ಸ್ವಾತಂತ್ರ್ಯ. ಆದಕಾರಣ ಸ್ವಾತಂತ್ರ್ಯದ ಬೆಲೆಯನ್ನು ಗೌರವಿಸಿ ಪೂಜಿಸೋಣ ಹಾಗೂ ಪ್ರಜ್ಞಾವಂತ ನಾಗರೀಕರಾಗುವ ಯೋಗ್ಯತೆ ಪಡೆದು ಭಾರತವನ್ನು ಸದೃಢ, ಸ್ವದೇಶಿ, ಸ್ವಾವಲಂಬಿ ರಾಷ್ಟ್ರವನ್ನಾಗಿ ರೂಪಿಸೋಣ.

•

# ಶೈಕ್ಷಣಿಕ ಇತಿಹಾಸದ ಮತ್ತೊಂದು ಮಜಲು

**ಶ್ರೀ ಅರುಣ್ ಶಹಾಪೂರ್**
**ಕಾರ್ಯಾಧ್ಯಕ್ಷರು, ಕ.ರಾ.ಮಾ.ಶಿ.ಸಂಘ,**
**ವಿಧಾನಪರಿಷತ್ ಸದಸ್ಯರು**



ರಾಷ್ಟ್ರೀಯ ಶಿಕ್ಷಣ ನೀತಿ 2020ನ್ನು ಕೇಂದ್ರ ಸಚಿವ ಸಂಪುಟ ಸ್ವೀಕರಿಸಿದ್ದು ಭಾರತದ ಶೈಕ್ಷಣಿಕ ಇತಿಹಾಸ ಮತ್ತೊಂದು ಮಜಲನ್ನು ತಲುಪಿ ಅದ್ಭುತ ತಿರುವನ್ನು ತೆಗೆದುಕೊಳ್ಳಲಿದೆ. ಸನ್ಮಾನ್ಯ ಶ್ರೀ ನರೇಂದ್ರ ಮೋದಿಯವರು ಮೊದಲನೆ ಬಾರಿ ಪ್ರಧಾನಮಂತ್ರಿಯಾಗಿರುವ ಸಂದರ್ಭದಲ್ಲಿ ಶಿಕ್ಷಣಕ್ಕೊಂದು ಪಾವಿತ್ರಿಕ ಸ್ವರೂಪ ಕಲ್ಪಿಸಿಕೊಡುವ ಉದ್ಯೋಗಮುಖಿಯಾಗಿರುವ, ವೃತ್ತಿ ನೈಪುಣ್ಯತೆಯ, ಜಾಗತಿಕ ಸ್ತರದ ಶಿಕ್ಷಣ ವ್ಯವಸ್ಥೆ ರೂಪಿಸುವ ಇಚ್ಛೆಯನ್ನು ವ್ಯಕ್ತಪಡಿಸಿ ರಾಷ್ಟ್ರೀಯ ಶಿಕ್ಷಣ ನೀತಿ ತರುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾದರು. ಆಗಿನ ಮಾನವ ಸಂಪನ್ಮೂಲ ಸಚಿವೆಯಾದ ಶ್ರೀಮತಿ ಸ್ಮೃತಿ ಇರಾನಿ, ಶ್ರೀ ಪ್ರಕಾಶ್ ಜಾವಡೇಕರ್ ಹಾಗೂ ಶ್ರೀ ರಮೇಶ ಪೋಖ್ರಿಯಾಲ ನಿಶಾಂತ ಇವರ ಪಾರದರ್ಶಕ ಹಾಗೂ ಪ್ರಜಾಸತ್ತಾತ್ಮಕ ರೀತಿಯಲ್ಲಿ ಗಲ್ಲಿಯಿಂದ ದಿಲ್ಲಿಯವರೆಗೂ ಚರ್ಚೆ ನಡೆಸಿ ಕರಡು ತಯಾರಿಸಿ ಕರಡಿಗೆ ಲಕ್ಷಾಂತರ ಆಕ್ಷೇಪಣೆಗಳನ್ನು ಸ್ವೀಕರಿಸಿ ಕೊನೆಗೆ ಪರಿಪೂರ್ಣತೆಯತ್ತ ಪಯಣಿಸಲಿರುವ ಶಿಕ್ಷಣ ನೀತಿಯನ್ನು ಕೊಡಮಾಡಿದ್ದಾರೆ. ದೇಶದ ಹೆಮ್ಮೆಯ ವಿಜ್ಞಾನಿ ಕರಡು ರಾಷ್ಟ್ರೀಯ ಶಿಕ್ಷಣ ನೀತಿಯ ಸಮಿತಿಯ ಅಧ್ಯಕ್ಷರು ಪ್ರೊ. ಕಸ್ತೂರಿ ರಂಗನ್ ಅವರ ಕತೃತ್ವ, ನೇತೃತ್ವ ಹಾಗೂ ಅದಮ್ಯ ಚೇತನದ ಪ್ರತೀಕವಾಗಿರುವ ಪ್ರೊ. ಎಂ.ಕೆ ಶ್ರೀಧರ್‌ರವರನ್ನು ಒಳಗೊಂಡಂತೆ ಸಮಿತಿಯ ಸದಸ್ಯರುಗಳ ಹಾಗೂ ತೆರೆಮರೆಯಲ್ಲಿ ಶ್ರಮಿಸಿದ ಅಸಂಖ್ಯ ಶಿಕ್ಷಣ ತಜ್ಞರು, ಶಿಕ್ಷಣ ಪ್ರೇಮಿಗಳ ಕೊಡುಗೆಯಾಗಿ ರಾಷ್ಟ್ರೀಯ ಶಿಕ್ಷಣ ನೀತಿ ಇಂದು ಸಾಕಾರಗೊಳ್ಳುತ್ತಿದೆ.

ಬಹಳಷ್ಟು ಅಂತರರಾಷ್ಟ್ರೀಯ ಚರ್ಚೆಗೆ ಸನ್ನದ್ಧರಾಗುವ, ಸ್ಥಳೀಯ ಕೌಶಲ್ಯಗಳನ್ನು ಮೈಗೂಡಿಸಿಕೊಳ್ಳುವ ಮೌಲ್ಯ ಶಿಕ್ಷಣದ ಪಾವಿತ್ರ್ಯ ಹೊಂದಿದ ಶಿಕ್ಷಣ ನೀತಿಯಾಗಿ ಇದು ತನ್ನದೇ ಆದ ಸಕಾರಾತ್ಮಕವಾದ ಪರಿಣಾಮವನ್ನು ಮುಂದಿನ ದಶಕಗಳಲ್ಲಿ ಬೀರಲಿದೆ. ಈ ಶಿಕ್ಷಣ ನೀತಿಯ ಪೂರ್ವ ಪ್ರಾಥಮಿಕದಿಂದ ಉನ್ನತ ಶಿಕ್ಷಣದವರೆಗೂ ಬಹಳ ಸೂಕ್ಷ್ಮ ಸಂವೇದಿಯಾಗಿ ವಿಶ್ಲೇಷಿಸಿ ಕ್ರಿಯಾತ್ಮಕ ಕ್ರಮಗಳನ್ನು ಒಳಗೊಂಡಿದೆ. ಇಡಿ ದೇಶದಲ್ಲಿ 1986ರ ಶಿಕ್ಷಣ ನೀತಿಯ ನಂತರ ಬಹುದೊಡ್ಡ ಬದಲಾವಣೆ ಈ ನೀತಿಯ ಕಾರಣಕ್ಕಾಗಿ ಈ ದೇಶದಲ್ಲಿ ಬರಲಿದೆ. ಬಾಲ್ಯದ ಆರೈಕೆ ಹಾಗೂ 3ನೇ ವರ್ಷದಿಂದ ಶಿಕ್ಷಣ ಆರಂಭಿಸಿ ಪ್ರಾಥಮಿಕ ಶಿಕ್ಷಣದ ನಿಜವಾದ ಸವಾಲಾದ, ಅಕ್ಷರ ಜ್ಞಾನ, ಸಂಖ್ಯಾಜ್ಞಾನದ ಕುರಿತು ವಿಶೇಷತೆ ಮೆರೆದಿದೆ. ಶಿಕ್ಷಣದಲ್ಲಿ ತಂತ್ರಜ್ಞಾನ ಆಧಾರಿತ ವ್ಯವಸ್ಥೆಗೂ ಕೂಡ ಒತ್ತು ನೀಡಿದೆ. ವಿಶೇಷವಾಗಿ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣ ಶಾಸ್ತ್ರ ಹಾಗೂ ಪಠ್ಯಕ್ರಮ ದೃಷ್ಟಿಯಿಂದ 5+3+3+4 ಹೀಗೆ 3 ರಿಂದ 18ನೇ ಶಿಕ್ಷಣದವರೆಗೂ ವಿಶೇಷ ಪಠ್ಯಕ್ರಮ ಸಂರಚನೆಯನ್ನು ಮಾರ್ಪಡಿಸಿ ಸೂಚಿಸಲಾಗಿದೆ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮಲ್ಟಿಡಿಸಿಪ್ಲಿನರಿ ಕೋರ್ಸ್‌ಗಳನ್ನಾಗಿಸುವ ಹಾಗೂ ಹಲವು ಸ್ತರದ ಪ್ರವೇಶಾತಿ ಹಾಗೂ ನಿರ್ಗಮನದ ಅವಕಾಶಗಳನ್ನು ಕಲ್ಪಿಸಲಾಗಿದೆ. ರಾಜ್ಯಗಳೆಲ್ಲವು ಕೈ ಜೋಡಿಸಿದರೆ ಬರುವ ದಿನಗಳಲ್ಲಿ ಹೊಸ ಶಿಕ್ಷಣ ನೀತಿಯ ಪರಿಣಾಮ ಲಾಭದಾಯಕವಾಗಿ ಮುಂದಿನ ಜನಾಂಗಕ್ಕೆ ಪರಿಣಮಿಸಿದ ಭಾರತ ಭಾಗ್ಯ ವಿಧಾತವಾಗಲಿದೆ.

ಈ ಶಿಕ್ಷಣ ನೀತಿಯಲ್ಲಿ ಮೂಲ ತತ್ವಗಳು ತುಂಬಾ ಚೆನ್ನಾಗಿವೆ. ವೈವಿಧ್ಯತೆಯನ್ನು ಗೌರವಿಸುವ ಸ್ಥಾನೀಯತೆ ಇರುವ ಪಠ್ಯಕ್ರಮ, ಬೋಧನಾ ಕ್ರಮವನ್ನು ಹೊಂದಿದೆ. ಇದರ ಪರಿಣಾಮವಾಗಿ ಸ್ಥಾನೀಯ ಅಂಶಗಳೊಂದಿಗೆ ವೈವಿಧ್ಯತೆಯನ್ನು ಒಪ್ಪಿಕೊಳ್ಳುವ ಮಾನಸಿಕತೆಯನ್ನು ಈ ಶಿಕ್ಷಣ ನೀತಿ ಬೆಳೆಸುತ್ತದೆ. ಸಮಾನತೆ ಹಾಗೂ ಅಂತರ್‌ಗೊಳ್ಳುವಿಕೆಯ ಶಿಕ್ಷಣ ವ್ಯವಸ್ಥೆಯನ್ನು ಈ ಶಿಕ್ಷಣ ನೀತಿ ಪ್ರತಿಪಾದಿಸಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಸಮುದಾಯದ ಸಹಭಾಗಿತ್ವ, ಪ್ರೇರಣೆ ಹಾಗೂ ಸೌಲಭ್ಯಗಳ ಕಲ್ಪಿಸುವಿಕೆಗಾಗಿ ಲೋಕೋಪಕಾರ, ಖಾಸಗಿ ಹಾಗೂ ಸಮುದಾಯದ

## ರಾಜ್ಯ ಸರಕಾರಗಳ ಜವಾಬ್ದಾರಿ

**ಭಾರತದ ಸಂವಿಧಾನದಲ್ಲಿ ಶಿಕ್ಷಣ ಕುರಿತು ಕೇಂದ್ರ ಹೊಸ ಶಿಕ್ಷಣ ನೀತಿ ಸ್ವೀಕರಿಸಿದಾಗಲೂ ಕೂಡ ರಾಜ್ಯ ಸರಕಾರಗಳಿಗೆ ಅವರದೆಯಾಗಿರುವ ನಿರ್ಣಯದ ಹಕ್ಕು ಇದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ತನ್ನ ಕರ್ತವ್ಯವನ್ನು ಒಂದು ಹಂತದಲ್ಲಿ ನಿರ್ವಹಿಸಿದೆ. ಇದನ್ನು ಮುಂದುವರಿಸಿಕೊಂಡು ಹೋಗಬೇಕಾದ ಕೇಂದ್ರದೊಂದಿಗೆ ಕೈ ಜೋಡಿಸಿ ಶಿಕ್ಷಣ ಕ್ಷೇತ್ರಕ್ಕೆ ಲಾಭ ಮಾಡಿಕೊಡುವ ಹೊಣೆಗಾರಿಕೆ ರಾಜ್ಯ ಸರ್ಕಾರಗಳ ಮೇಲಿದೆ. ರಾಜಕಾರಣ, ವೈಚಾರಿಕ ಹಿನ್ನೆಲೆಗಳನ್ನು ಬದಿಗೊತ್ತಿ ಈ ಶಿಕ್ಷಣ ನೀತಿಯನ್ನು ಬಹು ವಿಶಾಲ ಮನೋಭಾವದೊಂದಿಗೆ ಸ್ವೀಕರಿಸಿ ಧನಾತ್ಮಕವಾಗಿ ಕಾರ್ಯನ್ವಯಗೊಳಿಸುವ ಜವಾಬ್ದಾರಿ ಶಿಕ್ಷಣ ಕ್ಷೇತ್ರದ ಪಾಲುದಾರರೆಲ್ಲ ಹೊತ್ತುಕೊಳ್ಳಬೇಕಾದ ಅಗತ್ಯವಿದೆ.**

ಪುಟ 5 ಕ್ಕೆ ➤

➢ ಪುಟ 4 ರಿಂದ.....

ಭಾಗವಹಿಸುವಿಕೆ ಈ ಶಿಕ್ಷಣ ನೀತಿಯಲ್ಲಿ ಒತ್ತುಕೊಡಲಾಗಿದೆ. ಮಕ್ಕಳಲ್ಲಿ ವಿಮರ್ಶಾತ್ಮಕ ಶಿಕ್ಷಣ ಚಿಂತನೆಗೆ ಹಾಗೂ ಸೃಜನಶೀಲತೆಗೆ ಒತ್ತು ಕೊಡುವ ತಾರ್ಕಿಕ ನಿರ್ಧಾರ ಹಾಗೂ ಹೊಸತನವನ್ನು ವಿದ್ಯಾರ್ಥಿಗಳನ್ನು ಹೊಂದುವಂತಾಗಲೂ ಈ ಶಿಕ್ಷಣ ನೀತಿ ಒತ್ತು ನೀಡಿದೆ. ಈಗಿರುವ ಪಠ್ಯಕ್ರಮದ ಪುಸ್ತಕ ಭಾರ ಕಡಿಮೆ ಮಾಡಲು ಶಿಕ್ಷಣ ನೀತಿ ಒಲವು ತೋರಿದ್ದು ವಿಶೇಷವಾಗಿ ಅತಿ ಹೆಚ್ಚು ಚರ್ಚೆಯಾಗುತ್ತಿರುವ ಭಾವ ಶಿಕ್ಷಣ ಕುರಿತು ರಾಷ್ಟ್ರೀಯ ನೀತಿ ಮೂರು ಅದ್ಭುತ ಸಂಗತಿಗಳನ್ನು ಹೇಳಿದ್ದು, ಮೊದಲನೆಯದಾಗಿ ಮಾತೃಭಾಷೆ, ಮನೆಯ ಭಾಷೆ, ರೂಡಿ ಭಾಷೆಯ ಕುರಿತು ಒಲವು ತೋರಿದ್ದು ಪ್ರಾಥಮಿಕ ಶಿಕ್ಷಣ ಐದನೆಯ ತರಗತಿಯವರೆಗೆ ಭಾಷೆ ಮಾಧ್ಯಮದ ಕುರಿತು ಈ ನೀತಿ ಒಂದು ಸ್ಪಷ್ಟತೆಯನ್ನು ಹೊಂದಿದ್ದು ಶಿಕ್ಷಣದ ಮಾಧ್ಯಮ ಐದನೆಯ ತರಗತಿಯವರೆಗೂ, ಅಗತ್ಯವಿದ್ದರೆ ಎಂಟು ಹಾಗೂ ಮುಂದೆಯೂ ಮಾತೃಭಾಷೆ, ಮನೆ ಅಥವಾ ಗೃಹ ಭಾಷೆ ಅಥವಾ ಸ್ಥಳೀಯ ಭಾಷೆ ಹೊಂದುವುದಕ್ಕೆ ಒಲವು ತೋರಲಾಗಿದೆ ಹಾಗೂ ಕನಿಷ್ಟ ಮೂರು ಭಾಷೆಗಳನ್ನು ಹೊಂದುವ ಅಧಿಕಾರವನ್ನು ಆಯಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಬಿಡಲಾಗಿದೆ. ಭಾರತೀಯ ಭಾಷೆಗಳ ಕುರಿತು ಪ್ರತಿ ವಿದ್ಯಾರ್ಥಿಗಳಿಗೆ ಚಟುವಟಿಕೆ ರೂಪದಲ್ಲಿ ಮಕ್ಕಳಿಗೆ ಅರ್ಥಮಾಡಿಸುವ ಹಾಗೂ ಸಾಮರ್ಥ್ಯ ಹೆಚ್ಚಿಸುವ ಭಾಷಾ ಸಾಮರ್ಥ್ಯದ ಪ್ರತೀಕವಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮಾನಸಿಕ ಹಾಗೂ ದೈಹಿಕ ಆರೋಗ್ಯ ಹಾಗೂ ಯೋಗಕ್ಷೇಮದ ದೃಷ್ಟಿಯಿಂದ ಒತ್ತು ನೀಡಿದ್ದು ಆರೋಗ್ಯ ಪೋಷಕಾಂಶ, ದೈಹಿಕ ಶಿಕ್ಷಣ ಸದೃಢತೆ ಮತ್ತು ಯೋಗಕ್ಷೇಮ ಕುರಿತು ಒತ್ತು ನೀಡಲಾಗಿದೆ. ಮಕ್ಕಳ ಆರೋಗ್ಯ ತಪಾಸಣೆ, ಶಾಲಾ ಬ್ಯಾಗ್ ಭಾರ ಕಡಿಮೆ ಮಾಡುವುದು, ಮಕ್ಕಳಲ್ಲಿ ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ



ಕೌಶಲ್ಯಗಳನ್ನು ವೃದ್ಧಿಸುವ ನಿಟ್ಟಿನಲ್ಲಿ ಶಾಲಾ ಹಂತದಲ್ಲಿಯೇ ಪಠ್ಯಕ್ರಮದಲ್ಲಿ ಸೇರಿಸುವ ಹಾಗೂ ತಯಾರು ಮಾಡುವ ಅಂಶಗಳನ್ನು ಒಳಪಡಿಸಲಾಗಿದೆ.

ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರು, ಉಪಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣದ ಜವಾಬ್ದಾರಿ ಹೊಂದಿರುವ ಡಾ. ಅಶ್ವತ್ಥನಾರಾಯಣ್‌ರವರು ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸಿರುವ ಸಮಿತಿಯ ಅಧ್ಯಕ್ಷರಾದ ಪ್ರೊ.ಕಸ್ತೂರಿ ರಂಗನ್‌ರವರ ಬಳಿ ತೆರಳಿ ಅವರಿಗೆ ಅಭಿನಂದಿಸಿದ್ದು ಅಭಿಮಾನದ ಸಂಗತಿ. ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರಾದ ಶ್ರೀ ಸುರೇಶ್‌ಕುಮಾರ್‌ರವರು ಪ್ರೊ. ಕಸ್ತೂರಿ ರಂಗನ್‌ರವರನ್ನು ಅಭಿನಂದಿಸಿ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ವೆಬ್‌ನಾರ್ ಮೂಲಕ ಚರ್ಚೆ ನಡೆಸಿದ್ದು, ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕರ್ನಾಟಕ ಪ್ರಥಮವಾಗಿ ಜಾರಿಗೊಳಿಸಿ, ಅದರ ಲಾಭ ಪಡೆಯುವ ವಿಶ್ವಾಸವನ್ನು ವ್ಯಕ್ತಪಡಿಸಿದ್ದು, ಇವೆಲ್ಲವನ್ನೂ ಗಮನಿಸಿದರೆ ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯ ಮುಂಚೂಣಿಯಲ್ಲಿದೆ. ●

# ಕ್ರಾಂತಿವೀರ ಆಜಾದರ ಒಂದಾಣೆ

ಕ್ರಾಂತಿಕಾರಿ ಚಂದ್ರಶೇಖರ ಆಜಾದರು ಸ್ವಲ್ಪ ಸಮಯ ಬುಂದೇಲಖಂಡದ ಒಂದು ಕಂಪೆನಿಯಲ್ಲಿ ಚಾಲಕನಾಗಿ ದುಡಿಯುತ್ತಿದ್ದರು. ಸರಿಯಾಗಿ ಊಟ ಮಾಡಲೂ ಹಣ ಸಾಲುತ್ತಿರಲಿಲ್ಲ. ಕೆಲವೊಮ್ಮೆ ಕಡಲೆಕಾಳು ತಿಂದು ಹಸಿವೆ ನೀಗಿಸಬೇಕಾಗುತ್ತಿತ್ತು.

ಒಂದು ದಿನ ಚಂದ್ರಶೇಖರ ಆಜಾದರ ಬಳಿ ಕೇವಲ ಒಂದಾಣೆ ಮಾತ್ರ ಉಳಿದಿತ್ತು. ಅಂದು ದಿನವಿಡೀ ಏನೂ ತಿನ್ನಲಿಲ್ಲ. ಹಸಿದ ಹೊಟ್ಟೆಯಲ್ಲೇ ವಾಹನ ಚಲಾಯಿಸಿದರು. ಸಂಜೆಯಾಗುವ ಹೊತ್ತಿಗೆ ಹಸಿವೆ ತಡೆಯಲಾರದೆ ಕಂಗಾಲಾದರು. ದೂರದಲ್ಲಿ ಕಡಲೆ ಮಾರುವವ ಕಂಡ. ಒಂದಾಣೆಗೆ ಹುರಿದ ಕಡಲೆ ಕೊಂಡುಕೊಂಡರು. ಕಡಲೆಕಾಳು ತಿನ್ನುತ್ತಾ ಹೋಗುತ್ತಿದ್ದರು.

ಸ್ವಲ್ಪದರಲ್ಲೇ ಆ ಕಡಲೆಕಾಳುಗಳ ಮಧ್ಯೆ ಒಂದಾಣೆಯ ಒಂದು ನಾಣ್ಯ ಕೈಗೆ ತಾಗಿತು; ಅಚ್ಚರಿಯಾಯಿತು. ನಾಳೆಗೆ ಈ ಒಂದಾಣೆಯಿಂದ ಸುಧಾರಿಸಬಹುದು. ನಾಡಿದ್ದು ಮತ್ತೇನಾದರೂ ಮಾಡಿದರಾಯಿತು ಎಂದುಕೊಂಡರು. ಆದರೆ ಮನಸ್ಸು ಕೇಳಲಿಲ್ಲ– ' ಈ ಒಂದಾಣೆ ನನ್ನದಲ್ಲವಲ್ಲ, ಇದು ನಾನು ಶ್ರಮಪಟ್ಟು ಸಂಪಾದಿಸಿದ್ದಲ್ಲ. ಆ ಕಡಲೆ ಮಾರುವವ ಗಡಿಬಿಡಿಯಲ್ಲಿ ಹೀಗೆ ಮಾಡಿದ್ದಾನೆ' ಎಂದು ಕೊಂಡು ಅವನಲ್ಲಿಗೆ ವಾಪಸ್ಸು ಹೋದರು. 'ಏನಣ್ಣಾ, ನೀನು ಒಂದಾಣೆಯ ಕಡಲೆಯನ್ನು ಕೊಟ್ಟು, ಅದರಲ್ಲಿ ಒಂದಾಣೆಯ ನಾಣ್ಯವನ್ನೂ ಹಾಕಿದ್ದೀಯಲ್ಲ. ಹೀಗೆ ಮಾಡಿದರೆ ನಿನಗೆ ನಷ್ಟವಾಗುವುದಿಲ್ಲವೇ?' ಎನ್ನುತ್ತಾ ಆ ಒಂದಾಣೆಯನ್ನು ಆತನ ಕೈಯಲ್ಲಿಟ್ಟು ಹೊರಟರು. ಕಡಲೆ ಮಾರುವವನು 'ಇಂಥವರೂ ಇದ್ದಾರೆಯೇ?' ಎಂದುಕೊಂಡು ದಂಗಾದ.

ಬಡತನದಲ್ಲಿದ್ದರೂ ಆಜಾದರು ಪ್ರಾಮಾಣಿಕತೆಯನ್ನು ಬಿಡಲಿಲ್ಲ.

# ಜ್ಞಾನಾರ್ಜನೆಗೆ ದಾರಿ ದೀಪಗಳು – ಭಾಗ 2



**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು

## ಅಗ್ರಹಾರಗಳು

ಕಳೆದ ಸಂಚಿಕೆಯಲ್ಲಿ ಜ್ಞಾನಾರ್ಜನೆಗೆ ದಾರಿದೀಪಗಳು ಮಾಲಿಕೆಯ ಮೊದಲ ಭಾಗದಲ್ಲಿ ಮಠಗಳು, ದೇವಸ್ಥಾನಗಳು ಯಾವ ರೀತಿಯಲ್ಲಿ ಜ್ಞಾನಪ್ರಸಾರದ ಕಾರ್ಯದಲ್ಲಿ ಪಾತ್ರ ವಹಿಸುತ್ತಿದ್ದುವು ಎಂಬುದನ್ನು ಗಮನಿಸಿದೆವು. ಈ ಸಂಚಿಕೆಯಲ್ಲಿ ಅಗ್ರಹಾರಗಳು ಮತ್ತು ಬ್ರಹ್ಮಪುರಿಗಳ ಬಗ್ಗೆ ಒಂದಷ್ಟು ಮಾಹಿತಿಗಳನ್ನು ಹಂಚಿಕೊಳ್ಳುವ ಪ್ರಯತ್ನವಿದು.

ಅಗ್ರಹಾರಗಳ ಪರಿಚಯವನ್ನು ಅನೇಕ ಶಾಸನಗಳು ಮಾಡಿ ಕೊಡುತ್ತವೆ. ಕ್ರಿ.ಶ 1091ರ ಶಾಸನದಲ್ಲಿ ಉಲ್ಲೇಖಿತವಾಗಿರುವಂತೆ ಶಿವಮೊಗ್ಗ ಜಿಲ್ಲೆಯ ತಾಳಗುಂದ ಅಗ್ರಹಾರವೇ ನಮ್ಮಲ್ಲಿನ ಅತ್ಯಂತ ಪ್ರಾಚೀನ ಅಗ್ರಹಾರಗಳಲ್ಲಿ ಒಂದೆಂದು ತಿಳಿದುಬರುತ್ತದೆ. ಇದನ್ನು ಸ್ಥಾಪಿಸಿದವನು, ಕದಂಬರ ಮಯೂರ ಶರ್ಮನ ಪೂರ್ವಿಕರಾದ ಮುಕ್ಕಣ್ಣ ಕದಂಬರು. ಅವರು ಉತ್ತರದ 'ಅಹಿಚ್ಛತ್ರ' ಎಂಬ ಅಗ್ರಹಾರದಿಂದ 32 ಬ್ರಾಹ್ಮಣರ ಕುಟುಂಬಗಳನ್ನು ಕರೆದುಕೊಂಡುಬಂದು, ತಾಲಗುಂದದ ಅಗ್ರಹಾರದಲ್ಲಿ ನೆಲೆಸುವಂತೆ ಮಾಡಿದ್ದರು. ಅವರೆಲ್ಲರೂ ವೇದಗಳು, ವೇದಾಂಗಗಳು ಮತ್ತು ಕಾವ್ಯಮೀಮಾಂಸೆ ಮತ್ತು ತರ್ಕದ ಆರು ಪದ್ಧತಿಗಳು, ಸ್ಮೃತಿಗಳು, ಪುರಾಣಗಳು ಮತ್ತು ನಾಟಕ ಕಲೆಗಳಲ್ಲಿಯೂ ಪರಿಣತರಾಗಿರುತ್ತಿದ್ದರು.

ಮೊದಲನೆ ಕಾದಂಬರಿಗೆ ತಾಳಗುಂದ ಹೇಗೋ ಹಾಗೆ ಮೊದಲಿನ ಚಾಲುಕ್ಯರಿಗೆ ಬಾದಾಮಿ ಪ್ರಮುಖವಾದದ್ದು. ಶಾಸನದಲ್ಲಿ ಬರುವ ವರ್ಣನೆಯ ಪ್ರಕಾರ ಅದು ಕೂಡ ಒಂದು ಶಿಕ್ಷಣದ ಕೇಂದ್ರದಂತೆ ಕಾರ್ಯನಿರ್ವಹಿಸುತ್ತಿತ್ತೆಂದು ತಿಳಿಯುತ್ತದೆ.

ಕ್ರಿ.ಶ 699ರ ಶಾಸನದಂತೆ ವಾತಾಪಿ ಅಥವಾ ಬಾದಾಮಿಯನ್ನು 'ಅಧಿಷ್ಠಾನ' ಅಂದರೆ ಒಂದು ಧಾರ್ಮಿಕ ಹಾಗೂ ವೇದಶಿಕ್ಷಣ ಕೇಂದ್ರವೆಂದು ಕರೆಯಲಾಗಿತ್ತು. ಅದು ಸಾವಿರಾರು ಉತ್ತಮೋತ್ತಮರಾದ ದ್ವಿಜರಿಂದ ಶೋಭಿತವಾಗಿದ್ದಲ್ಲದೆ ಅವರೆಲ್ಲರೂ ಸಕಲ ವಿದ್ಯಾಪಾರಂಗತರಾಗಿ ಅಂದರೆ ಚತುರ್ದಶ ಶಾಸ್ತ್ರಗಳನ್ನು ತಿಳಿದವರಾಗಿದ್ದರೆಂದು ಶಾಸನವು ಈ ವಿಚಾರವನ್ನು ಪುಷ್ಟೀಕರಿಸುತ್ತ ಆ ವಿದ್ಯಾಕೇಂದ್ರವನ್ನು ಹೊಂದಿದ್ದ ಸ್ಥಳದಲ್ಲಿ ಚತುರ್ವೇದಗಳಲ್ಲಿ ಪಾರಂಗತರಾದ 200 ಮಂದಿ ವಿದ್ವಾಂಸರಿದ್ದರೆಂದು ತಿಳಿಸುತ್ತದೆ.

ಬಾದಾಮಿಯ ಹಾಗೆಯೇ ಮೊದಲಿನ ಮತ್ತು ಅನಂತರದ ಚಾಲುಕ್ಯರ ಕಾಲದ ಮತ್ತೊಂದು ಜ್ಞಾನಕೇಂದ್ರವೆಂದರೆ ಐಹೊಳೆ. ಎಂಟು ಅಥವಾ ಒಂಬತ್ತನೇ ಶತಮಾನದ ಶಾಸನವೊಂದರಲ್ಲಿ ಬೆಣ್ಣಮ್ಮ ಸೋಮಯಾಜಿ ಎಂಬವರು ಐಹೊಳೆಯ 500 ಚತುರ್ವೇದಿಗಳ ತಂಡಕ್ಕೆ ದತ್ತಿಯನ್ನು ನೀಡಿದ್ದಾಗಿ ಹೇಳಿದೆ. ಇದರಿಂದ ಐಹೊಳೆಯು 500 ಮಂದಿ ಮಹಾ ವಿದ್ವಾಂಸರ ಒಂದು ಅಗ್ರಹಾರವಾಗಿತ್ತೆಂದು ಊಹಿಸಬಹುದಾಗಿದೆ.



ರಾಷ್ಟ್ರಕೂಟರ ಕಾಲದ ಅತ್ಯಂತ ಪ್ರಮುಖವಾದ ಅಗ್ರಹಾರವೆಂದರೆ ಬಿಜಾಪುರ ಜಿಲ್ಲೆಯ ಸಾಲೋಟಗಿ. ಕ್ರಿ.ಶ 945ರಲ್ಲಿ ಮೂರನೆ ಕೃಷ್ಣರಾಜನ ಮುಖ್ಯಮಂತ್ರಿಯಾದ ನಾರಾಯಣ ಎಂಬುವನು ಅಲ್ಲಿ ವಿಶಾಲವೂ, ಸುಂದರವೂ ಆದ ಶಾಲೆಯೊಂದನ್ನು ಕಟ್ಟಿಸಿದ್ದನು. ಅಲ್ಲಿ ನಾಡಿನ ಅನೇಕ ವಿದ್ವಾಂಸರಿದ್ದರು. ಅವರ ಸಂರಕ್ಷಣೆಗೆ ಸಾಕಷ್ಟು ಭೂಮಿಯನ್ನು ಒದಗಿಸಲಾಗಿತ್ತು. ಹಳ್ಳಿಯ ಮುಖ್ಯಸ್ಥನು ಹಾಗೂ ಗಣ್ಯರು ಸೇರಿ ಆ ವಿದ್ವಾಂಸರಿಗೆಲ್ಲ ಭೂಮಿಯನ್ನೂ, ಸುಸಜ್ಜಿತ ಮನೆಗಳನ್ನೂ ಒದಗಿಸಿಕೊಟ್ಟರೆಂದು ತಿಳಿದುಬರುತ್ತದೆ. ಈ ಎಲ್ಲ ದಾನಗಳು ತೆರಿಗೆಗಳಿಂದ ವಿನಾಯಿತಿಯನ್ನೂ ಪಡೆದಿದ್ದುವು. ಊರಿನಲ್ಲಿ ಮದುವೆ, ಮುಂಜಿ ಮುಂತಾದ ಸಮಾರಂಭಗಳಲ್ಲಿ ಆ ವಿದ್ವಾಂಸರಿಗೆ ಕಾಣಿಕೆಗಳನ್ನು ಕೊಟ್ಟು ಗೌರವಿಸುತ್ತಿದ್ದರು. ಅಗ್ರಹಾರದಲ್ಲಿ ಯಾರೇ ಸಮಾರಂಭ ಮಾಡಿ ಔತಣಕೂಟವನ್ನು ಏರ್ಪಡಿಸಿದಾಗ ಆ ವಿದ್ವಾಂಸರನ್ನು ಕರೆಯಬೇಕಾಗಿತ್ತು. ಶಾಲೆಯ ಶಿಕ್ಷಕರಿಗೆ ಕಂದಾಯರಹಿತವಾಗಿದ್ದ ಒಂದಷ್ಟು ಭೂಮಿಯನ್ನೂ, ವಾಸಿಸಲು ಅದೇ ನಿಬಂಧನೆಯಂತೆ ಒಂದು ಮನೆಯನ್ನೂ ಕೊಡುತ್ತಿದ್ದರು.

ಗದುಗಿನ ಬಳಿಯಲ್ಲಿರುವ 'ಉಮ್ಮಚಿಗೆ' ಎಂಬಲ್ಲಿ ಒಂದು ಅಗ್ರಹಾರವನ್ನು ಕೊನೆಯ ಚಾಲುಕ್ಯರ ಕಾಲದಲ್ಲಿ ಸ್ಥಾಪಿಸಲಾಯಿತು. ಅಲ್ಲಿ ಒಂದು ಮಹಾಪಾಠಶಾಲೆ ಮತ್ತು ಅದಕ್ಕೇ ಸೇರಿದಂತೆ ಒಂದು ವಿದ್ಯಾರ್ಥಿನಿಲಯವೂ ಇತ್ತು. ಅಲ್ಲಿ ಹೆಚ್ಚಿನ ಶಿಕ್ಷಣ ನೀಡುತ್ತಿದ್ದ 'ಭಟ್ಟ' ಅಥವಾ ಪ್ರಾಧ್ಯಾಪಕರಿಗೆ

ಪುಟ 7 ಕ್ಕೆ ➤

➢ ಪುಟ 6 ರಿಂದ.....

ಭೂಮಿ ಮತ್ತು ಒಂದು ಮನೆಯ ನಿವೇಶನವನ್ನೂ ಕೊಡಲಾಗಿತ್ತು. ಅವರ ಶಿಷ್ಯರಿಗೂ ಕೂಡ ಇಂತಿಷ್ಟು ಎಂದು ಭೂಮಿಯನ್ನು ಕೊಡಲಾಗುತ್ತಿತ್ತು. ಸರ್ವ ಸಾಮಾನ್ಯ ಶಿಕ್ಷಣವನ್ನು 'ಅಕ್ಕರಿಗೆ' ಅಥವಾ 'ಅಕ್ಷಕ ಬೋಧಕ' ಎಂಬವರು ಕೊಡುತ್ತಿದ್ದರು. ಅವರು ಗಣಿತಶಾಸ್ತ್ರ, ಖಗೋಳಶಾಸ್ತ್ರ, ಛಂದಸ್ಸು, ಕಾವ್ಯ ಮುಂತಾದವುಗಳಲ್ಲಿ ರಚನಕಾರರೂ, ಬೋಧಕರೂ ಆಗಿರುತ್ತಿದ್ದರು. ವ್ಯಾಕರಣ ಶಾಸ್ತ್ರದಲ್ಲಿಯೂ ಪ್ರವೀಣರಾಗಿರುತ್ತಿದ್ದರು. ಅವರು ಶಿಷ್ಯರಿಗೆ ಪಾಠ ಹೇಳಿಕೊಡುವುದರ ಜೊತೆಗೆ ದಿನಕ್ಕೆ ಒಂದು ಊಟವನ್ನೂ ನೀಡಬೇಕಿತ್ತು. ಅಲ್ಲದೆ, ಪ್ರತಿವರ್ಷವೂ ಅವರಿಗೆ ವಸ್ತ್ರಗಳನ್ನು ತೆಗೆದುಕೊಡಬೇಕಾಗಿತ್ತು.

ಇನ್ನೂ ಅನೇಕ ಅಗ್ರಹಾರಗಳ ಉದಾಹರಣೆಗಳೆಂದರೆ, ಮುಖ್ಯವಾಗಿ ಬೆಳಗಾಂ ಜಿಲ್ಲೆಯ 'ದೇಗಾಂವೆ' ಎಂಬ ಅಗ್ರಹಾರ. ಇದೊಂದು ಆದರ್ಶಪ್ರಾಯವಾದ ಅಗ್ರಹಾರ, ಇದನ್ನು ಸ್ಥಾಪಿಸಲು ಮೊದಲ ಹೆಜ್ಜೆಯಿಟ್ಟವಳು ಕದಂಬ ರಾಜ್ಯದ ದೊರೆಯಾದ ಶಿವಚಿತ್ತನೆಯ ರಾಣಿಯಾದ ಕಮಲಾದೇವಿ. ಈ ಅಗ್ರಹಾರವನ್ನೂ ಅವಳು ದಾನಮಾಡಬೇಕೆಂದಿದ್ದ ಬ್ರಾಹ್ಮಣರೆಲ್ಲರೂ ಇಲ್ಲಿ ವೇದಗಳು, ವೇದಾಂಗಗಳು, ನ್ಯಾಯ, ಮೀಮಾಂಸೆ, ಸಂಖ್ಯಾ, ಯೋಗ, ವೇದಾಂತ, ಸ್ಮೃತಿ, ಇತಿಹಾಸ, ಪುರಾಣ ಮತ್ತು ಖಗೋಳ ಶಾಸ್ತ್ರಗಳ ಪೂರ್ಣ ಪರಿಚಯವನ್ನು ಹೊಂದಿದವರಾಗಿರುತ್ತಿದ್ದರು. ವ್ಯಾಸಂಗ ಮತ್ತು ಬೋಧನೆಯಲ್ಲಿ ಪರಿಣತರಾಗಿರುತ್ತಿದ್ದರು. ಅವಳು ತನ್ನ ಗಂಡನು ರಾಜಸಭೆಯಲ್ಲಿದ್ದಾಗ ತನ್ನ ಅಭಿಲಾಷೆಯನ್ನು ಹೀಗೆ ಪ್ರಕಟಪಡಿಸಿದ್ದಳು– "ನಾನು ದೇಗಾಂವೆ ಅಗ್ರಹಾರದ ಬ್ರಾಹ್ಮಣರಿಗೆ ದಾನಮಾಡಬೇಕೆಂದು ಇಚ್ಛಿಸುತ್ತೇನೆ. ಇದನ್ನು ಕೇಳಿದ ದೊರೆಯು ತನ್ನ ಮಂತ್ರಿಗಳೊಡನೆ ಸಮಾಲೋಚಿಸಿ ರಾಣಿಯ ಬೇಡಿಕೆಯನ್ನು ಗೌರವಿಸಿ ತನ್ನ ಒಪ್ಪಿಗೆಯನ್ನು ಕೊಟ್ಟು ತಾನೇ ಪ್ರತಿಯೊಬ್ಬ ಬ್ರಾಹ್ಮಣನ ವಿದ್ವತ್ತನ್ನು ಪರೀಕ್ಷಿಸಿ ತೀರ್ಮಾನಕ್ಕೆ ಬಂದನೆಂದೂ ತಿಳಿದುಬರುತ್ತದೆ.

ಪ್ರತಿಯೊಬ್ಬ ಭಟ್ಟೋಪಾಧ್ಯಾಯರಿಗೆ, ಸೂತ್ರಗಳ ವಿವರಣೆ ನೀಡಿದವರಿಗೆ, ಋಗ್ವೇದವನ್ನು ಬೋಧಿಸುವವರಿಗೆ ಯಜುರ್ವೇದ ಬೋಧಿಸುವವರಿಗೆ, ಮಕ್ಕಳಿಗೆ ಶಿಕ್ಷಣ ನೀಡುವವರಿಗೆ ಕುಡಿಯುವ ನೀರಿನ ಹಂಚಿಕೆಗಾಗಿ, ಭೋಜನಶಾಲೆಯ ಖರ್ಚಿಗಾಗಿ, ಮೂರು ದೇವಸ್ಥಾನಗಳ ಸೇವೆಗಳಿಗಾಗಿ– ಹೀಗೆ ವಿಂಗಡಣೆಮಾಡಿ ಬೇರೆ ಬೇರೆ ಪ್ರಮಾಣದಲ್ಲಿ ದಾನವನ್ನು ನೀಡಿದ್ದಾಗಿ ತಿಳಿದುಬರುತ್ತದೆ.

ಈ ಎಲ್ಲ ಅಂಶಗಳಿಂದ ಶಿಕ್ಷಣವೆಂಬುದಕ್ಕೆ ಆಳುವವರು ಮಾತ್ರವಲ್ಲದೆ ಗ್ರಾಮಗಳ ಮುಖಂಡರು, ಗಣ್ಯರು ಎಲ್ಲರೂ ಮಹತ್ತ್ವವನ್ನು ನೀಡುತ್ತಿದ್ದರೆಂಬುದು ಅರಿವಾಗುತ್ತದೆ.

## ಬ್ರಹ್ಮಪುರಿಗಳು

ಬ್ರಹ್ಮಪುರಿಗಳು ಒಂದು ಪಟ್ಟಣದ ಅಥವಾ ನಗರದ ಒಂದು ಭಾಗವೇ ಆಗಿರುತ್ತಿದ್ದವು. ಅವು ಉಚ್ಚ ಶಿಕ್ಷಣ ಕೇಂದ್ರಗಳಾಗಿರುತ್ತಿದ್ದವು. ಬೆಳಗಾವಿ (ಅಂದಿನ ಬಳ್ಳಿಗಾಮೆ) ಬಳಿ ಸಿಕ್ಕಿದ ಶಾಸನವು ಬ್ರಹ್ಮಪುರಿಗಳು ಹೇಗೆ ಅಸ್ತಿತ್ವಕ್ಕೆ ಬಂದುವು ಎಂಬುದನ್ನು ವಿವರಿಸುತ್ತದೆ. ಬನವಾಸಿಯ ಪ್ರಾಂತಾಧಿಕಾರಿ ಯಾಗಿದ್ದು, ಬಳ್ಳಿಗಾವೆಯಲ್ಲಿ ತನ್ನ ನಿವಾಸವೊಂದನ್ನು ಹೊಂದಿದ್ದ ಕೇಶವದೇವನು ಬಳ್ಳಿಗಾವೆಯಲ್ಲಿಯೇ ಬ್ರಹ್ಮಪುರಿಯನ್ನು ಸ್ಥಾಪಿಸಿದನೆಂದು ತಿಳಿದುಬರುತ್ತದೆ. ಆ ಬ್ರಹ್ಮಪುರಿಯಲ್ಲಿ ಸಕಲ ವಿದ್ಯಾಸಂಪನ್ನರಾಗಿದ್ದ 38 ಮಂದಿ ಬ್ರಾಹ್ಮಣರು ಇದ್ದರು. ಅವರೆಲ್ಲರೂ ಅನೇಕ ಪುರಾಣಗಳು, ಸ್ಮೃತಿಗಳು, ಕಾವ್ಯಗಳು, ಭಾಷೆಗಳು ಮತ್ತು ನಿಘಂಟುಗಳು, ನಾಟಕಗಳು ಎಲ್ಲದರಲ್ಲಿಯೂ ಪರಿಣತಿ ಹೊಂದಿದ್ದರು. ಅಲ್ಲದೆ, ಭಾಷಾಸಂಪನ್ನರಾಗಿದ್ದು ಚತುರವಾಗ್ಮಿಗಳೂ ಆಗಿರುತ್ತಿದ್ದರು. ತಮ್ಮ ಪಾಂಡಿತ್ಯದ ಮೂಲಕ ಹಲವಾರು ಕವಿಗಳು, ಭಾಷಾಪ್ರವೀಣರು, ವಾಗ್ಮಿಗಳು ಮತ್ತು ಪಂಡಿತರಿಗೆ ಆಧಾರವಾಗಿದ್ದು, ಪ್ರೇರಕ ಶಕ್ತಿಯಾಗಿದ್ದರು. ಶಿಲಾಶಾಸನಗಳನ್ನು ಸಹ ಓದಿ ಗ್ರಹಿಸುವ ಶಕ್ತಿ ಕೂಡ ಹೊಂದಿದ್ದರು.

ಸಮಾಜದಲ್ಲಿ ಜ್ಞಾನಪ್ರಸಾರ ಮಾಡುವ ಗುರುತರವಾದ ಜವಾಬ್ದಾರಿಯನ್ನು ಹೊಂದಿದ್ದ ಆ ವಿದ್ವಾಂಸರನ್ನು ಸಕಲ ಸೌಲಭ್ಯಗಳನ್ನು ನೀಡಿ ಗೌರವಿಸುವುದು ಸಮಾಜದ ಕರ್ತವ್ಯವೂ ಆಗಿದ್ದು, ಅದು ಕೂಡ ಸಮರ್ಥವಾಗಿ ನಿರ್ವಹಣೆಯಾಗುತ್ತಿತ್ತು. ಅವರೆಲ್ಲರ ವಾಸ್ತವ್ಯದ ವ್ಯವಸ್ಥೆ ಮಾಡಲು ಬಳ್ಳಿಗಾವೆಯ ದಕ್ಷಿಣ ಭಾಗದಲ್ಲಿ ಫಲವತ್ತಾದ ಭೂಮಿಯನ್ನು ನೀಡಲಾಗಿತ್ತು. ಅಲ್ಲಿ ಎಲ್ಲ ಫಲಪುಷ್ಪಗಳು ಬೆಳೆಯುತ್ತಿದ್ದುವಲ್ಲದೆ, ವಸತಿ ನಿರ್ಮಾಣಕ್ಕೆ ಸೂಕ್ತವಾದ ಸಮತಟ್ಟಾದ ಭೂಮಿಯೂ ಇತ್ತು. ಅಲ್ಲಿ ವಿಶಾಲವಾದ ಮನೆಗಳನ್ನು ಕಟ್ಟಿಸಲಾಗಿದ್ದು. ಅವುಗಳಲ್ಲಿ ಅನೇಕ ಕೊಠಡಿಗಳ ಸೌಕರ್ಯವನ್ನೂ ಮಾಡಿಕೊಡಲಾಗಿತ್ತು. ಗೃಹಕೃತ್ಯದ ಅಗತ್ಯಕ್ಕೆ ತಕ್ಕಂತೆ ಎಲ್ಲ ಪಾತ್ರೆ, ಪರಿಕರಗಳನ್ನು ಒದಗಿಸಿ ಆ ವಿದ್ವಾಂಸರಿಗೆ ದಾನ ನೀಡುಲಾಗುತ್ತಿತ್ತು. ಹೀಗೆ, ಸರ್ವಸಿದ್ಧವಾದ ಮನೆಗಳಲ್ಲಿ ವಾಸಿಸುತ್ತ ಆ ವಿದ್ವಾಂಸರು ತಮ್ಮ ಕರ್ತವ್ಯವಾದ ಜ್ಞಾನಬೋಧನೆಯ ಕಾರ್ಯವನ್ನು ಆನಂದದಿಂದ ಮಾಡುತ್ತಿದ್ದರು. ಇಂತಹ ಬ್ರಹ್ಮಪುರಿಗಳು ವಿಕ್ರಮಪುರ, ತಲಕಾಡು, ಕೆಳದಿ ಮುಂತಾದ ಕಡೆಗಳಲ್ಲಿ ಇದ್ದವೆಂದು ಶಾಸನಗಳ ಆಧಾರದಿಂದ ತಿಳಿದುಬರುತ್ತದೆ.

ಶಾಸನಗಳಲ್ಲಿ ಶಿಕ್ಷಣಕ್ಕಾಗಿ ಸಮಾಜವು ಎಷ್ಟು ಪ್ರಾಮುಖ್ಯ ನೀಡುತ್ತಿತ್ತು ಎಂಬುದು ಅರ್ಥವಾಗುತ್ತದೆ. ಶಿಕ್ಷಣಕ್ಕೆ ನೀಡಿದ ಪ್ರೋತ್ಸಾಹದಿಂದ ಅದರ ದಾನಿಗಳಿಗೆ ಹೇಗೆ ಪುಣ್ಯಪ್ರಾಪ್ತಿಯಾಗುತ್ತಿತ್ತೆಂದು ಶಾಸನವೊಂದರಲ್ಲಿ ಈ ರೀತಿ ತಿಳಿಸಿದೆ. ಪುಣ್ಯತೀರ್ಥಗಳಲ್ಲಿ ಮೀಯಲು ಮಾಡುವ ತೀರ್ಥಯಾತ್ರೆಗಳಿಂದ ಯಾವ ಪುಣ್ಯ ಲಭಿಸುತ್ತದೋ, ಯೋಗಗಳನ್ನು ಮಾಡುವುದರಿಂದ ಯಾವ ಪುಣ್ಯವು ಲಭಿಸುತ್ತದೋ ಅದಕ್ಕಿಂತ ಕೋಟಿಗಟ್ಟಲೆಯಷ್ಟು ಪುಣ್ಯವು ಶಿಕ್ಷಣಕ್ಕೆ ಕೊಡುಗೆ ನೀಡುವುದರಿಂದ ದೊರೆಯುತ್ತದೆಂದು ತಿಳಿಸಿದೆ. ಈ ಕಾರಣದಿಂದ ಶಿಕ್ಷಣದ ದತ್ತಿಗಾಗಿ ಮಾಡೋ ಕೋರಿಕೆಗೆ ಯಾವಾಗಲೂ ಮನ್ನಣೆ ಇರುತ್ತಿತ್ತೆಂಬ ಅಂಶವು ತಿಳಿಯುತ್ತದೆ.

ಮುಂದುವರಿಯುತ್ತದೆ...

(ಮುಂದಿನ ಭಾಗದಲ್ಲಿ –"ಮಹಿಳಾ ಶಿಕ್ಷಣ ಮತ್ತು ವೃತ್ತಿಶಿಕ್ಷಣ"

# ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತೀಯ ಮಹಿಳೆಯರ ಪಾತ್ರ

**ಶ್ರೀಮತಿ ಬಿ ಎಸ್ ಹೇಮಲತ**
ಕನ್ನಡ ಉಪನ್ಯಾಸಕಿ
ಬೆಂಗಳೂರು

ಬ್ರಿಟಿಷರ ಆಳ್ವಿಕೆಯಿಂದ ರೋಸಿ ಹೋಗಿದ್ದ ಭಾರತೀಯರು ಬ್ರಿಟಿಷರ ವಿರುದ್ಧ ತಿರುಗಿಬಿದ್ದು ಗುಲಾಮತನದಿಂದ ಸ್ವತಂತ್ರರಾಗಲು ನಿರ್ಧರಿಸಿ ಹೋರಾಟ ಪ್ರಾರಂಭಿಸಿದರು. ಇಂತಹ ಹೋರಾಟದಲ್ಲಿ ಅನೇಕ ಪುರುಷರು, ಮಹಿಳೆಯರು, ಮಕ್ಕಳು ಭಾಗವಹಿಸಿ ದೊಡ್ಡ ಕ್ರಾಂತಿಯನ್ನೇ ಪ್ರಾರಂಭಿಸಿದರು, ಅದೇ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂಬ ಸಂಗ್ರಾಮ.

ಇಂತಹ ಮಹೋನ್ನತ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾವಿರಾರು ಮಹಿಳೆಯರು ಪುರುಷರಷ್ಟೇ ಪ್ರಮುಖ ಪಾತ್ರ ವಹಿಸಿದರು. ಅಂತಹ ಸಾವಿರಾರು ದೇಶಭಕ್ತಿ, ತ್ಯಾಗ, ಬಲಿದಾನ, ಹೋರಾಟ ಮತ್ತು ಸಾಮಾಜಿಕ ಪ್ರಜ್ಞೆಯಿಂದ ಮೆರೆದ ಧೀಮಂತ, ದಿಟ್ಟ ಮಹಿಳೆಯರನ್ನು ಮೆಚ್ಚಿಕೊಳ್ಳುತ್ತಾ, ಅವರನ್ನೇ ಸ್ಫೂರ್ತಿಯಾಗಿ ಇಂದಿನ ತಲೆಮಾರಿನವರು ಅವರ ವಿಷಯಗಳನ್ನು ತಿಳಿದು, ಅವರನ್ನು ಆದರ್ಶವಾಗಿರಿಸಿಕೊಂಡು ದೇಶಭಕ್ತಿ ಮರೆಯಲಿ ಎಂದು ಆಶಿಸುತ್ತಾ ಕೆಲವು ಧೀಮಂತ ದಿಟ್ಟಮಹಿಳೆಯರ ಪರಿಚಯ ಮಾಡಿಕೊಳ್ಳೋಣ.

## ಝಾನ್ಸಿ ರಾಣಿ ಲಕ್ಷ್ಮೀಬಾಯಿ– 1828– 1858

ಲಕ್ಷ್ಮೀಬಾಯಿ ಇವರ ತೌರೂರಿನ ಹೆಸರು ಮಣಿಕರ್ಣಿಕಾ ತಾಂಬೆ. ಝಾನ್ಸಿಯ ರಾಜನನ್ನು ವಿವಾಹವಾದ ನಂತರ ಝಾನ್ಸಿರಾಣಿ ಲಕ್ಷ್ಮೀಬಾಯಿ ಎಂಬ ಹೆಸರು ಪಡೆದರು. ರಾಜನ ನಿಧನಾನಂತರ ಒಂದು ಮಗುವನ್ನು ದತ್ತು ಪಡೆದು ತಾವೇ ರಾಜ್ಯಭಾರ ಮಾಡುತ್ತಿದ್ದರು. ಬ್ರಿಟಿಷ್ ವೈಸ್‌ರಾಯ್ ಲಾರ್ಡ್‌ಡಾಲ್ ಹೌಸಿಯ 'ದತ್ತು ಮಕ್ಕಳಿಗೆ ರಾಜ್ಯದ ಹಕ್ಕಿಲ್ಲ'ವೆಂಬ ಕಾಯಿದೆಯನ್ನು ವಿರೋಧಿಸಿ ಬ್ರಿಟಿಷ್‌ರ ವಿರುದ್ಧ ಯುದ್ಧ ಘೋಷಿಸಿದರು. ತಾಂತ್ಯಾಟೋಪಿಯವರ ನಾಯಕತ್ವದಲ್ಲಿ ಹೋರಾಟ ಪ್ರಾರಂಭವಾಯ್ತು. ಸ್ವತಃ ತಾವೇ ತಮ್ಮ ದತ್ತು ಪುತ್ರನನ್ನು ಬೆನ್ನಿಗೆ ಕಟ್ಟಿಕೊಂಡು ರಣಾಂಗಣಕ್ಕಿಳಿದು ರಣಚಂಡಿಯಂತೆ ಹೋರಾಡಿದರು. 1958ರ ಜೂನ್ 18 ರಂದು ಅವರು ವೀರಮರಣವನ್ನು ಹೊಂದಿದರು. ಅವರು ಸ್ವರ್ಗಸ್ಥರಾಗಿ 162 ವರ್ಷಗಳಾದರೂ ಇಂದಿಗೂ ಝಾನ್ಸಿಯ ಪ್ರಾಂತದಲ್ಲಿ ಅವರ ಶೌರ್ಯದ ಗುಣಗಾನ ಜಾನಪದ ಹಾಡುಗಳ ಮೂಲಕ ಪ್ರಚಾರದಲ್ಲಿದೆ.

## ಸರೋಜಿನಿ ನಾಯ್ಡು : 1879–1949

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ

ಪುಟ 9 ಕ್ಕೆ ➤



➢ ಪುಟ 8 ರಿಂದ.....

ಪ್ರಮುಖರಲ್ಲಿ ಭಾರತದ ಕೋಗಿಲೆ ಎಂದು ಬಿರಿದಾಂಕಿತರಾದ ಕವಿಯತ್ರಿ ದಿಟ್ಟ ಧೀಮಂತ ಮಹಿಳೆ ಉರ್ದು, ತೆಲುಗು, ಇಂಗ್ಲೀಷ್, ಪರ್ಷಿಯಾ ಹಾಗೂ ಬಂಗಾಲಿ ಭಾಷೆಯನ್ನು ನಿರರ್ಗಳವಾಗಿ ಮಾತನಾಡುತ್ತಿದ್ದರು. ಗುರು ಗೋಪಾಲಕೃಷ್ಣ ಗೋಖಲೆ ಯವರೊಂದಿಗೆ ಚಳುವಳಿಗಳಲ್ಲಿ ಭಾಗವಹಿಸುತ್ತಿದ್ದರು. 1925ರಲ್ಲಿ ಕಾನ್ಪುರದಲ್ಲಿ ನಡೆದ ಭಾರತೀಯ ಮಹಿಳಾ ಅಧಿವೇಶನದಲ್ಲಿ ಅಧ್ಯಕ್ಷೆಯಾಗಿದ್ದ ಪ್ರಥಮ ಭಾರತೀಯ ಮಹಿಳೆ ಎಂದು ಪ್ರಖ್ಯಾತರಾದ ಧೀಮಂತ ಮಹಿಳೆ, 1949 ಮಾರ್ಚ್ 29ರಂದು ಮರಣ ಹೊಂದಿದರು.

## ರಾಜಕುಮಾರಿ ಅಮೃತ್‌ಕೌರ್ –1839–1964

ಸ್ವಾತಂತ್ರ ಸಂಗ್ರಾಮದಲ್ಲಿ ಮಹಾತ್ಮಗಾಂಧಿಯವರ ಸಹಭಾಗಿತ್ವದಲ್ಲಿ ಚಳುವಳಿಗೆ ಇಳಿದ ದಿಟ್ಟೆ. 1927ರಲ್ಲಿ ಅಖಿಲ ಭಾರತ ಮಹಿಳಾ ಅಧಿವೇಶನದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಸ್ವತಂತ್ರ ಭಾರತದ ಪ್ರಥಮ ಮಹಿಳಾ ಆರೋಗ್ಯ ಮಂತ್ರಿಯಾಗಿದ್ದರು ಮತ್ತು ದೆಹಲಿಯಲ್ಲಿ ಅಖಿಲ ಭಾರತ ಆರೋಗ್ಯ ವಿಜ್ಞಾನ ಸಂಸ್ಥೆ (AIMS) ಯನ್ನು ಆರಂಭಿಸಿದರು. 1964ರಲ್ಲಿ ನಿಧನರಾದರು.

## ಮಾತಂಗಿ ಹಜ್ರಾ –1870–1942

ಪಶ್ಚಿಮ ಬಂಗಾಳದ ಮಿಡ್ನಾಪುರ ಜಿಲ್ಲೆಯವರಾದ ಮಾತಂಗಿಯವರು ಕ್ವಿಟ್ ಇಂಡಿಯಾ ಚಳುವಳಿ ಮತ್ತು ಅಸಹಕಾರ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಇವರನ್ನು 'ಮಹಿಳಾಗಾಂಧಿ' ಎಂದು ಕರೆಯುತ್ತಿದ್ದರು. 1942 ಸೆಪ್ಟೆಂಬರ್ 29ರಂದು ತಮ್ಲುಕ್ ಪೋಲೀಸ್ ಠಾಣೆ ವಶಪಡಿಸಿಕೊಳ್ಳಲು ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ಹೋಗುತ್ತಿರುವಾಗ ಅವರಿಗೆ ಗುಂಡೇಟು ತಗುಲಿತು. ಆದರೂ ವಿಚಲಿತರಾಗದೆ ವಂದೇಮಾತರಂ ಎಂದು ಕೂಗುತ್ತಾ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ದಿಟ್ಟ, ಧೀಮಂತ ಮಹಿಳೆ ಮಾತಂಗಿ ಹಜ್ರಾ.

## ದುರ್ಗಾಬಾಯಿ ದೇಶಮುಖ್ : 1909–1981

12ನೇ ವಯಸ್ಸಿನಲ್ಲಿ ಇಂಗ್ಲೀಷರ ವಿರುದ್ಧ ಸಿಡಿದು ವಿದ್ಯಾಭ್ಯಾಸ ಮೊಟಕುಗೊಳಿಸಿದರು. ನಂತರ ರಾಜಮಂಡ್ರಿಯಲ್ಲಿ ಹೆಣ್ಣು ಮಕ್ಕಳಿಗಾಗಿ ಬಾಲಿಕಾ ಹಿಂದಿ ಪಾಠಶಾಲೆಯನ್ನು ಆರಂಭಿಸಿದರು. ಮಹಾತ್ಮಗಾಂಧಿಯವರ ಅನುಯಾಯಿಯಾಗಿದ್ದ ದುರ್ಗಾಬಾಯಿ ಸ್ವಾತಂತ್ರ್ಯ ಹೋರಾಟದಲ್ಲಿ ಹಲವು ಬಾರಿ ಜೈಲುವಾಸ ಅನುಭವಿಸಿದರು. ಸಣ್ಣ ವಯಸ್ಸಿನಲ್ಲಿ ಹೋರಾಟಕ್ಕಿಳಿದ ಧೀಮಂತೆ ದಿಟ್ಟ ಮಹಿಳೆ ದುರ್ಗಾ 1981ರಲ್ಲಿ ನಿಧನರಾದರು. ಇವರೂ ಎಂದಿಗೂ ಚಿನ್ನಾಭರಣ ಧರಿಸದ ಧೀಮಂತೆ.

## ಮೇಡಂ ಭೀಕಾಜಿ ಕಾಮಾ: –1861–1936

ಮಹನೀಯರೇ ಏಳಿ ಈ ಧ್ವಜಕ್ಕೆ ವಂದಿಸಿ. ಧ್ವಜದೊಡನೆ ಭಾರತದ ಸ್ವಾತಂತ್ರ್ಯಕ್ಕಾಗಿ ಸಹಕರಿಸಿ ಎಂದು ಜರ್ಮನಿಯ ಸ್ಟುವರ್ಟ್‌ನಲ್ಲಿ 1907ರಲ್ಲಿ ನಡೆದ ಸಮಾಜವಾದಿ ಅಧಿವೇಶನದಲ್ಲಿ ಪ್ರಥಮಬಾರಿಗೆ ಧ್ವಜಾರೋಹಣ ಮಾಡಿದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಧ್ರುವತಾರೆ ಎನಿಸಿದ ಮೇಡಂ ಭೀಕಾಜಿ ಕಾಮ ಇಂಡಿಯನ್ ಹೌಸ್, ಪ್ಯಾರಿಸ್ ಇಂಡಿಯನ್ ಸೊಸೈಟಿ ಮತ್ತು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ದಿಟ್ಟ ಮಹಿಳೆ. ಪ್ರಥಮ ಧ್ವಜ ಇಂದು ಕ್ರಮೇಣ ಬದಲಾವಣೆ ಪಡೆಯಿತು. 1936 ಆಗಸ್ಟ್ 31ರಂದು ನಿಧನರಾದ ದಿಟ್ಟ ಧೀಮಂತೆ ಮೇಡಂ ಭೀಕಾಜಿಕಾಮ.

## ಸುಚೇತ ಕೃಪಲಾನಿ : 1904–1974

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟ ಮಾಡಿದ ಧೀಮಂತೆ. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಪ್ರಥಮ ಮಹಿಳಾ ಮುಖ್ಯ ಮಂತ್ರಿಯಾಗಿ ಉತ್ತರ ಪ್ರದೇಶದ ಆಳ್ವಿಕೆಯನ್ನು 1963 ರಿಂದ 1967ರವರೆಗೆ ಯಶಸ್ವಿಯಾಗಿ ನಿಭಾಯಿಸಿ 1974 ಡಿಸೆಂಬರ್ ಒಂದರಂದು ದೆಹಲಿಯಲ್ಲಿ ನಿಧನರಾದರು.

ಇವರಷ್ಟೇ ಅಲ್ಲದೆ ಬಹಳ ಮುಖ್ಯವಾಗಿ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ದೇಶಕ್ಕಾಗಿ ತಮ್ಮ ತ್ಯಾಗ, ದಿಟ್ಟತನದಿಂದ ಬಲಿಯಾದ ಮಹಿಳೆಯರೆಂದರೆ ಕಿತ್ತೂರು ರಾಣಿ ಚೆನ್ನಮ್ಮ, ಬೇಗಲತಾಫಿಯಾ ಅಬ್ದುಲ್ ವಾಜಿದ್, ಜ್ಯೋತಿಮಯಿ ಗಂಗೂಲಿ ರಾಣಿ ಗೈದಿನಲ್ಯೂ, ಕಸ್ತೂರಬಾ ಗಾಂಧಿ, ವಿಜಯಲಕ್ಷ್ಮಿ ಪಂಡಿತ್, ಕಮಲಾ ನೆಹರೂ, ರಿಹಾನತ್ಯಾಯ ಬೇಡಾ, ಕ್ಯಾಪ್ಟನ್ ಲಕ್ಷ್ಮಿಸೈಗಲ್, ಕಲ್ಪನಾದತ್ತೈ ನೋನಿಬಾಲದೇವಿ, ಪ್ರೀತಿಲತಾ ವಾಡ್ಡಿಯರ್.

ಭಾರತೀಯರಷ್ಟೇ ಅಲ್ಲದೆ ಬ್ರಿಟಿಷ್‌ರಾದ ಅನಿಬೆಸೆಂಟ್ (1847–1933) ಸಮಾಜವಾದಿ ಮಹಿಳೆಯರ ಹಕ್ಕಿಗಾಗಿ ಹೋರಾಟ ಮಾಡಿದ ಶಿಕ್ಷಣ ತಜ್ಞೆ, ತತ್ವಜ್ಞಾನಿ, ಥಿಯೋಸೋಫಿಕಲ್ ಸೊಸೈಟಿ ಹೋಂರೂಲ್ ಚಳುವಳಿಯಲ್ಲಿ ಭಾರತೀಯರ ಪರವಾಗಿ ಹೋರಾಟ ಮಾಡಿದ್ದರು. 1917ರಲ್ಲಿ ಕಲ್ಕತ್ತಾದಲ್ಲಿ ನಡೆದ ಭಾರತೀಯ ಮಹಿಳಾ ಕಾಂಗ್ರೆಸ್‌ನ ಮೊದಲ ಅಧ್ಯಕ್ಷೆಯಾಗಿದ್ದರು.

ನಮ್ಮ ದೇಶ ಭಾರತದ 74ನೇ ಸ್ವಾತಂತ್ರ್ಯೋತ್ಸವದ ಆಚರಣೆ ಸಂದರ್ಭದಲ್ಲಿ ಇತಿಹಾಸ ಪುಟದಲ್ಲಿ ನೆನಪಾಗಿ ಬೆರತು ಹೋಗಿರುವ, ದೇಶವನ್ನು ತಮ್ಮ ತ್ಯಾಗ, ಬಲಿದಾನಗಳಿಂದ ಗುಲಾಮಗಿರಿಯಿಂದ ಹೊರತಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ, ಪ್ರಸಿದ್ಧರಾದ ದಿಟ್ಟ ಧೀಮಂತ ಮಹಿಳೆಯರನ್ನು ನೆನೆಯುತ್ತಾ ನಮ್ಮ ನಮನಗಳನ್ನು ಸಲ್ಲಿಸೋಣ. ಇವರೆಲ್ಲರೂ ತೋರಿಸಿದ ಮಾರ್ಗದಲ್ಲಿ ಇಂದಿನ ಪೀಳಿಗೆಯೂ ದೇಶದ ಪ್ರಗತಿಗಾಗಿ ಮುಂದುವರೆಯಲಿ ಎಂದು ಹಾರೈಸೋಣ.

ದೇಶ ನಮಗೇನು ಕೊಟ್ಟಿತು ಎಂದು ಯೋಚಿಸುವ ಬದಲು ದೇಶಕ್ಕಾಗಿ ನಾನೇನು ಮಾಡಿದೆ ಎಂದು ಒಮ್ಮೆ ನೆನೆದು ಪ್ರಗತಿಯತ್ತ ಸಾಗಲು ಭಾರತೀಯರಾಗಿ ಶ್ರಮಿಸೋಣ. ಭಾರತಾಂಬೆಯ ಮಡಿಲಲ್ಲಿ ಬೆಳೆದ ನಾವೇ ಧನ್ಯರು.

"ಜೈ ಭಾರತ ಮಾತೆ" ●

**ಮೌಲ್ಯೋಪಾಸನೆ**

# ಅಮೂಲ್ಯ ನಿಧಿ– ರಾಮಾಯಣ

■ **ನಂ. ನಾಗಲಕ್ಷ್ಮಿ**
**ನಿವೃತ್ತ ಕನ್ನಡ ಉಪನ್ಯಾಸಕರು,**
**ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು**

ಹಿಂದೆ ರಾಮಾಯಣ, ಮಹಾಭಾರತಗಳ ಮುದ್ರಿತ ಪ್ರತಿಗಳು ದುರ್ಲಭವಾಗಿದ್ದುವು. ಒಂದು ಹಸ್ತಪ್ರತಿ ಅಥವಾ ಕಲ್ಲಚ್ಚಿನ ಪ್ರತಿ ಹತ್ತಾರು ಜನರ ಕೈಯಲ್ಲಿ ಓಡಾಡಬೇಕಾಗಿದ್ದ ಪರಿಸ್ಥಿತಿ ಇತ್ತು. ಅದು ಬದಲಾದದ್ದು ಈಗ್ಗೆ 150 ವರ್ಷಗಳಿಂದ ಈಚೆಗೆ.

ದಕ್ಷಿಣ ಭಾರತದಲ್ಲಿ ಮೊತ್ತಮೊದಲಿಗೆ ವಾಲ್ಮೀಕಿ ರಾಮಾಯಣವನ್ನು ಸಂಸ್ಕರಿಸಿ ತೆಲುಗು ಲಿಪಿಯಲ್ಲಿ ಎಲ್ಲರಿಗೂ ಸಿಗುವಂತೆ 1856ರಲ್ಲಿ ವಾವಿಳ್ಲ ರಾಮಸ್ವಾಮಿಯಶಾಸ್ತ್ರುಲು ಸಂಸ್ಥೆಯುವರು ಪ್ರಕಾಶನಪಡಿಸಿದಾಗ ಅದು ಎಂತಹ ಅಭೂತಪೂರ್ವ ಘಟನೆ ಆಗಿತ್ತೆಂದರೆ, ಆ ರಾಮಾಯಣ ಗ್ರಂಥವನ್ನು ಆನೆಯ ಅಂಬಾರಿಯಲ್ಲಿಟ್ಟು ಮದರಾಸಿನ ರಾಜಬೀದಿಗಳಲ್ಲಿ ಮಂಗಳವಾದ್ಯಗಳೊಡನೆ ವಿದ್ವಾಂಸರು, ಜನಸಾಮಾನ್ಯರು ಮತ್ತು ಮೇಯರ್ ಮೊದಲಾದ ಸರ್ಕಾರಿ ಪ್ರಮುಖರೆಲ್ಲ ಸೇರಿ ಮೆರವಣಿಗೆ ಮಾಡಿದರು. ಅದು ಅಂತಹ ಇತಿಹಾಸಾರ್ಹ ಘಟನೆ ಎನಿಸಿತ್ತು.

ರಾಮಾಯಣವೆಂದೊಡನೆ ಜನರ ಅಂತರಂಗದಲ್ಲಿ ಯಾವ ರೀತಿಯ ಸ್ಪಂದನಗಳು ಏಳುತ್ತವೆಂಬುದಕ್ಕೆ ಒಂದು ನಿದರ್ಶನ ಇಲ್ಲಿದೆ.

ಆಂಧ್ರಪ್ರದೇಶದ ಗಣ್ಯ ಉದ್ಯಮಿಯೊಬ್ಬರಿಗೆ 'ಹಣಗಳಿಸಿದ್ದು ಇನ್ನು ಸಾಕು, ಯಾವುದಾದರೂ ಜನಹಿತ ಕಾರ್ಯಗಳಲ್ಲಿ ನನ್ನ ಉಳಿದ ಆಯುಷ್ಯವನ್ನು ಕಳೆಯಬಹುದು ಎನಿಸಿತ್ತು. ಹಲವಾರು ಹಿತೈಷಿಗಳೊಡನೆ ಸಮಾಲೋಚನೆ ನಡೆಸಿದರು. ಹಾಗೆ ಬಂದ ಒಂದು ಸಲಹೆ ಅವರ ಮನಸ್ಸಿಗೆ ಹಿಡಿಸಿತು. ಶ್ರೇಷ್ಠ ಜೀವನಮೌಲ್ಯಗಳ ಆಗರವಾದ ರಾಮಾಯಣದ ಪ್ರಸಾರ ಮಾಡುವುದು ಜನಸಾಮಾನ್ಯರಿಗೆ ಮೆಚ್ಚುಗೆಯಾಗುತ್ತದೆ ಎಂಬುದು ಆ ಸಲಹೆ. ಅವರು ಕೂಡಲೆ ಕಾರ್ಯನಿರತರಾದರು. ಭಾರತದ ಎಲ್ಲ ಭಾಷೆಗಳಲ್ಲಿ ರಾಮಾಯಣದ ಅನುವಾದಗಳನ್ನು ಪ್ರಕಟಿಸಿರುವ ಗೀತಾಪ್ರೆಸ್ ವ್ಯವಸ್ಥಾಪಕರ ಮನವೊಲಿಸಿ ಅನುಮತಿಯನ್ನು ದೊರಕಿಸಿಕೊಂಡು ಅವರು ಪ್ರಕಟಿಸಿದ್ದ ತೆಲುಗಿನ ಗದ್ಯರೂಪ ರಾಮಾಯಣದ ಮುದ್ರಣ ಮಾಡಿಸಿ ವಿತರಿಸತೊಡಗಿದರು. ಸ್ವಲ್ಪ ಸಮಯದ ನಂತರ ಅವರಿಗೆ ಅನಿಸಿದುದು, ಸ್ವಲ್ಪ ಹೆಚ್ಚು ಸರಳವೂ, ಆಕರ್ಷಕವೂ ಆದ ಅನುವಾದ ಜನರ ಕೈಗೆ ದೊರೆತರೆ ಮೇಲು– ಎಂದು. ಆದರೆ, ಹಾಗೆ ಬರೆದುಕೊಡಬಲ್ಲವರು ಯಾರು? ಅದು ಸುಲಭದ ಕೆಲಸವೇನಲ್ಲ. ಈ ಹಿನ್ನೆಲೆಯಲ್ಲಿ ಅವರಿಗೆ ಕೂಡಲೇ ಮನಸ್ಸಿಗೆ ಬಂದ ಹೆಸರು ಪ್ರಸಿದ್ಧರಾದ ಪದ್ಮಶ್ರೀ ಪುಲ್ಲೆಲ ಶ್ರೀರಾಮಚಂದ್ರುಡು ಅವರದು. ಅವರು ಇಡೀ ಭಾರತದಲ್ಲಿಯೆ ಉನ್ನತ ವಿದ್ವಾಂಸರಲ್ಲಿ ಅಗ್ರಶ್ರೇಣಿಯವರು. ಅವರ ವಯಸ್ಸು 90 ದಾಟಿತ್ತು. ಆ ವೃದ್ಧರಿಗೆ ತೊಂದರೆ ಕೊಡುವುದು ಯುಕ್ತವಾದೀತೆ? ಎಂದು ಉದ್ಯಮಿ ಹಿಂತೆಗೆದರು. ಆದರೂ ಒಂದು ಪ್ರಯತ್ನ ಮಾಡಿಯೇ



ಬಿಡೋಣವೆಂದು ಆ ವೃದ್ಧ ವಿದ್ವಾಂಸರ ಭೇಟಿ ಮಾಡಿ ಸಂಕೋಚದಿಂದಲೇ ತಮ್ಮ ಬೇಡಿಕೆಯನ್ನು ನಿವೇದಿಸಿದರು. ವಿದ್ವಾಂಸರು ತಡಮಾಡದೆ, ಮೀನಮೇಷ ಎಣಿಸದೆ ಕೂಡಲೇ ಉತ್ತರಿಸಿದರು:

"ನಿಮ್ಮ ಯೋಜನೆ ಪ್ರಶಂಸನೀಯವಾಗಿದೆ. ಇದರಿಂದ ಜನರ ಕಲ್ಯಾಣವಾಗುವುದು ನಿಶ್ಚಿತ. ನಾನು ಇಡೀ ವಾಲ್ಮೀಕಿ ರಾಮಾಯಣವನ್ನು ಆಧುನಿಕ ಗದ್ಯರೂಪದಲ್ಲಿ ಬರೆದುಕೊಡಬಲ್ಲೆ. ಆದರೆ ನನ್ನದು ಒಂದು ನಿಬಂಧನೆ ಇದೆ."

ಉದ್ಯಮಿಗಳು ಸ್ವಲ್ಪ ವಿಸ್ಮಯಗೊಂಡರು. ಆ ಹಿರಿಯ ವಿದ್ವಾಂಸರಿಗೆ ಎಷ್ಟೇ ದೊಡ್ಡ ಸಂಭಾವನೆಯನ್ನಾದರೂ ಸಂತೋಷದಿಂದ ನೀಡಲು ಅವರು ಸಿದ್ಧರಾಗಿದ್ದರು, ಅವರು ಕೇಳಿದರು:

"ನಿಮ್ಮ ಷರತ್ತು ಏನೆಂದು ಕೇಳಬಹುದೇ?"

"ಈ ಜನಹಿತಪರ ಕಾರ್ಯಕ್ಕಾಗಿ ನೀವು ನನಗೆ ಒಂದೇ ಒಂದು ರೂಪಾಯಿ ಸಂಭಾವನೆಯನ್ನೂ ಕೊಡತಕ್ಕದ್ದಲ್ಲ. ಇದೇ ನನ್ನ ಷರತ್ತು"

ಈ ವಿದ್ವಾಂಸರ ಉದಾತ್ತ ಮನೋಭಾವವನ್ನು ಕಂಡು ಉದ್ಯಮಿಗಳು ನಮ್ರರಾಗಿ ನಮಿಸಿದರು.

ಆ ಇಳಿವಯಸ್ಸಿನಲ್ಲಿ ಪುಲ್ಲೆಲ್ಲ ಶ್ರೀರಾಮಚಂದ್ರುಡು ಅನತಿಕಾಲದಲ್ಲಿ ಎರಡು ಸಾವಿರ ಪುಟಗಳಷ್ಟು ವಿಸ್ತಾರವಾದ ಗದ್ಯರೂಪ ರಾಮಾಯಣವನ್ನು ಬರೆದುಕೊಟ್ಟರು. ಸಂಭಾವನೆಯಾಗಿ ಅವರು ಸ್ವೀಕರಿಸಲೊಪ್ಪಿದ್ದು ಒಂದು ಸಾರ್ವಜನಿಕ ಔಪಚಾರಿಕ ಸನ್ಮಾನವನ್ನು ಮಾತ್ರ.

**– ಕೃತಜ್ಞತೆ, ನಾಡೋಜ ಎಸ್. ಆರ್. ಶ್ರೀರಾಮಸ್ವಾಮಿರವರಿಗೆ**

**ಆಕರ ಕೃತಿ: ಕವಳಿಗೆ.**

# "ಗುರುವಂದನಾಚರಣೆ" – ಶ್ರೀ ಗುರುರಾಜ ಕರ್ಜಗಿ



**ಉಷಾರಾಣಿ ಎಸ್.**
**ಸಹಶಿಕ್ಷಕಿ,**
**ಸಂತ ಜೋಸೆಫರ ಕೇಂದ್ರಿಯ ಶಾಲೆ,**
**ಇಲವಾಲ, ಮೈಸೂರು**

**"ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ।**
**ಗುರು ಸಾಕ್ಷಾತ್ ಪರಬ್ರಹ್ಮಾ ತಸ್ಮೈ ಶ್ರೀ ಗುರುವೇ ನಮಃ॥**

ಸೃಷ್ಟಿ, ರಕ್ಷಣೆ, ಶಿಕ್ಷೆ ಇವುಗಳನ್ನು ಸಮನ್ವಯಗೊಳಿಸುವ ಪರಬ್ರಹ್ಮ ಶಕ್ತಿಯುಳ್ಳ ಗುರುವಿಗೆ ವಂದಿಸುತ್ತಾ, ಈ ಶ್ಲೋಕದ ಅರ್ಥವನ್ನು ಸಾಕಾರಗೊಳಿಸಿದ ವೇದಗಳ ಗುರುವಾದ ವ್ಯಾಸ, ರಾಮನ ಗುರುವಾದ ವಸಿಷ್ಠ, ಯೋಗದ ಗುರುವಾದ ಪತಂಜಲಿ, ಭಗವದ್ಗೀತೆಯ ಗುರುವಾದ ಶ್ರೀಕೃಷ್ಣ, ಗಣಿತಶಾಸ್ತ್ರದ ಗುರುವಾದ ಆರ್ಯಭಟ, ವಿವೇಕಾನಂದರ ಗುರುವಾದ ರಾಮಕೃಷ್ಣ ಪರಮಹಂಸ, ಸಂಗೀತದ ಗುರುವಾದ ತ್ಯಾಗರಾಜ, ತತ್ತ್ವಶಾಸ್ತ್ರದ ಗುರುವಾದ ಸ್ಯಾಕ್ರಟಿಸ್, ವಿಜ್ಞಾನದ ಗುರುವಾದ ಐನ್‌ಸ್ಟೇನ್ ಮತ್ತು ಸಮಾಜಕ್ಕೆ ಗುರುವಾದ ಮಹಾತ್ಮಗಾಂಧಿ ಮುಂತಾದ ಅನೇಕ ಮಹಾನ್ ಗುರುಗಳ ಆದರ್ಶಗಳನ್ನು ನೆನೆಯುತ್ತಾ, ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಆಚರಿಸುವ 'ಗುರುವಂದನಾ' ದಿನದಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘವು ಫೇಸ್‌ಬುಕ್ ಲೈವ್ ಮೂಲಕ ಆಯೋಜಿಸಿದ್ದ 'ಗುರುವಂದನಾ' ಕಾರ್ಯಕ್ರಮದಲ್ಲಿ ಸರ್ವ ಶಿಕ್ಷಕರನ್ನುದ್ದೇಶಿಸಿದ ಶಿಕ್ಷಣ ತಜ್ಞರು, 'ಕರುಣಾಳು ಬಾ ಬೆಳಕೆ' ಲೇಖಕರಾದ ಶ್ರೀ ಗುರುರಾಜ ಕರ್ಜಗಿಯವರ ಮಾತಿನ ಸಾರಾಂಶ ಇಲ್ಲಿದೆ.

**ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಾಲಾಕಯಾ**
**ಚಕ್ಷುರುಂಮಿಲಿತಂ ಯೇನ ತಸ್ಮೈ ಶ್ರೀ ಗುರುವೇ ನಮಃ**

ಅಜ್ಞಾನದಲ್ಲಿ ಸಿಲುಕಿಕೊಂಡಾಗ ಜ್ಞಾನದ ಶಲಾಕೆಯಿಂದ ನಮ್ಮ ಕಣ್ಣುಗಳನ್ನು ತೆರೆಸುವಂತಹ ಗುರುವಿಗೆ ನನ್ನ ನಮಸ್ಕಾರ.

ನಮ್ಮ ಭಾರತೀಯ ಪರಂಪರೆಯಲ್ಲಿ ಗುರುವಿಗೆ ಅತ್ಯಂತ ಮಹತ್ತರವಾದ ಸ್ಥಾನವಿದೆ. ಒಬ್ಬ ಗುರು ತನ್ನ ಶಿಷ್ಯನ ಸರ್ವೋರ್ಭ್ಯೋದಯವನ್ನೇ ಗುರಿಯಾಗಿಸಿಕೊಂಡಿರುತ್ತಾನೆ ಎಂಬುದಕ್ಕೆ ವಿಶ್ವಾಮಿತ್ರ– ರಾಮಲಕ್ಷ್ಮಣರು, ಕೃಷ್ಣ– ಅರ್ಜುನ, ವರುಣ, ಭೃಹು, ವರುಣ, ಶ್ವೇತಕೇತು, ಯಜ್ಞವಲ್ಕ್ಯ, ಜನಕ, ಸಾಕ್ರಟೀಸ್, ಪ್ಲೇಟೋ ಸಮರ್ಥ ರಾಮದಾಸ್– ಶಿವಾಜಿ, ರಾಮಕೃಷ್ಣ ಪರಮ ಹಂಸ– ಸ್ವಾಮಿ ವಿವೇಕಾನಂದ, ಶಿವಸುಬ್ರಹ್ಮಣ್ಯ ಅಯ್ಯರ್– ಎಪಿಜೆ ಅಬ್ದುಲ್ ಕಲಾಂ ಮುಂತಾದವರನ್ನು ಕಾಣಬಹುದು. ಪ್ರಸ್ತುತ ಸಮಾಜದಲ್ಲಿ ಶಿಕ್ಷಕರಾದವರೆಲ್ಲಾ ಗುರುವಾಗಲು ಸಾಧ್ಯವಾಗುತ್ತಿಲ್ಲ, ಏಕೆಂದರೆ ಗುರುವಿಗೂ ಶಿಕ್ಷಕರಿಗೂ ವ್ಯತ್ಯಾಸವಿದೆ.

**ಅವೆಂದರೆ–**

- ಶಿಕ್ಷಕ ವಿದ್ಯಾರ್ಥಿಗಳ ಪ್ರಶ್ನೆಗೆ ಉತ್ತರಿಸಿದರೆ, ಒಬ್ಬ ಗುರು ವಿದ್ಯಾರ್ಥಿಗಳ ಉತ್ತರವನ್ನೇ ಪ್ರಶ್ನೆಯನ್ನಾಗಿ ಮಾರ್ಪಡಿಸುತ್ತಾನೆ.
- ಶಿಕ್ಷಕ ವಿದ್ಯಾರ್ಥಿಗಳ ಬೆಳವಣಿಗೆಗೆ ಸಹಾಯ ಮಾಡಿದರೆ, ಗುರು ವಿದ್ಯಾರ್ಥಿಗಳ ಬೆಳವಣಿಗೆಗೆ ಅವರನ್ನೇ ಜವಾಬ್ದಾರರನ್ನಾಗಿ ಮಾಡುತ್ತಾನೆ.
- ಒಬ್ಬ ಶಿಕ್ಷಕ ವಿದ್ಯಾರ್ಥಿಗಳ ಬುದ್ಧಿಯನ್ನು ಚುರುಕುಗೊಳಿಸಿದರೆ ಗುರು ವಿದ್ಯಾರ್ಥಿಗಳ ಮನಸ್ಸನ್ನು ತೆರೆಯುತ್ತಾನೆ.
- ಶಿಕ್ಷಕ ವಿದ್ಯಾರ್ಥಿಗಳ ಮನಸ್ಸನ್ನು ಮುಟ್ಟಿದರೆ, ಒಬ್ಬ ಗುರು ವಿದ್ಯಾರ್ಥಿಗಳ ಆತ್ಮ ಪ್ರಜ್ಞೆಯನ್ನು ಚುರುಕುಗೊಳಿಸುತ್ತಾನೆ.

ಒಬ್ಬ ಶಿಕ್ಷಕ ಗುರುವಾಗಿ ಪರಿವರ್ತಿಸುವ ಈ ಹಂತಗಳಲ್ಲಿ ಬೆಳೆದು ಹೋಗಲು ಸುಲಭವಿಲ್ಲದಿದ್ದರೂ, ಶಿಕ್ಷಕರು ತಮ್ಮ ವೃತ್ತಿಪರ ಜೀವನದುದ್ದಕ್ಕೂ ಬದಲಾವಣೆಗಳಿಗೆ ಒಳಗಾಗುತ್ತಾ ಬದಲಾವಣೆಗಳನ್ನು ಕಂಡುಕೊಳ್ಳುತ್ತಾ ಸಾಗಿದರೆ ಅದು ಅಸಾಧ್ಯವೇನಿಲ್ಲ.

ಶಿಕ್ಷಕ ತನ್ನ ವೃತ್ತಿಪರ ಜೀವನದಲ್ಲಿ ಉನ್ನತ ಮಟ್ಟಕ್ಕೆ ಸಾಗಬೇಕಾದರೆ ಪ್ರಾರಂಭದ ಹಂತದಲ್ಲಿ ತರಗತಿಗೆ ಹೋಗುವ ಮುನ್ನ ಉತ್ತಮ ವಿಷಯ ಸಂಗ್ರಹ ಹಾಗೂ ವಿಷಯದ ಮೇಲಿನ ಹಿಡಿತದಿಂದ ಕೂಡಿದ ಪೂರ್ವ ಸಿದ್ಧತೆಯನ್ನು ಮತ್ತು ಕಲಿಕಾ ಸಾಮಗ್ರಿಯ ವ್ಯವಸ್ಥೆಯನ್ನು ಮಾಡಿಕೊಂಡಿರಬೇಕು. ತರಗತಿಯಲ್ಲಿ ಕೇಳಿ ಕಲಿಯುವ, ನೋಡಿ ಕಲಿಯುವ, ಓದಿ ಬರೆದು ಕಲಿಯುವ ಹಾಗೂ ಮಾಡಿ ಕಲಿಯುವ ವಿದ್ಯಾರ್ಥಿಗಳಿರುವುದರಿಂದ ಕಲಿಕಾ ಸಾಮಗ್ರಿ ಅತ್ಯಗತ್ಯವಾಗಿರುತ್ತದೆ. ಭಾರತದ ಏಕೈಕ ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಸರ್.ಸಿ.ವಿ ರಾಮನ್‌ರವರು ತಮ್ಮ ಒಂದು ತಾಸಿನ ತರಗತಿಯಲ್ಲಿ ಬೆಳಕಿನ ವಕ್ರೀಭವನದ ಪಾಠವನ್ನು ಬೋಧಿಸಲು ರಸ್ತೆಯಲ್ಲಿ ಸತ್ತ ದೀಪದ ಹುಳುವಿನ ರಕ್ಕೆಯನ್ನು ಸಂಗ್ರಹಿಸಿಕೊಂಡ ಘಟನೆಯಲ್ಲಿ ಒಬ್ಬ ಪೂರ್ವ ಯೋಜಿತ ಸಿದ್ಧತೆ ಹಾಗೂ ಕಲಿಕಾ ಸಾಮಗ್ರಿಯ ಮಹತ್ವ ಎಂಥದ್ದು ಎಂಬುದನ್ನು ಕಾಣಬಹುದು.

ಶಿಕ್ಷಕ ತನ್ನ ಉಡುಪಿನ ಬಗೆಗೆ ಎಚ್ಚರದಿಂದಿರಬೇಕು. ಏಕೆಂದರೆ ವಿದ್ಯಾರ್ಥಿಗಳಿಗೆ ಮೊದಲು ಶಿಕ್ಷಕ ಕಾಣಿಸುತ್ತಾನೆ, ನಂತರ ಕೇಳಿಸುತ್ತಾನೆ. ಶಿಕ್ಷಕ ಮಂದಸ್ಮಿತನಾಗಿರಬೇಕು. ಶಿಕ್ಷಕ ನಗುಮೊಗದಿ ತರಗತಿಗೆ ಪ್ರವೇಶಿಸಿದಾಗ ಅದು ಆತನ ಪೂರ್ವ ಸಿದ್ಧತೆಯಲ್ಲಿನ ವಿಶ್ವಾಸ ಹಾಗೂ ವಿದ್ಯಾರ್ಥಿಗಳ ಮೇಲಿರುವ ಪ್ರೀತಿಯನ್ನು ಬಿಂಬಿಸುತ್ತದೆ.

ಶಿಕ್ಷಕ ಸೃಜನಶೀಲನಾಗಿರುವುದರ ಜೊತೆಗೆ ತನ್ನ ತರಗತಿಯಲ್ಲಿ your class should be flexible enough for learning to happen and not too flexible to be chaotic ಎಂಬಂತಹ ವಾತಾವರಣವನ್ನು ಸೃಷ್ಟಿಸಿ, ಲವಲವಿಕೆಯಿಂದ ಹಾಗೂ ಸೃಜನಾತ್ಮಕವಾಗಿ ಬೋಧಿಸಿದಂತಹ ವಿಷಯುವು ಅತ್ಯಂತ ಪರಿಣಾಮಕಾರಿಯಾಗಿರುತ್ತದೆ.

ಪುಟ 12 ಕ್ಕೆ ➢

➢ ಪುಟ 11 ರಿಂದ.....

Provisional teacher ಅಂದರೆ ಎರಡನೆ ಹಂತದ ಶಿಕ್ಷಕ. ಇವರು ಧನಾತ್ಮಕತೆಯ ಮನೋಭಾವವನ್ನು ಹೊಂದಿರಬೇಕು. ಸದಾ ಸಮಾಜದಲ್ಲಿನ ಧನಾತ್ಮಕ ವಿಚಾರಗಳನ್ನು ವಿದ್ಯಾರ್ಥಿಗಳಲ್ಲಿ ಬಿತ್ತಿ, ಪುಷ್ಟೀಕರಿಸಿದಾಗ ಬೆಳೆಯುವ ಮನಸ್ಸಿನಲ್ಲಿ ಕೀಳರಿಮೆ ಕಳೆದು, ಆತ್ಮವಿಶ್ವಾಸ, ಸದ್ವಿಚಾರ, ಸದ್ಯೋಚನೆಗಳನ್ನು ಬಲಗೊಳಿಸಬಹುದು.

ವೇದವ್ಯಾಸರು ತಮ್ಮ ಶಿಷ್ಯವೃಂದದಲ್ಲಿ ಭೇದಭಾವವನ್ನು ಕಾಣದೆ ಅವರವರ ಸಾಮರ್ಥ್ಯದ ಆಧಾರದ ಮೇಲೆ ಮೂರು ಪಂಗಡಗಳನ್ನಾಗಿ ವಿಂಗಡಿಸಿದ್ದರು. ಮೊದಲನೆಯದಾಗಿ ಉತ್ತಮಾಧಿಕಾರಿಗಳು– ಅವರ ಅಧ್ಯಯನ ಶ್ರುತಿ, ಅದರ ಫಲ ನಾರಿಕೇಳ ಫಲ, ಎರಡನೆಯದಾಗಿ ಮಧ್ಯಮಾಧಿಕಾರಿಗಳು– ಅವರ ಅಧ್ಯಯನ ಸ್ಮೃತಿ (ಇತಿಹಾಸ), ಅದರ ಫಲ ಕದಳೀಫಲ, ಮೂರನೆಯದಾಗಿ ಕನಿಷ್ಠಾಧಿಕಾರಿಗಳು– ಅವರ ಅಧ್ಯಯನ ಪುರಾಣಗಳು, ಅದರ ಫಲ ದ್ರಾಕ್ಷಾಫಲವನ್ನು ನೀಡಿದಂತೆ, ಇಂದಿನ ಶಿಕ್ಷಕರೂ ಕೂಡ ತಮ್ಮ ವಿದ್ಯಾರ್ಥಿಗಳಿಗೆ ತಾರತಮ್ಯ ಮಾಡದೆ ಅವರವರ ಬುದ್ಧಿಮತ್ತೆ ಹಾಗೂ ಕಲಿಕಾವೇಗದ ಅನುಗುಣವಾಗಿ ಬೋಧಿಸುತ್ತಾ ಸಮಾನದೃಷ್ಟಿಕೋನವನ್ನು ಹೊಂದಿರಬೇಕು.

ಮೂರನೇ ಹಂತದಲ್ಲಿ veteran teacher ಅಂದರೆ ಅನುಭವ ಶಿಕ್ಷಕರನ್ನು ಕಾಣಬಹುದು. ಈ ಹಂತದಲ್ಲಿ ಶಿಕ್ಷಕ ಅತ್ಯಂತ ಸೂಕ್ಷ್ಮಮತಿಯಾಗಿರಬೇಕು. ವಿದ್ಯಾರ್ಥಿಗಳನ್ನು ತಿದ್ದಿ ತೀಡುವ ಬರದಲ್ಲಿ ಅವರ ಮನಸ್ಸು ಘಾಸಿಗೊಳ್ಳುವಂತೆ ನಿಂದಿಸದೆ, ಅತ್ಯಂತ ಸೂಕ್ಷ್ಮವಾಗಿ ಅರಿವನ್ನು ಮೂಡಿಸುವಂತಿರಬೇಕು. ಶಿಕ್ಷಕ ವಿದ್ಯಾರ್ಥಿಗಳಿಗೆ ಮಾದರಿ ವ್ಯಕ್ತಿಯಾಗಿ ಬಿಂಬಿತವಾಗುವುದರಿಂದ ಆತ ತರಗತಿಯಲ್ಲಾಗಲೀ, ಸಮಾಜದಲ್ಲಾಗಲೀ ತನ್ನ ನಡೆ–ನುಡಿ, ಅಭ್ಯಾಸಗಳ ಬಗ್ಗೆ ಬಹು ಎಚ್ಚರದಿಂದಿರಬೇಕು.

ನಾಲ್ಕನೇ ಹಂತದಲ್ಲಿ ಬರುವುದು Transformative teacher ಅಂದರೆ ಪರಿವರ್ತನೆ ತರುವಂತಹ ಶಿಕ್ಷಕ ಈ ಹಂತದಲ್ಲಿ ಶಿಕ್ಷಕ ತನ್ನ ವೃತ್ತಿಪರ ಜೀವನದುದ್ದಕ್ಕೂ ವೈವಿಧ್ಯಮಯ ಅನುಭವಗಳನ್ನು ಪಡೆದು, ಅಪಾರವಾದ ವಿಷಯಜ್ಞಾನವನ್ನು ಕ್ರೋಢೀಕರಿಸಿ ಜೊತೆಗೆ ವೃತ್ತಿಯನ್ನೇ ಪ್ರವೃತ್ತಿಯನ್ನಾಗಿಸಿಕೊಂಡಾಗ ಪ್ರತಿ ತರಗತಿಗಳಲ್ಲೂ ದೇಶದ ಭವಿಷ್ಯದ ಭರವಸೆಗಳನ್ನು ಹುಟ್ಟುಹಾಕಬಹುದು.

ಒಟ್ಟಾರೆ ಒಬ್ಬ ಶಿಕ್ಷಕ ಪರಿವರ್ತನೆ ತರುವಂತಹ ಶಿಕ್ಷಕ ನಾಗಬೇಕಾದರೆ ನಾಲ್ಕು ಹಂತಗಳಲ್ಲಿ ಸಾಗಬೇಕಾಗುತ್ತದೆ.

ಮೊದಲನೆಯದಾಗಿ ಶಿಕ್ಷಕ Unconsciously incompetent – ಅಂದರೆ ಅರಿವಿಲ್ಲದೆ ಅಸಮರ್ಥರಾಗಿರುವಂತಹ ಹಂತ.

ಎರಡನೆಯದಾಗಿ ಶಿಕ್ಷಕ consciously incompetent – ಅಂದರೆ ತನ್ನ ವಿಷಯ ಅಸಮರ್ಥತೆಯ ಬಗ್ಗೆ ಅರಿವುಂಟಾಗುವ ಹಂತ.

ಮೂರನೆಯದಾಗಿ ಶಿಕ್ಷಕ consciously competent – ಅಂದರೆ ತನ್ನ ವಿಷಯ ಸಾಮರ್ಥ್ಯದ ಬಗೆಗೆ ಅರಿವು ಮೂಡಿಸಿಕೊಳ್ಳುವ ಹಂತ.

ನಾಲ್ಕನೆಯದಾಗಿ ಶಿಕ್ಷಕ Unconsciously competent – ಅಂದರೆ ತನಗೆ ಅರಿವಿಲ್ಲದೆ ಸಮಗ್ರ ವಿಷಯದಲ್ಲಿ ಸಮರ್ಥವಾಗುವ ಹಂತ.

ಹೀಗೆ ಒಬ್ಬ ಶಿಕ್ಷಕ Transformative teacher ಅಂದರೆ ಪರಿವರ್ತನಾ ಶಿಕ್ಷಕನಾಗುವುದನ್ನೇ ಆದರ್ಶವನ್ನಾಗಿ ಇಟ್ಟುಕೊಂಡು ಪ್ರತಿ ಹೆಜ್ಜೆಯಲ್ಲಿ ಬದಲಾವಣೆ ಹೊಂದುತ್ತಾ, ವಿಷಯ ಜ್ಞಾನ ಹಾಗೂ ಮನಃಶುದ್ಧಿಯಿಂದ ಮೇಲಿನ ನಾಲ್ಕು ಹಂತಗಳನ್ನು ಪೂರ್ಣಗೊಳಿಸಿದಾಗ ಸಮಾಜದಲ್ಲಿರುವ ಶಿಕ್ಷಕನ ಸ್ಥಾನಕ್ಕೆ ಗೌರವ ಸಲ್ಲಿಸಿದಂತಾಗುತ್ತದೆ.

ಪ್ರಶ್ನೋತ್ತರದ ಸಮಯದಲ್ಲಿ ಶಿಕ್ಷಕರಾದ ಬಸವರಾಜುರವರ ಪ್ರಶ್ನೆ– ಪ್ರಸ್ತುತ ಕೋವಿಡ್–19ನ ಸಂದಿಗ್ಧ ಪರಿಸ್ಥಿತಿಯಲ್ಲಿ ಶಿಕ್ಷಕರನ ಪಾತ್ರವೇನು?

ಇಡೀ ಜಗತ್ತಿಗೆ ಹರಡಿರುವ ಕೊರೊನ ವೈರಸ್‌ನಿಂದಾಗಿ ಮಕ್ಕಳ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇಂತಹ ಪರಿಸ್ಥಿಯಲ್ಲಿ ಶಿಕ್ಷಕರು ಆನ್‌ಲೈನ್ ತರಗತಿ ಅಥವಾ ದೂರವಾಣಿಯ ಮೂಲಕ ಪೋಷಕರನ್ನು, ವಿದ್ಯಾರ್ಥಿಗಳನ್ನು ತಮ್ಮ ಸಂಪರ್ಕ ದಲ್ಲಿಟ್ಟುಕೊಳ್ಳುವುದರ ಮೂಲಕ ವಿಷಯಾತ್ಮಕ ಮತ್ತು ಭಾವನಾತ್ಮಕ ಸಂಬಂಧ ಸಡಿಲಗೊಳ್ಳುವಂತೆ ಕಾರ್ಯ ನಿರ್ವಹಿಸಿಸಬೇಕು.

ಕೊನೆಯದಾಗಿ ಶಿಕ್ಷಕ ಗುರುವಾಗಿ ಪರಿವರ್ತನೆಗೊಳ್ಳುವ ನಿಟ್ಟಿನಲ್ಲಿ ಪ್ರಯತ್ನವು ದೇವರ ಆಶೀರ್ವಾದದೊಂದಿಗೆ ಸಾಕಾರಗೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ.

## ಓದುಗರ ಅಭಿಪ್ರಾಯ

**ನಮಸ್ಕಾರ. ಈ ಸಾರ್ಥಕತೆಯ ಅನುಭವ ಪ್ರತಿಯೊಬ್ಬ ಶಿಕ್ಷಕ ಯಾ ಶಿಕ್ಷಕಿ ತನ್ನ ವೃತ್ತಿಯಲ್ಲಿ ಅಪೇಕ್ಷಿಸುವಂತಹುದು. ಬಹುತೇಕ ಶಿಕ್ಷಕರು ಪಡೆದುಕೊಂಡಿರಲೂಬಹುದು. ಇಂತಹ ಅನುಭವಗಳನ್ನು ಓದಿದಾಗ ಯುವ ಶಿಕ್ಷಕರಿಗೆ ತಾವೂ ಸಹ ಈಸಂತೋಷವನ್ನು ಪಡೆಯಲು ಪ್ರೇರಣೆ ಆಗಬಹುದು.**

**ತನ್ಮೂಲಕ ಶಿಕ್ಷಕ ವೃತ್ತಿಯ ಬಗ್ಗೆ ಗೌರವ ಶ್ರದ್ಧೆ ಕೂಡ ಉಂಟಾಗುತ್ತದೆ. ಫಲವಾಗಿ ಉತ್ತಮ ಶಿಕ್ಷಕವೃಂದವೇ ರೂಪುಗೊಳ್ಳುತ್ತದೆ. ಶಿಕ್ಷಕ ಸಮಾಚಾರದ ಈ ಹೊಸ ಅಂಕಣ ಸ್ವಾಗತಾರ್ಹ.**

# ವಿದ್ಯಾರ್ಥಿಗಳಲ್ಲಿ ಆಲೋಚನಾ ಸಾಮರ್ಥ್ಯ



**ಲಕ್ಷ್ಮೀಸಿಂಗ್ ಬಿ.**
**ಶೈಕ್ಷಣಿಕ ಸಮಾಲೋಚಕರು**
**ಲೈಫ್ ಕೋಚ್**
**ಲಕ್ಷ್ಮೀ ಕೋಚಿಂಗ್ ಸೆಂಟರ್**

ಮಾನವ ಆಲೋಚಿಸುವ ಜೀವಿ: ಈ ಆಲೋಚಿಸುವ ಸಾಮರ್ಥ್ಯವೇ ಅವನನ್ನು ಬೇರೆಯ ಜೀವಿಗಿಂತ ಭಿನ್ನವಾಗಿಸಿದೆ. ಈ ಆಲೋಚನಾ ಶಕ್ತಿಯಿಂದಲೇ ಮನುಷ್ಯ ವಿಮರ್ಶಾತ್ಮಕ ಚಿಂತನೆ, ಸೃಜನಶೀಲ ಚಿಂತನೆ, ಸಮಸ್ಯೆಗಳ ಪರಿಹಾರ ಮತ್ತು ನಿರ್ಧಾರಗಳನ್ನು ಕೈಗೊಳ್ಳುವುದು.

ಯಾವುದೇ ಶಿಕ್ಷಣದ ಮೂಲ ಉದ್ದೇಶ ವ್ಯಕ್ತಿಯ ಆಲೋಚನಾ ಸಾಮರ್ಥ್ಯವನ್ನು ಹೆಚ್ಚಿಸುವುದು ಹಾಗೂ ಸುಧಾರಿಸುವುದು. ಆದರೆ ಇಂದಿನ ವಿದ್ಯಾಭ್ಯಾಸದಲ್ಲಿ ಆಲೋಚನಾ ಶಕ್ತಿಗಿಂತ ನೆನಪಿನ ಶಕ್ತಿಯೇ ಮುಖ್ಯ ಪ್ರಾಧಾನ್ಯತೆ ಪಡೆದಿದೆ. ಇಂದಿನ ವಿದ್ಯಾರ್ಥಿಗಳಲ್ಲಿ ಆಲೋಚನಾ ಸಾಮರ್ಥ್ಯ ಕಡಿಮೆಯಾಗಿದೆ ಅಥವಾ ನಶಿಸಿಹೋಗುತ್ತಿದೆ ಎಂದರೂ ತಪ್ಪೇನಿಲ್ಲ. ಇದರ ಹೊಣೆಗಾರಿಕೆಯನ್ನು ಪೋಷಕರು, ಶಿಕ್ಷಕರು ಮತ್ತು ಮುಖ್ಯವಾಗಿ ಇಂದಿನ ಶಿಕ್ಷಣದ ಪದ್ಧತಿಯ ಮೇಲೆ ಸಮಾನವಾಗಿ ಹೊರಿಸಬಹುದು.

ಬಹುತೇಕ ಬ್ರಿಟಿಷರ ಶಿಕ್ಷಣದ ಪದ್ಧತಿಯನ್ನೇ ಅನುಸರಿಸಿಕೊಂಡು ಬಂದ ನಾವು ಓದು ಎನ್ನುವುದು ಒಂದು ಹಿಂಸೆ ಎನ್ನುವ ಭಾವನೆ ಮಕ್ಕಳಲ್ಲಿ ಬೆಳೆಸಿಬಿಟ್ಟಿದ್ದೇವೆ. ಪರೀಕ್ಷೆ ತುಂಬಾ ಮುಖ್ಯವಾದದು, ಉತ್ತಮ ಅಂಕಗಳು ಬಾರದಿದ್ದರೆ ಭವಿಷ್ಯವಿಲ್ಲ...! ಇಂತಹ ಯೋಚನೆ ವಿದ್ಯಾರ್ಥಿಗಳಲ್ಲಿ ಇತರ ಪುಸ್ತಕಗಳನ್ನು ಓದುವ ಆಸಕ್ತಿಯನ್ನು ಕಡಿಮೆಯಾಗುವಂತೆ ಮಾಡಿದೆ ಮತ್ತು ಆಲೋಚನಾ ಶಕ್ತಿಯನ್ನೇ ಕುಂಠಿತವಾಗಿಸಿದೆ.

ಸಾಮಾನ್ಯವಾಗಿ ವಿದ್ಯಾರ್ಥಿಗಳ ತಿಳುವಳಿಕೆಯ ಮಟ್ಟ ಶಿಕ್ಷಕರಿಗಿಂತ ಕಡಿಮೆ ಮಟ್ಟದಲ್ಲಿರುತ್ತದೆ. ಇದನ್ನು ಶಿಕ್ಷಕರಾದ ನಾವು ಅವರಿಂದ ಕೇವಲ ವಿಧೇಯತೆಯನ್ನು ಬಯಸದೆ, ವಿದ್ಯಾರ್ಥಿಗಳು ಎಷ್ಟು ಅಂಕಗಳು ಗಳಿಸಿದ್ದಾರೆ ಎಂಬುದನ್ನು ಗಣನೆಗೆ ತೆಗೆದುಕೊಳ್ಳದೆ, ಅವರು ನಮ್ಮ ಶಿಕ್ಷಣದಿಂದ ಏನನ್ನು ಕಲಿಯುತ್ತಿದ್ದಾರೆ, ಏನನ್ನು ಕಲಿತಿದ್ದಾರೆ ಮತ್ತು ಮುಖ್ಯವಾಗಿ ಏನನ್ನು ಅರಿತಿದ್ದಾರೆ ಎಂಬುದರತ್ತ ಗಮನ ಹರಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಗಳಲ್ಲಿಯೂ ಕೆಲವು ವಿಶೇಷ ಆಯಾಮಗಳಿರುತ್ತವೆ. ಆ ವಿಶೇಷತೆಗಳನ್ನು ಗುರುತಿಸಿ ಅದನ್ನು ಸರಿಯಾಗಿ ಮಾರ್ಗದಲ್ಲಿ ಶಿಕ್ಷಣ ನೀಡಿ ಬೆಳೆಸುವುದು ಶಿಕ್ಷಕರ ಮುಖ್ಯ ಕೆಲಸವಾಗಿದೆ. ಯಾವ ವಿದ್ಯಾರ್ಥಿ ಕೇವಲ ಕಂಠಪಾಠ ಮಾಡಿ ಹೆಚ್ಚು ಅಂಕ ಗಳಿಸಿದ್ದಾನೆ ಎಂಬುದರಿಂದ ಅವರ ಬುದ್ಧಿವಂತಿಕೆಯನ್ನು ಅಳೆಯದೇ ಎಲ್ಲಾ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಅವರ ಪ್ರತಿಭೆಗೆ ತಕ್ಕದಾದ ವಾತಾವರಣ ಮೂಡಿಸಿ ಅವರ ಆಲೋಚನೆಗಳನ್ನು ಅನಾವರಣಗೊಳಿಸುವುದು ಶಿಕ್ಷಕರ ಮುಖ್ಯವಾದ ಕೆಲಸ ಮತ್ತು ಗುರುತರ ಜವಾಬ್ದಾರಿ ಆಗಿರುತ್ತದೆ. ಮಕ್ಕಳು ಬಹುಬೇಗ ಬೇರೆಯವರನ್ನು ಅನುಸರಿಸುತ್ತಾರೆ. ಇಲ್ಲಿ ನಾವು ಅಂದರೆ ಶಿಕ್ಷಕರು ಅವರಿಗೆ ಒಳ್ಳೆಯ ಮತ್ತು ಕೆಟ್ಟದರ ಅರಿವು ಮೂಡಿಸಬೇಕು. ಉತ್ತಮವಾದ ವಿಚಾರಗಳುಳ್ಳ ನಿದರ್ಶನಗಳನ್ನು ಹೇಳಬೇಕು ಅದರಂತೆ ಅನುಸರಿಸಲು, ಆಲೋಚಿಸಲು ಅಳವಡಿಸಿಕೊಂಡಿರುವ ಸಿದ್ಧಾಂತಗಳನ್ನು ಮತ್ತು ಅವರ ಜೀವನದ ರೀತಿ–ನೀತಿಗಳನ್ನು ತಿಳಿಸಿ ವಿದ್ಯಾರ್ಥಿಗಳನ್ನು ಸಜ್ಜನರನ್ನಾಗಿ ಮಾಡುವುದು ಇಂದಿನ ಶಿಕ್ಷಣದ ಮತ್ತು ಶಿಕ್ಷಕರ ಆದ್ಯ ಕರ್ತವ್ಯವಾಗಿರುತ್ತದೆ.

ವಿದ್ಯಾರ್ಥಿಗಳ ಆಲೋಚನಾ ಸಾಮರ್ಥ್ಯದ ಬೆಳವಣಿಗೆಗೆ ಮುಖ್ಯವಾಗಿ ಮನಸ್ಸನ್ನು ಹೇಗೆ ಹಿತಕರವಾಗಿಟ್ಟುಕೊಳ್ಳಬೇಕು, ಸಕಾರಾತ್ಮಕ ಮಾನಸಿಕ ಪ್ರವೃತ್ತಿಯಿಂದ ತಮ್ಮ ಜೀವನವನ್ನು ಹೇಗೆ ಸಮತೋಲನದಿಂದ ಇಟ್ಟುಕೊಳ್ಳಬೇಕು. ಜೀವನವೆಂದರೆ ಕೇವಲ ಪರೀಕ್ಷೆಯಲ್ಲಿ ಪಡೆಯುವ ಅಂಕಗಳಲ್ಲ ಎಂಬುದನ್ನು ಮನಗಾಣಿಸಬೇಕು. ವಿದ್ಯಾರ್ಥಿಗಳ ಪ್ರತಿಭೆಗೆ ಕಡಿವಾಣ ಹಾಕದೆ, ಅವರ ಸ್ವತಂತ್ರ ಆಲೋಚನೆಗಳಿಗೆ ಪ್ರೋತ್ಸಾಹ ನೀಡಿ ಅವರ ಕುತೂಹಲಕರ ಪ್ರಶ್ನೆಗಳಿಗೆ ತಾಳ್ಮೆಯಿಂದ ಉತ್ತರ ನೀಡಿ ಅದನ್ನು ಸಕಾರಾತ್ಮಕವಾಗಿ ಬೆಳೆಸಿ, ಅವರ ಆಲೋಚನಾ ಸಾಮರ್ಥ್ಯ ವಿಸ್ತರಿಸುವಂತೆ ಮಾಡಬೇಕು. ವಿದ್ಯಾರ್ಥಿಗಳಲ್ಲಿ ತಮ್ಮದೇ ಆದ ವ್ಯಕ್ತಿತ್ವವಿರುತ್ತದೆ. ವೈವಿಧ್ಯಮಯ ಆಸಕ್ತಿಗಳಿರುತ್ತವೆ. ಅವರ ಆಲೋಚನಾ ಇಷ್ಟಗಳು ಭಿನ್ನವಾಗಿರುತ್ತವೆ. ಯಾವ ವಿದ್ಯಾರ್ಥಿ ತನ್ನ ಆಲೋಚನಾ ಸಾಮರ್ಥ್ಯದಿಂದ ವಿಷಯ ಗ್ರಹಿಸಿರುತ್ತಾನೋ, ಅಂತವನು ಮಾತ್ರ ಬದುಕಿನಲ್ಲಿ ಯಶಸ್ವಿಯಾಗುತ್ತಾನೆ ಎಂಬುದನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ಅರ್ಥೈಸಬೇಕು. ವಿದ್ಯಾರ್ಥಿಗಳಲ್ಲಿ ಪಠ್ಯಪುಸ್ತಕದ ಹೊರತಾದ ಉತ್ತಮ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಬೇಕು. ಇದು ಅವರ ಮಾನಸಿಕ ಬೆಳವಣಿಗೆಗೆ ಪೂರಕವಾಗುವುದು. ಅವರ ತಾರ್ಕಿಕ ಶಕ್ತಿಯನ್ನು ಹೆಚ್ಚಿಸುವುದು. ಇದರಿಂದ ಇತರ ಯಾವುದೇ ಕೆಲಸದಂತೆ ಯೋಚನಾ ಸಾಮರ್ಥ್ಯ ಕೂಡ ನಿತ್ಯದ ಅಭ್ಯಾಸವಾಗಿ ಉತ್ತಮಗೊಳ್ಳುತ್ತಾ ಹೋಗುತ್ತದೆ.

ಪ್ರಯತ್ನಶೀಲರಿಗೆ ಅಸಾಧ್ಯವಾದುದು ಯಾವುದು ಇಲ್ಲ. ವಿನಯಶಾಲಿಯೇ ವಿಜಯಶಾಲಿ ಎಂಬ ಸತ್ಯವನ್ನು ವಿದ್ಯಾರ್ಥಿಗಳಲ್ಲಿ ಬಿತ್ತಬೇಕು. ಶಿಸ್ತು, ಯೋಜಿತ ಬದುಕು ಮತ್ತು ದಿನನಿತ್ಯದ ವೇಳಾಪಟ್ಟಿ ಎಷ್ಟು ಅಮೂಲ್ಯವಾದುವುಗಳೆಂದು ತಿಳಿಹೇಳಬೇಕು.

ಅಂತಿಮವಾಗಿ ಶಿಕ್ಷಕರು ಮಕ್ಕಳ ಆಲೋಚನಾ ಶಕ್ತಿಗೆ, ಅವರ ಕನಸಿಗೆ ಬೇಲಿ ಹಾಕದೆ ಸ್ವತಂತ್ರವಾಗಿ, ಸಕಾರಾತ್ಮಕವಾಗಿ ಹರಿಯಲು ಬಿಟ್ಟು ಅವರ ಪ್ರಯತ್ನಗಳಿಗೆ, ಅವರ ಕುತೂಹಲಗಳಿಗೆ ಜೊತೆಯಾಗಿ ಸ್ಪಂದಿಸಿ ಇನ್ನೊಬ್ಬ, ಮಗದೊಬ್ಬ ಗಾಂಧಿ, ಬೋಸ್, ಐನ್‌ಸ್ಟೈನ್ ನ್ಯೂಟನ್‌ನಂತಹ ಮಹಾನ್ ವ್ಯಕ್ತಿಗಳನ್ನು ಮತ್ತೊಮ್ಮೆ ಹುಟ್ಟುಹಾಕಬೇಕು. ಶಿಕ್ಷಕರು ಕೇವಲ ಗುರಿಯನ್ನು ತೋರುವ ಗುರುಗಳಾಗದೇ ವಿದ್ಯಾರ್ಥಿಗಳ ನಿಜವಾದ ಆಪ್ತ ಸ್ನೇಹಿತ, ಹಿತೈಷಿ ಮತ್ತು ಬಂಧುವಾಗಿ ಯಾವುದೇ ಸಂಕೋಚವಿಲ್ಲದೇ, ಹಿಂಜರಿತವಿಲ್ಲದೇ ನೆರವು ಪಡೆದು ತಮ್ಮ ನಿಜವಾದ ಸಾಧನೆಯತ್ತ ಪ್ರಯತ್ನ ಮಾಡುವುದು ಉತ್ತಮ ಎಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುವುದು ಉತ್ತಮವಾದ ಮಾರ್ಗ.

ದೇಶಪ್ರೇಮ ಮೂಡಿಸುವ ನಾಡಿನ ಇತಿಹಾಸ ಪರಂಪರೆಗಳ ಬಗ್ಗೆ ಹೆಮ್ಮೆಪಟ್ಟುಕೊಳ್ಳುವಂತ, ಜೀವನದಲ್ಲಿ ಏನಾದರೂ ಸಾಧಿಸಬೇಕು ಎಂಬ ಆಲೋಚನೆಗಳನ್ನು ವಿದ್ಯಾರ್ಥಿಗಳಲ್ಲಿ ಹುಟ್ಟುಹಾಕುವ ಕೆಲಸ ಇಂದಿನ ಶಿಕ್ಷಕರ ಮತ್ತು ಶಿಕ್ಷಣದ ಮೂಲ ಧ್ಯೇಯವಾಗಬೇಕು ಮತ್ತು ಇದೇ ಮುಖ್ಯ ಉದ್ದೇಶವಾಗಬೇಕು. ●

# ಶಕುನಗಳ ಸಂದೇಶ

■ ಶ್ರೀಮತಿ ಸುನೀತಾ ಗಂಗಾಧರ್
ರಾಮನಗರ



ಆಗಸ್ಟ್ 2020ರ ಮಾಹೆಯ ಮೊದಲ ವಾರದಲ್ಲೇ ಕೋಟ್ಯಂತರ ಭಾರತೀಯರ ಹೃದಯದಲ್ಲಿ ವಿರಾಜಮಾನನಾದ ಪ್ರಭು ಶ್ರೀ ರಾಮನ ಜನ್ಮಸ್ಥಾನವಾದ ಅಯೋಧ್ಯೆಯಲ್ಲಿ 'ಶ್ರೀರಾಮಮಂದಿರ' ನಿರ್ಮಾಣದ ಶಂಕುಸ್ಥಾಪನೆ ಸಾಂಗವಾಗಿ ನೆರವೇರುವುದರೊಂದಿಗೆ ನೂರಾರು ವರ್ಷಗಳ ಅನ್ಯಾಯವೊಂದು ಕೊನೆಗೊಂಡು, ಅಸಂಖ್ಯ ಭಾರತೀಯರ ಕನಸು ಸಾಕಾರವಾಗಿ ಭವಿಷ್ಯದ ಕುರಿತಾಗಿ ನವ ಭರವಸೆಯ ಹೊಂಬೆಳಕನ್ನು ಮೂಡಿಸಿದೆ. ಇಂತಹ ಸಕಾರಾತ್ಮಕ ವಾತಾವರಣದಲ್ಲೇ ಕರೋನಾದಂತಹ ಮಾರಕ ವ್ಯಾದಿಯ ವೈರಾಣುವಿನ ನಿರ್ಮೂಲನೆಗಾಗಿ ನಾರಾಯಣ ಸ್ವರೂಪಿಗಳಾದ ವೈದ್ಯ- ವಿಜ್ಞಾನಿ ವೃಂದಗಳ ಪ್ರಯತ್ನ ಅನವರತ ನಡೆದಿದ್ದು, ಈ ನಡುವೆಯೇ ಕೆಲ ಭರವಸೆಯ ಆಶಾ ಕಿರಣಗಳು ಗೋಚರಿಸುತ್ತಿರುವುದು ಮಾನವ ಸಂಕುಲ ಈ ಸಂಕಷ್ಟದಿಂದ ಹೊರಬರುವ ಶುಭ'ಶಕುನಗಳು' ಗೋಚರಿಸುತ್ತಿವೆ.

"ಶಕುನಗಳು" ಈ ಹೆಸರು ಕೇಳದವರು ಯಾರೂ ಇರಲಿಕ್ಕಿಲ್ಲಾ, ಅಷ್ಟೊಂದು ಸರ್ವವ್ಯಾಪಿ ಇದು. ಇದರ ಹಿನ್ನೆಲೆ, ಸ್ವರೂಪ, ಮೂಲ, ವ್ಯಾಪ್ತಿ, ಸತ್ಯಾಸತ್ಯತೆಯ ಕುರಿತು ಅನೇಕ ಜನರಲ್ಲಿ ಕುತೂಹಲ ಹಾಗೂ ಪ್ರಶ್ನೆ ಇದ್ದೇ ಇದೆ.

ಜೀವನದಲ್ಲಿ ಘಟಿಸಬಹುದಾದ ಶುಭ- ಅಶುಭಗಳ ಮುನ್ಸೂಚನೆಯನ್ನು 'ಶಕುನ' ಎನ್ನಬಹುದು. ಯಾವ- ಯಾವ ಸಮಯದಲ್ಲಿ ಏನೇನು ನಡೆಯಬೇಕೋ ಅದು ನಡೆದೇ ನಡೆಯುತ್ತದೆ. ಅದನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೆ "ಮನುಷ್ಯ ತನ್ನ ಮನದ ಜಿಜ್ಞಾಸೆಗೆ ವರ್ತಮಾನದಲ್ಲಿ ನಡೆಯುವ ಕೆಲ ಸಂಗತಿಗಳನ್ನು ಭವಿಷ್ಯತ್ತಿನ ಜೀವನಕ್ಕೆ ಹೋಲಿಸಿ ಕಂಡುಕೊಳ್ಳುವ ಅಸ್ಪಷ್ಟ ಕಲ್ಪನೆಗಳನ್ನೇ 'ಶಕುನ'ಗಳೆನ್ನಬಹುದು."

ಈ ಶಕುನಗಳನ್ನು ನಂಬುವ ಜನ ಕೇವಲ ಭಾರತದಲ್ಲಷ್ಟೇ ಅಲ್ಲ, ಎಲ್ಲ ದೇಶಗಳಲ್ಲೂ ಇರುವರು. ಅಕ್ಷರಸ್ಥರು, ಅನಕ್ಷರಸ್ಥರೆನ್ನದೆ ಇದನ್ನು ನಂಬುವವರು ಹಲವು ಕ್ಷೇತ್ರಗಳಲ್ಲಿ ಉಂಟು. ಪ್ರಧಾನಿಮಂತ್ರಿ, ಮುಖ್ಯಮಂತ್ರಿ, ನಟರು, ಆಟಗಾರರು ಹೀಗೆ ಹಲವರು ತಮ್ಮ ತಮ್ಮ ಕ್ಷೇತ್ರದಲ್ಲಿ ಹೆಸರುವಾಸಿಗಳಾದವರಿಂದ ಹಿಡಿದು ಹಲ ಜನಸಾಮಾನ್ಯರವರೆಗೂ ನಂಬುವಂತಹ ಶಕುನಗಳು ಅನೇಕ ಇವೆ. ಕೆಲವರ ದಿನಚರಿ ಶುರುವಾಗೋದೆ ಈ ಶಕುನಗಳ ಪ್ರಸ್ತಾಪದಿಂದಲೇ. ಎದ್ದ ಘಳಿಗೆಯಲ್ಲಿ ಇಂತಹುದರ ದರ್ಶನವಾದ್ದರಿಂದಲೇ ಇಡೀ ದಿನ ಶುಭ/ ಅಶುಭವಾದದ್ದು ಎಂದು ಶುರುವಾಗುತ್ತೆ. ಶಕುನಗಳ ಬಗ್ಗೆ ಸ್ವಲ್ಪ ಹೇಳುವುದಾದರೆ ಮನುಷ್ಯ (ಕೆಲ) ತನ್ನ ಶರೀರದ ಯಾವುದಾದರೂ ಅಂಗ ಅಂದರೆ ಕಣ್ಣು ಅದುರಿದರೆ, ಭುಜ ಹಾರಿದರೆ, ಕೈಕಾಲುಗಳಲ್ಲಿ ನವೆಯುಂಟಾದರೆ, ಒಂಟಿ ಸೀನು ಬಂದರೆ, ಮನದಲ್ಲಿ ಕಸಿವಿಸಿ- ತಳಮಳ ಉಂಟಾದರೆ, ಶರೀರದ ಯಾವುದೇ ಭಾಗ (ತಲೆ, ಹಣೆ, ಕಣ್ಣು, ಮೂಗು ಇತ್ಯಾದಿ) ಮೇಲೆ ಹಲ್ಲಿಬಿದ್ದರೆ, ಆಯಾ ಅಂಗಗಳನ್ನಾಧರಿಸಿ ಶುಭ, ಅಶುಭ ಫಲಗಳೆಂದು ತಿಳಿವನು. ಜೀವಜಂತುಗಳಾದ- ಕಾಗೆ, ಬೆಕ್ಕು (ದಾರಿಗಡ್ಡ ಹೋದರೆ), ಗೂಬೆ, ಬಾವಲಿ, ಚೇಳು ಹಾವು (ಮನೆಯಲ್ಲಿ, ಕನಸಿನಲ್ಲಿ ಕಂಡರೆ), ಗಿಳಿ, ಪಾರಿವಾಳ, ನರಿ, ಜೇಡ, ಜೇನುಹುಳದ ಗೂಡು, ಇರುವೆ, ಜರಿ, ಹಲ್ಲಿ ಇತ್ಯಾದಿ ಪ್ರಾಣಿ- ಪಕ್ಷಿಗಳ ಕುರಿತಂತೆ ಶಕುನಗಳಿವೆ. ಕೆಲವು ವಸ್ತುಗಳಾದ ಕನ್ನಡಿ (ಒಡೆದರೆ), ಗಡಿಯಾರ, ಸೌದೆಹೊರೆ ಎದುರಿಗೆ ಬಂದರೆ, ಹೊಸಮಡಿಕೆ (ಸ್ವಪ್ನ, ಎದುರಿಗೆ), ಖಾಲಿಕೊಡ, ಒಣಹುಲ್ಲು, ಬೆಂಕಿ ಜೊತೆಗೆ ಯಾವುದೇ ಕಾರ್ಯಕ್ಕೆ ಹೊರಟಾಗ ಒಂಟಿ ಬ್ರಾಹ್ಮಣ, ವಿಧವೆ, ಅಶೌಚ (ಸಾವು ಸಂಬಂಧಿಸಿದ ಮನೆಯವರು) ಜನ ಕಾಣಿಸಿಕೊಂಡರೆ ಅಶುಭವೆಂದು ಭಾವಿಸುವರು. ಹೀಗೆ ಲೆಕ್ಕವಿಲ್ಲದಷ್ಟು ಶಕುನಗಳಿವೆ ಹಾಗೂ ಅದನ್ನು ನಂಬಿ ನಡೆದ ಜನರೂ ಇದ್ದಾರೆ. ಮೇಲಿರುವ ಶಕುನಗಳನ್ನು ಗಮನಿಸಿ, ನಮ್ಮ ಸುತ್ತ ಮುತ್ತ ಇರುವಂತಹ ಜೀವಿಗಳ ಕುರಿತೆ ಇವೆ. ಉದಾ ಕಾಗೆ, ಗೂಬೆಯಂತಹ ಪಕ್ಷಿಗಳು ಸುತ್ತ ಮುತ್ತವಿರೋ ತ್ಯಾಜ್ಯಮಾಂಸಗಳ ಸೇವಿಸಿ ಸ್ವಚ್ಛತಾ ಕಾರ್ಯ ಮಾಡುವಂತಹವು. ಆದ್ದರಿಂದ ಅಂತವು ಮನೆ ಪ್ರವೇಶಿದರೆ ಅಶುಭ ಎಂದರು. ಜೇಡ ಕಟ್ಟುವುದು, ಬಾವಲಿಗಳಿರುವುದು ಅಶುಭ ಸೂಚನೆ ಎನ್ನುವರು. ಎಲ್ಲಿ ಸ್ವಚ್ಛತೆ, ಸ್ವಚ್ಛ ವಾತಾವರಣ, ಬೆಳಕಿನ ಅಭಾವವಿರುವುದೋ ಆ ಸ್ಥಳಗಳಲ್ಲಿ ಇಂತಹವುಗಳು ವಾಸ ಮಾಡುತ್ತವೆ. ಅಂತಹ ವಾತಾವರಣ ನಿರ್ಮಾಣವಾಗದಂತೆ ಇವುಗಳ ಮುಖಾಂತರ ಸ್ವಚ್ಛತೆಯ ಮಹತ್ವ ತಿಳಿಸಿದ್ದಾರೆ. ಎಲ್ಲ ಶಕುನಗಳಿಗೂ ವೈಜ್ಞಾನಿಕ ಹಿನ್ನೆಲೆಯಿಲ್ಲ. ಉದಾ- ಬೆಕ್ಕು ದಾರಿಗಡ್ಡ ಹೋದರೆ, ವಿಧವೆಯರು ಎದುರಿಗೆ ಬಂದರೆ ಇತ್ಯಾದಿ, ಏಕೆಂದರೆ ನಾನು ಹಿಂದೆಯೇ ಹೇಳಿದಂತೆ ಕೆಲವೊಂದು ನಡವಳಿಕೆಗಳು ಆಯಾ ಪರಿಸ್ಥಿತಿಯಿಂದ ಹುಟ್ಟಿದವುಗಳಾಗಿರುತ್ತವೆ ಎಂದು. ಹಿಂದಿನ ಕಾಲದಲ್ಲಿ ಒಂದೂರಿನಿಂದ ಇನ್ನೊಂದು ಪ್ರದೇಶಕ್ಕೆ ತೆರಳಲು ಎತ್ತಿನ, ಕುದುರೆಯ ಬಂಡಿ ಬಳಸಲಾಗುತ್ತಿತ್ತು. ವಿದ್ಯುತ್ ದೀಪವಿರುವ ಕಾರಣ ರಾತ್ರಿ ಪ್ರಯಾಣದ ವೇಳೆ ಕತ್ತಲಲ್ಲಿ ಏನಾದರೂ ಬೆಕ್ಕು ಕಾಣಿಸಿದರೆ ಕುದುರೆ, ಹಸು, ಕತ್ತಲಲ್ಲಿ ಬೆಕ್ಕಿನ ಹೊಳೆಯುವ ಕಣ್ಣು ಕಂಡು ಗಾಬರಿಗೊಳ್ಳುತ್ತಿದ್ದವು (ಬೆಕ್ಕುಗಳ ಕಣ್ಣಿನ ರೆಟಿನಾ ಹಿಂಭಾಗದ ಪದರ ಹೆಪಿಡಂ ಯೂಸಿಡಂ ಎಂಬುದಿರುವುದರಿಂದ ಪ್ರಕಾಶಮಾನವಾಗಿ ಕಣ್ಣು ಹೊಳೆಯುತ್ತದೆ) ಆದ್ದರಿಂದ ಗಲಿಬಿಲಿಗೊಂಡ ಕುದುರೆ, ಹಸು ಶಾಂತಗೊಳ್ಳುವವರೆಗೆ ನಿಂತಿದ್ದು, ಆಮೇಲೆ ಪ್ರಯಾಣ ಮುಂದುವರೆಸುತ್ತಿದ್ದರಂತೆ. ಕ್ರಮೇಣ ಬೆಕ್ಕು ಎದುರು ಹಾದುಹೋದರೆ ಸ್ವಲ್ಪ ನಿಂತಿದ್ದು ನಂತರ ಪ್ರಯಾಣ ಬೆಳಸೋ ರೂಢಿ ವಿದ್ಯುತ್, ವಾಹನ ಮುಂತಾದ ಆಧುನಿಕ ಸಾಮಗ್ರಿ ಕಂಡುಹಿಡಿದ ನಂತರವೂ ಹೊಸರೂಪವನ್ನು ಜೋಡಿಸಿಕೊಂಡು

ಪುಟ 15 ಕ್ಕೆ ➤

➢ ಪುಟ 14 ರಿಂದ.....

ಮುಂದುವರೆದಿದ್ದು ವಿಪರ್ಯಾಸ. ಇದರಂತೆ ಮಕ್ಕಳಾಗದ, ವಿಧವೆಯರ, ಸೂತಕದಲ್ಲಿರುವವರ ದರ್ಶನವಾದರೆ ಅಪಶಕುನವೆಂದು ಭಾವಿಸಿವುದು– ದುಃಖಿತಪ್ತರೆದುರಿಗೆ ಸಂತೋಷ, ಸಮಾರಂಭ ಮಾಡಿದರೆ ಘಾಸಿಗೊಳ್ಳುವರೆಂಬುದಕ್ಕಾಗಿ ಅಂತಹ ಸ್ಥಳ ನಿಷಿದ್ಧಗೊಳಿಸಲಾಗಿತ್ತಷ್ಟೆ. ಕ್ರಮೇಣ ಕೆಲ ಸಂಕುಚಿತ ಮನಃಸ್ಥಿತಿಯ ವ್ಯಕ್ತಿಗಳ ಕೀಳು ಅಭಿಪ್ರಾಯಗಳಿಂದಾಗಿ ಇಂತಹ ಹಲವಾರು ಆಚರಣೆಗಳನ್ನು ಶಕುನಗಳ ಹೆಸರಲ್ಲಿ ಜನರ ಮೇಲೆ ಹೇರಲಾಯ್ತು. 21ನೇ ಶತಮಾನದಲ್ಲಂತೂ ಶಕುನಗಳ ಸ್ವರೂಪವೇ ಬದಲಾಗಿಬಿಟ್ಟಿದೆ. ಕೆಲ ಒಳ್ಳೆಯ ನಡೆತೆಗಳನ್ನು ರೂಢಿಸಿಕೊಳ್ಳಲು ಹಿರಿಯರು ಕೆಲವೊಂದಷ್ಟು ಆಚರಣೆಗಳನ್ನು ಪದ್ಧತಿ, ಪರಂಪರೆ, ಸಂಸ್ಕೃತಿ ಹೆಸರಲ್ಲಿ ರೂಢಿಸಿರೋದು ಸತ್ಯ. ಭಾರತೀಯ ಸನಾತನ ಸಂಸ್ಕೃತಿಯಲ್ಲಿ ಪ್ರತಿಯೊಂದು ಅಮೂರ್ತ ಮೌಲ್ಯವನ್ನು ಮೂರ್ತ ಸ್ವರೂಪದಿಂದ ಸಮಯೋಚಿತವಾಗಿ ಸಂಕೇತಿಸುವರು. ಅಲ್ಲದೆ ಮನುಷ್ಯನ ಅಗಾಧ ಧೀ ಶಕ್ತಿಯಾದ ಮನಸ್ಸು ಶಕ್ತಿಯ ಕೇಂದ್ರಬಿಂದು ಎಂದರಿತು ಅತೀ ಚಂಚಲವಾದ (ಪಾದರಸದಂತೆ) ಸ್ಥಿರವಲ್ಲದ ಮನಸ್ಸು ಎಲ್ಲ ಕಾರ್ಯಕ್ಕೂ ಮೂಲ. ಅದಕ್ಕಾಗಿಯೇ ಅನೇಕ ಶತಮಾನಗಳ ಹಿಂದೆಯೇ ಸನಾತನಿಗಳು ಮನಸ್ಸಿನ ಹಿಡಿತದಲ್ಲಿ ಮನುಷ್ಯನಲ್ಲಾ, ಮನುಷ್ಯನ ಹಿಡಿತದಲ್ಲಿ ಮನಸ್ಸಿರುವಂತೆ ಮಾಡುವ ಹಲವು ನಿಯಮಗಳನ್ನು ಸೂಚಿಸಿದ್ದಾರೆ. ಪುರಾತನ ಯಮನಿಯಮದ ಒಂದು ಸೂಕ್ತದಲ್ಲಿ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಎಂಬ 5 ನಿಬಂಧಗಳಲ್ಲದೆ ಕ್ಷಮೆ, ಧೃತಿ (ಧೈರ್ಯ) ದಯೆ, ಅರ್ಜವ (ಸರಳತೆ) ಅಲ್ಲದೆ ಶೌಚ (ಸ್ವಚ್ಛತೆ) ಸಂತೋಷ, ತಪಸ್ಸು, ಸ್ವಾಧ್ಯಾಯ, ಈಶ್ವರ ಪ್ರಣೀದಾನಗಳಿವೆ. ಒಂದೊಂದು ಕೂಡ ಜೀವನದ ನಿಜವಾದ ಮೌಲ್ಯ ಹೆಚ್ಚುವ ದಿಕ್ಕಿನತ್ತ ನಮ್ಮನ್ನು ಕೊಂಡೊಯ್ಯುತ್ತವೆ. ಶಕುನಗಳ ಬಗೆಗೆ ಮಾತನಾಡುತ್ತಿರುವಾಗ ಇವೆಲ್ಲಾ ಸಂಗತಿಗಳ ಪ್ರಸ್ತಾಪ ಏಕೆಂದು ಅನಿಸಿರಬೇಕಲ್ಲವೇ. ಮೇಲೆ ಸೂಚಿಸಿದ ಅಷ್ಟೂ ನಿಯಮ ನಿಬಂಧನೆಗಳು ಮನುಷ್ಯನ ಮನಸ್ಸ(ಚಿತ್ತ)ನ್ನು ಕೇಂದ್ರಿಕೃತಗೊಳಿಸುವ ಪ್ರಕ್ರಿಯೆಗಳ ಶಕುನಗಳನ್ನು ಆಚರಿಸೋ, ನಂಬುವ ವ್ಯಕ್ತಿಗಳಲ್ಲಿ ಪ್ರಧಾನವಾಗಿರುವುದು ಅವರ ಮನಸ್ಥಿತಿಯೇ.

ಹಿಂದೆ ತ್ರೇತಾಯುಗದಲ್ಲಿ ವಾಲ್ಮೀಕಿ ಮಹರ್ಷಿ ಜೋಡಿ ಕ್ರೌಂಚ ಪಕ್ಷಿಗಳನ್ನು ಕಂಡಾಗ ಪ್ರಕೃತಿಯು ದ್ವಿತ್ವವನ್ನು ಸೃಷ್ಟಿಸಿ ಅವು ಮತ್ತೆ ಏಕತ್ವವಾಗುವ ಪರಿ ಕಂಡು ಜೀವರಹಸ್ಯದ ವಿಸ್ಮಯ ಕುರಿತು ಚಿಂತಿಸುತ್ತಿರುವಾಗ ಬೇಡನಿಂದಾದ ಕೃತ್ಯದಿಂದ ದುಃಖಕ್ಕೊಳಗಾಗಿ ಅದ್ಭುತ ಸಂಸ್ಕೃತ ಶ್ಲೋಕದ ಉಗಮದೊಂದಿಗೆ 'ರಾಮಾಯಣ'ವೆಂಬ ಜಗದ್ವಿಖ್ಯಾತ ಕೃತಿಯ ಸೃಷ್ಟಿಯಾಯಿತು. ಈ ರಾಮಾಯಣ ಮಹಾಗ್ರಂಥದಲ್ಲಿ ವಾಲ್ಮೀಕಿ ಮಹರ್ಷಿಯು ಶಕುನಗಳ ಕುರಿತಾಗಿ ಹೇಳಿರುವಂತೆ– ರಾಮನ ಪಟ್ಟಾಭಿಷೇಕದ ಸಂಭ್ರಮದ ವಾತಾವರಣ ಸುತ್ತಲೂ ಇದ್ದಾಗ, ದಶರಥ ಮಹಾರಾಜನಿಗೆ ಕಳವಳ, ಭೀತಿ, ಅಪಶಕುನಗಳ ಸಂಕೇತಗಳು ಕಾಣಲಾರಂಭಿಸಿದವು ಎಂದು ಕೊನೆಗೆ ಆತನ ಸಾವಿನ ಕೊನೆ ಘಳಿಗೆಯಲ್ಲಿ ತನ್ನ ಮನಸ್ಸಿನಲ್ಲಿ ಅಡಗಿದ್ದ ಪಾಪ ಭೀತಿಯನ್ನು ಹೊರ ಹಾಕುತ್ತಾನೆ. ಋಷಿ ಕುಮಾರ ಶ್ರವಣ, ಆತನ ಮಾತಾ–ಪಿತೃಗಳಿಗಾದ ಅನ್ಯಾಯ ಆತನ ಚಿತ್ತವನ್ನು ಪಾಪಪ್ರಜ್ಞೆಯಿಂದ ತುಂಬಿಸಿರುತ್ತದೆ. ಆ ಅಶಾಂತ ಮನಸ್ಸೆ ರಾಮನ ಕುರಿತಾಗಿ ಸಂಭ್ರಮಿಸಲು ಆಸ್ಪದ ನೀಡಿರುವುದಿಲ್ಲ. ಇಲ್ಲಿ ಕೈಕೇಯಿ ನಿಮಿತ್ತ ಮಾತ್ರ.

ಇತ್ತ ಭರತನಿಗೂ ಕೂಡ ಏನೋ ಅಮಂಗಳಕರವಾದದ್ದು ಅಯೋಧ್ಯೆಯಲ್ಲಿ ಘಟಿಸುತ್ತಿದೆ ಅನ್ನಿಸುತ್ತಿರುತ್ತದೆ. ತಮ್ಮ ಮನಸ್ಸಿಗೆ ಹತ್ತಿರವಾದ, ಪ್ರೀತಿ ಪಾತ್ರರಿಗೆ ಏನಾದರೂ ಘಟಿಸಿದಾಗ ಸಹಜವಾಗಿ ಮನಸ್ಸಿನ ಮೇಲೆ ಹಿಡಿತವಿದ್ದವರಿಗೆ ಆ ಅನುಭೂತಿ ಸಹಜ (ಹಿಂದೆ ಇದನ್ನು ಅತೀಂದ್ರಿಯ ಶಕ್ತಿ ಎಂದರೆ ವೈಜ್ಞಾನಿಕ ಭಾಷೆಯಲ್ಲಿ 'ಟೆಲಿಪತಿ' ಅನ್ನುವರು) ಯುದ್ಧ ಸಮಯದಲ್ಲಿ ಸತಿ ಮಂಡೋದರಿಗಾದ ಅಪಶಕುನಗಳು, ಸೀತೆಯ ಹುಡುಕಾಟದಲ್ಲಿದ್ದ ಹನುಮನಿಗೆ ಆದ ಶಕುನಗಳು, ರಾಮಾಯಣ ಕಾಲದಲ್ಲೇ. ಇವುಗಳು ಆಯಾ ವ್ಯಕ್ತಿ, ಸನ್ನಿವೇಶ, ಅವರ ನಿರ್ಮಲ ಮನಸ್ಸಿಗೆ ಸರಿ–ತಪ್ಪುಗಳ ವಿಶ್ಲೇಷಣೆ ಮಾಡಿದಾಗ ಆದ ಅನುಭೂತಿಗಳ ಸರಮಾಲೆಯಿದೆ, ವಿವರಣೆಯಿದೆ.

ಆಧುನಿಕ ಮನಃಶಾಸ್ತ್ರಜ್ಞರಾದ 'ಬಂಡೂರಾ'ನ ಸಿದ್ಧಾಂತವಾದ 'ವೀಕ್ಷಣಾತ್ಮಕ ಕಲಿಕಾ' ಸಿದ್ಧಾಂತದ ಅನುಸಾರ (ಅನುಕರಣೆ ಅಥವಾ ವೀಕ್ಷಣೆ ಮಾಡಿ ಅದನ್ನು ಮಾಡುವುದು) ಮನುಷ್ಯನ ಸ್ವಭಾವ ವಿವೇಚನೆ ಇಲ್ಲದೆಯೂ ಯಾರು ಏನನ್ನು ಅನುಸರಿಸಿದರೂ (ಸಕಾರಣವಲ್ಲದ್ದೂ ಸೇರಿ) ಅಂಧಾನುಕರಣೆ ಆತನ ಸಹಜ ಸ್ವಭಾವವಾಗಿದೆ. ಬ್ರೂನರನ ಅನ್ವೇಷಣಾತ್ಮಕ ಕಲಿಕಾ ಸಿದ್ಧಾಂತದಂತೆ ಯಾವುದೇ ಕೆಲಸದಲ್ಲಿ ವಿಷಯ ಕುರಿತಾಗಿ ಅನ್ವೇಷಣಾ (ಅರಿಯುವ) ಮನಸ್ಥಿತಿ ಕೆಲವರದ್ದಾಗಿದ್ದು, ಅದು ಕೆಲವೊಮ್ಮೆ ಸಕಾರಾತ್ಮಕ ವಿಷಯ ಮುನ್ನಲೆಗೆ ಬರಲು ಅನುಕೂಲಕರವೂ ಆಗಿದೆ. ಎಲ್ಲ ವೈಜ್ಞಾನಿಕ, ಮೂಢತೆ ಪಕ್ಕಕ್ಕಿಟ್ಟು ಗಮನಿಸೋದಾದರೆ, ನಮ್ಮ ಹಿರಿಯರು ಹೇಳಿದಂತೆ ಮನುಷ್ಯ–ಪ್ರಕೃತಿ ಎರಡೂ ಒಂದೇ, ಯಾವ ರೀತಿ ಮನುಷ್ಯನೊಳಗೊಂಡು ಪ್ರಕೃತಿ ಇದ್ದು ಬಾಹ್ಯ ಆಂತರಿಕ ಪ್ರಕೃತಿ ಏಕತ್ವವೋ, ಮನುಷ್ಯ ಈ ಸತ್ಯ ಅರಿತು ಪ್ರಕೃತಿಯೊಳಗೊಂದಾಗಿ ಅಲ್ಲಿರುವ ಇತರೆ ಜೀವಿಗಳ ಜೊತೆಗೆ ಸಾಮರಸ್ಯ, ಅಂತರ ಕಾಯ್ದುಕೊಂಡು ಬಾಳುವುದನ್ನೇ ಹೇಳಿಕೊಟ್ಟಿದ್ದಾರೆ. ಯಕಃಚಿತ್ ಎನ್ನಬಹುದಾದ ಇರುವೆಯೂ ಕೂಡ ಈ ಭೂಮಿಯಲ್ಲಿ ಒಂದು ಭಾಗ. ಅವುಗಳ ಕಂಡರೆ ಶುಭ ಅವಕ್ಕೆ ಆಹಾರ ನೀಡಿ ಎಂದು ಮಾನವೀಯತೆಯ ಜೊತೆ, ಹುತ್ತ, ಪ್ರಾಣಿ ವಾಸಿಸೋ ಜಾಗಗಳಲ್ಲಿ,ಮನುಷ್ಯ ಮನೆಕಟ್ಟಿದರೆ ಅಶುಭ ಎಂದು ಭೀತಿಯನ್ನು ಹುಟ್ಟು ಹಾಕುತ್ತಾರೆ. (ಪ್ರಾಣಿ–ಪಕ್ಷಿ ಸಂಕುಲಕ್ಕೆ ಅವುಗಳದೇ ಆದ ಕಾರಿಡಾರ್ ಇದ್ದು ಅಲ್ಲಿ ಅತಿಕ್ರಮಣ ಮನುಷ್ಯನಿಂದಲೇ ಆಗುತ್ತಿರುವುದು) ಶುಭ, ಅಶುಭ ಫಲಗಳ ಭೀತಿ ಮನುಷ್ಯನ ದುರ್ಬಲ ಮನಸ್ಸಿನ ವಿಚಾರಗಳಷ್ಟೇ. ಶ್ರೀಕೃಷ್ಣನು ದ್ವಾಪರದಲ್ಲೇ ಭಗವದ್ಗೀತೆಯಲ್ಲಿ ಹೇಳಿದ ಈ ಮಾತು ಸದಾ ಕಾಲಕ್ಕೂ ಪ್ರಸ್ತುತವೇ. ಯಾವುದೇ ಕಾಯಕ(ಕೆಲಸ) ಮಾಡಿದರೂ ತ್ರಿಕರಣ ಶುದ್ಧಿಯಿಂದ, ಫಲವನ್ನು ಆಶಿಸದೆ, ಭವಬಂಧನಗಳನ್ನು ಬಿಟ್ಟು ಮಾಡುವುದೇ ಮನುಷ್ಯನ ಕರ್ತವ್ಯೆಂದು ಹೇಳಿದ್ದು. ಈ ರೀತಿ ನಡೆದರೆ, ಮನುಷ್ಯ ಅಶುಭ–ಅಶುಭವೆಂಬ ಭೀತಿ ಚಿಂತನೆಗಳೆಂಬ ಸುಳಿಯಿಂದ ಹೊರಬಂದು ನಿರ್ಮಲ ಮನಸ್ಸಿನಿಂದ ಜೀವಿಸಬಹುದು. ಜೀವನದ ಅಂತಿಮ ಸತ್ಯವಾದ ಸಾವಿನ ಸೂಚನಕವಾದ ಬಿಳಿಗೂದಲು, ಚರ್ಮಸುಕ್ಕುಗಟ್ಟುವಿಕೆ, ಕಣ್ಣು–ಕಿವಿ ಮಂದವಾಗುವಿಕೆ, ಹಲ್ಲುದುರಿ ಅನಾರೋಗ್ಯಪೀಡಿತರಾಗಿ ಮಂಚವೇರುವ ಸೂಚನೆಗಳು ಯಮನ ಆಗಮನದ ನಿಕಟತೆಯನ್ನು ಸೂಚಿಸುವ ಶಕುನಗಳಾಗಿದ್ದು, ಕೆಲವರಿಗೆ ಅದು ದುಃಖ (ಅಮಂಗಳ) ಭಾವ ಸ್ಫುರಿಸುವಂತೆ ಮಾಡಿದರೆ, ಸಾಧಕರಿಗೆ ಮಹಾನಮವಿಯ ಆನಂದ ಹಾಗೂ ಮುಕ್ತಿಯ ಮಾರ್ಗವಾಗಿ ಶುಭಕರವಾಗಿ ತೋರುತ್ತದೆ. ಶುಭ–ಅಶುಭ ಬೇರೆಲ್ಲೂ ಇಲ್ಲ, ನೋಡುವ ದೃಷ್ಟಿ ಹಾಗೂ ಸ್ವೀಕರಿಸುವ ಮನಸ್ಸಿನಲ್ಲಿದೆ.

●

# ಸ್ವಾತಂತ್ರ್ಯ ಹೋರಾಟಕ್ಕೆ ತಿಲಕರ ಕೊಡುಗೆ

## – ಶ್ರೀ ಬಿ.ಎಲ್. ಸಂತೋಷ್‌ಜಿ



**ಶ್ರೀಮತಿ ಡಾ. ಎಸ್. ಸಿ ರಂಜಣಗಿ**
ಸಹಶಿಕ್ಷಕಿ,
ಸರಕಾರಿ ಪ.ಪೂ ಕಾಲೇಜು (ಪ್ರೌ.ವಿ)
ಸೂಳೇಭಾವಿ, ತಾ ॥ ಹುನಗುಂದ,
ಬಾಗಲಕೋಟೆ ಜಿಲ್ಲೆ.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ(ರಿ), ಬೆಂಗಳೂರು ಇವರು ದಿನಾಂಕ 02.08.2020 ಭಾನುವಾರ ಸಂಜೆ 6.30 ನಿಮಿಷಕ್ಕೆ ಸ್ವಾತಂತ್ರ್ಯ ಹೋರಾಟಗಾರರಾದ ಬಾಲಗಂಗಾಧರ್ ತಿಲಕ್‌ರವರ 100 ನೇ ಪುಣ್ಯತಿಥಿಯ ಅಂಗವಾಗಿ "ಸ್ವಾತಂತ್ರ್ಯ ಹೋರಾಟಕ್ಕೆ ತಿಲಕರ ಕೊಡುಗೆ" ಎಂಬ ವಿಷಯವಾಗಿ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಉಪನ್ಯಾಸಕರಾಗಿ ಶ್ರೀ ಬಿ. ಎಲ್. ಸಂತೋಷ್‌ಜಿ, ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳು, ಬಿಜೆಪಿಯವರು ಭಾಗವಹಿಸಿದ್ದರು. ಬಾಲಗಂಗಾಧರ ತಿಲಕರ ಎರಡು ಪ್ರಮುಖ ಮೂಲಭೂತ ಕಲ್ಪನೆಗಳ ಕುರಿತು ಶ್ರೀ ಬಿ.ಎಲ್. ಸಂತೋಷ್‌ಜಿಯವರ ವಿಚಾರಧಾರೆಗಳು ಅದ್ಭುತವಾಗಿದ್ದವು.

"ಭಾರತದ ಅಸಂತೋಷದ ಜನಕ" ಎಂಬ ಬ್ರಿಟಿಷರ ಮಾತೇ ಬಾಲ ಗಂಗಾಧರ ತಿಲಕರಿಗೆ ಭೂಷಣವಾಯ್ತು. "ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು. ಯಾವುದೇ ಬೆಲೆ ತೆತ್ತಾದರೂ ನಾವು ಪಡೆದೇ ಪಡೆದುಕೊಳ್ಳುತ್ತೇವೆ" ಎಂಬ ತಿಲಕರ ನಿಲುವು ಅವರ ಸ್ವರಾಜ್ಯದ ಪರಿಕಲ್ಪನೆಯನ್ನು ತೋರಿಸುತ್ತದೆ. ಗಾಂಧೀಜಿಯವರು ತಿಲಕರನ್ನು ಆಧುನಿಕ ಭಾರತದ ನಿರ್ಮಾತೃ ಎಂದೇ ಬಣ್ಣಿಸಿದರು. ಏಕೆಂದರೆ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಗತಿಯನ್ನಷ್ಟೇ ತಂದು ಕೊಡಲಿಲ್ಲ, ಬದಲಾಗಿ ಫಲಿತಾಂಶದ ತಿರುವನ್ನು ತಂದುಕೊಟ್ಟರು. ಕಾಂಗ್ರೆಸ್ಸಿಗೆ ಸೇರಿದ ನಂತರ ತೀವ್ರಗಾಮಿ ಗುಂಪಿನ ಮುಖ್ಯಸ್ಥರಾಗಿ ನೇತೃತ್ವವನ್ನು ವಹಿಸಿಕೊಂಡು ಮುನ್ನೆಡೆಸಿದರು. ಲೋಕಮಾನ್ಯ ತಿಲಕರು ಎರಡು ಪ್ರಮುಖ ಕಾರಣಗಳಿಂದಾಗಿ ನಮ್ಮ ಮಧ್ಯೆ ಉಳಿದುಕೊಂಡಿದ್ದಾರೆ ಎಂದು ಹೇಳಬಹುದು. ಅವುಗಳೆಂದರೆ 1. ಬ್ರಿಟಿಷರು ಮತ್ತು ರಾಜರ ಮಧ್ಯದ ಸಂಘರ್ಷವನ್ನು ಬ್ರಿಟಿಷರು ಮತ್ತು ಭಾರತದ ಮಧ್ಯದ ಸಂಘರ್ಷವನ್ನಾಗಿ ಪರಿವರ್ತಿಸಿದರು. 2. ಭಾರತದ ಶಿಕ್ಷಣವನ್ನು ಭಾರತೀಕರಣ ಅಥವಾ ಸ್ವದೇಶಿಕರಣಗೊಳಿಸುವುದು.

ತಿಲಕರು ರಾಜಕೀಯದ ಜೊತೆಗೆ ಮೂಲಭೂತ ಕಲ್ಪನೆಯನ್ನು ನೀಡಿದರು. ಈಗಿನ ಪ್ರಧಾನಿಯವರು ಆತ್ಮನಿರ್ಭರತೆಯ ಪರಂಪರೆ, ತಿಲಕರ 'ಸ್ವದೇಶಿ ಚಳುವಳಿ'ಯ ಮುಂದುವರೆದ ಭಾಗವೆಂದರೆ ತಪ್ಪಾಗಲಾರದು. ಸ್ವದೇಶ ಉದ್ಯಮಿ, ಸ್ವದೇಶಿ ವಸ್ತುಗಳ ಬಳಕೆಯಿಂದ ಮಾತ್ರವೇ ಸ್ವಾತಂತ್ರ್ಯದ ಬಯಕೆ ಕೈಗೂಡಲು ಸಾಧ್ಯವೆಂಬುದು ಅವರ ನಿಲುವಾಗಿತ್ತು. ಇನ್ನೊಂದು ಪ್ರಮುಖ ವಿಚಾರವೆಂದರೆ ರಾಷ್ಟ್ರೀಯ ಶಿಕ್ಷಣ– ಆಳುವವರ ಶಿಕ್ಷಣ ನೀತಿ ಜನರನ್ನು ದಾಸ್ಯದ ಕಡೆಗೆ ಕೊಂಡೊಯ್ದರೆ ಸ್ವಾತಂತ್ರ್ಯದ ಹಂಬಲದ ಕಡೆಗೆ ಕೊಂಡೊಯ್ಯುತ್ತದೆ, ಎಂಬುದು ಅವರ ಬಲವಾದ ವಾದವಾಗಿತ್ತು. ಇಂತಹ ಶಿಕ್ಷಣದಿಂದ ಸತ್ವ ಹೊರಹೊಮ್ಮುವುದು. ಸತ್ವವಿರದೇ ಹೋದರೆ ಸ್ವತಂತ್ರ ಮನಸ್ಸು, ಸ್ವತಂತ್ರ ವಿಚಾರ, ಸ್ವತಂತ್ರ ಜೀವನ, ಸ್ವತಂತ್ರ ದೇಶ ರೂಪುಗೊಳ್ಳುವುದಿಲ್ಲವೆಂಬುದು ತಿಲಕರ ವಿಚಾರವಾಗಿತ್ತು.

ಆಂಗ್ಲ ಭಾಷೆಯೇ ಸರ್ವಶ್ರೇಷ್ಠವೆಂದು, ಅನಿವಾರ್ಯವೆಂದು ಹೇಳಿದ ಸಂದರ್ಭದಲ್ಲಿ ಜನಸಾಮಾನ್ಯರ ಪಾಲ್ಗೊಳ್ಳುವಿಕೆಯನ್ನು ಸಾಧಿಸಿ ತೋರಿಸಿದ ಮಹನೀಯರು ತಿಲಕರು. ಅಂದಿನ ಶಿಕ್ಷಕರಿಗೂ ಕೂಡ ಸತ್ವವಿರುವ ಶಿಕ್ಷಣಕ್ಕೆ ಒತ್ತುನೀಡಲು ಕರೆನೀಡಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಸಂಸ್ಕೃತಿಯ ಛಾಪು ಇರದಿದ್ದರೆ, ಶುಷ್ಕತೆ ಇರುತ್ತದೆ ಎಂಬ ಕಾರಣದಿಂದ ಪುಣೆಯಲ್ಲಿ ಮೊಟ್ಟ ಮೊದಲ ಬಾರಿಗೆ ಸಾರ್ವಜನಿಕ ಗಣೇಶೋತ್ಸವವನ್ನು ದೊಡ್ಡ ಪ್ರಮಾಣದಲ್ಲಿ ಆಚರಿಸುವುದರೊಂದಿಗೆ ಸ್ವಾತಂತ್ರ್ಯ ಸಂಗ್ರಾಮದ ಸ್ವರೂಪ ನೀಡಿದರು. ರಾಯಗಢದಲ್ಲಿ ಶಿವಾಜಿ ಜಯಂತಿ ಶ್ರೀಕಾರ ಹಾಕಿದವರೂ, ತಿಲಕರೆ.

ಪತ್ರಿಕಾ ಮಾಧ್ಯಮವನ್ನು ಜನಜಾಗರಣೆ, ಜನಶಿಕ್ಷಣಕ್ಕಾಗಿ ಬಳಸಿಕೊಂಡರು. ಭಾಷಣ, ಲೇಖನ ಮತ್ತು ಸಂಪಾದಕೀಯದ ಮುಖಾಂತರ ಸ್ವಾತಂತ್ರ್ಯದ ಕಿಚ್ಚು ಹಚ್ಚುವಲ್ಲಿ ಯಶಸ್ವಿಯಾದರು. ಬ್ರಿಟಿಷರನ್ನು ಅಲ್ಲಾಡಿಸಿದರು. ಹೀಗಾಗಿಯೇ ದೇಶದ್ರೋಹದ ಆರೋಪದ ಮೇಲೆ ಎರಡು ಬಾರಿ ಜೈಲಿಗೂ ಹೋಗಿ ಬಂದರು. ಆಲೋಚಕರು ತಿಲಕರನ್ನು ಮೂರು ವಿಚಾರಗಳಲ್ಲಿ ವಿಶ್ಲೇಷಣೆ ಮಾಡುವುದು ಹೀಗೆ– 1. ಅಸಂದಿಗ್ಧ ಬದ್ಧತೆ 2. ನಿಷ್ಕಾಮ ಕರ್ಮಯೋಗ 3. ಲೋಕ ಸಂಗ್ರಹ. ಇದರಿಂದಾಗಿಯೇ ತಿಲಕರಿಗೆ ಕೊನೆಯುಸಿರು ಇರುವವರೆಗೆ ಕೆಲಸ ಮಾಡಲು ಸಾಧ್ಯವಾಯಿತು. ಸ್ವಾಮಿ ವಿವೇಕಾನಂದ, ಅರವಿಂದ ಘೋಷ್, ಮಹಾತ್ಮ ಗಾಂಧೀಜಿ, ದಯಾನಂದರ ಚಿಂತನೆ ಬರಹಗಳು ತಿಲಕರ ಮೇಲೆ ದಟ್ಟ ಪ್ರಭಾವ ಬೀರಿದೆ. ಜೈಲಿನಲ್ಲಿರುವಾಗಲೇ ಗೀತಾ ರಹಸ್ಯವನ್ನು ಮರಾಠಿಯಲ್ಲಿ ಬರೆದರು. ಇವರು ಓದಿದ್ದು ಕಾನೂನಾದರೂ, ಪಾಠ ಮಾಡಿದ್ದು ಗಣಿತವನ್ನು. ಬಹು ವಿದ್ಯಾ ವಿಶಾರದರಾಗಿದ್ದರು. ನ್ಯಾಷನಲ್ ಶಾಲೆಗಳನ್ನು ಪ್ರಾರಂಭ ಮಾಡಿದರು. ಸ್ತ್ರೀ ಶಿಕ್ಷಣ, 18 ವಯಸ್ಸಿನ ನಂತರ ಹೆಣ್ಣು ಮಕ್ಕಳ ವಿವಾಹ, ಅಸ್ಪೃಶ್ಯತೆ ವಿರುದ್ಧ ಆಂದೋಲನ ಮಾಡಿದರು.

ಹೀಗೆ ಬಾಲಗಂಗಾಧರ್ ತಿಲಕರು ಜೀವನ ಇಂದಿಗೂ ನಮ್ಮೆಲ್ಲರಿಗೂ ಆದರ್ಶಪ್ರಾಯ ಎಂಬ ವಿಚಾರವನ್ನು ಅದ್ಭುತವಾಗಿ, ಮಾರ್ಮಿಕವಾಗಿ ಶ್ರೀಯುತ ಬಿ.ಎಲ್. ಸಂತೋಷ್‌ಜಿಯವರು ವ್ಯಕ್ತಪಡಿಸಿದರು.


ಕೊನೆಗೆ ರಾಜ್ಯಾಧ್ಯಕ್ಷರಾದ ಶ್ರೀ ಸಂದೀಪ್ ಬೂದಿಹಾಳ್‌ರವರು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದರು. ಕಾರ್ಯಕ್ರಮವನ್ನು ಶ್ರೀಯುತ ಚಿದಾನಂದ್ ಪಾಟೀಲ್, ರಾಜ್ಯ ಕಾರ್ಯದರ್ಶಿಗಳು, ಸ್ವಾಗತದೊಂದಿಗೆ ಪ್ರಾರಂಭಿಸಿದರು. ಮಹಿಳಾ ಪ್ರಮುಖರಾದ ಶ್ರೀಮತಿ ಮಮತಾ ಡಿ ಕೆಯವರು ಸರಸ್ವತಿ ವಂದನೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

●

# 'ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕಿಯ ಪಾತ್ರ' ಕಾರ್ಯಕ್ರಮದ ವರದಿ

## "ಪ್ರಾಥಮಿಕ ಹಂತದಲ್ಲಿ ಶಿಕ್ಷಕಿಯರ ಸಂಖ್ಯೆ ಶೇಕಡ ನೂರಾಗಲಿ"

**– ನಿರ್ಮಲಾ ಸೀತಾರಾಮನ್**






74 ನೇ ಸ್ವಾತಂತ್ರ್ಯದ ನಿಮಿತ್ತ, ಭಾರತದ ಅತಿ ದೊಡ್ಡ ಶಿಕ್ಷಕ ಸಂಘಟನೆ 'ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘ'ದ ಆಶ್ರಯದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಆಯೋಜಿಸಿದ್ದ ವೆಬಿನಾರ್‌ನಲ್ಲಿ 'ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕಿಯ ಪಾತ್ರ' ಎಂಬ ವಿಷಯವನ್ನು ಕುರಿತು ದಿನಾಂಕ 08.08.2020 ರ ಶನಿವಾರ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರು ಭಾಗವಹಿಸಿ, ದಕ್ಷಿಣ ಭಾರತದ ಆರು ರಾಜ್ಯಗಳಾದ ಕರ್ನಾಟಕ, ಕೇರಳ, ತೆಲಂಗಾಣ, ಆಂಧ್ರಪ್ರದೇಶ, ಪುದುಚೇರಿ ಹಾಗೂ ತಮಿಳುನಾಡಿನ ಎಲ್ಲ ಶಿಕ್ಷಕರನ್ನು ಕುರಿತು ಮಾತನಾಡುತ್ತಾ, 'ನಮ್ಮ ದೇಶದಲ್ಲಿ ಶಿಕ್ಷಣ ಪಡೆದ ಯಾರನ್ನೇ ನೀವು ವಿಚಾರಿಸಿದರೂ ಅವರು ತಮ್ಮ ಮೇಲೆ ಅತಿ ಹೆಚ್ಚು ಪ್ರಭಾವ ಬೀರಿದ ವೃತ್ತಿ ನಮ್ಮ ಶಿಕ್ಷಕರದ್ದು' ಎಂದು ಉತ್ತರಿಸುತ್ತಾರೆ. ಮಾಜಿ ರಾಷ್ಟ್ರಪತಿಗಳಾಗಿದ್ದ ದಿವಂಗತ ಅಬ್ದುಲ್ ಕಲಾಂರವರನ್ನು ಇದೇ ಪ್ರಶ್ನೆ ಕೇಳಿದ್ದಾಗ, ಅವರು ತಮ್ಮ ಶಿಕ್ಷಕರು ಹಾಗೂ ವಿಜ್ಞಾನ ಶಿಕ್ಷಕರನ್ನು ನೆನಪಿಸಿಕೊಂಡರು. ನಮ್ಮ ತಂದೆಯವರು ಸರ್ಕಾರಿ ನೌಕರಿಯಲ್ಲಿ ಇದ್ದುದರಿಂದ ನಾನು ಬೇರೆ-ಬೇರೆ ಊರಿನಲ್ಲಿ ಶಿಕ್ಷಣ ಪಡೆಯಬೇಕಾಗುತ್ತಿತ್ತು. ಹೀಗಾಗಿ ನನಗೆ ಇಂದಿಗೂ ಪ್ರತಿಶಾಲೆಯ ಒಬ್ಬಿಬ್ಬ ಶಿಕ್ಷಕರ ಹೆಸರು ನೆನಪಿದೆ' ಎಂದು ಶಿಕ್ಷಕರ ಮಹತ್ವವನ್ನು ಕುರಿತು ಹೇಳಿದರು.

ಮುಂದುವರೆದು ನಮ್ಮ ಸಂಸ್ಕೃತಿಯಲ್ಲಿ ತಾಯಿ-ತಂದೆಯರ ನಂತರದ ಸ್ಥಾನ ಗುರುಗಳಿಗಿದೆ. ಮಗು ಹೆಚ್ಚು ಕಾಲ ಶಾಲೆಯಲ್ಲಿ ಕಳೆಯುವುದರಿಂದ ಮಗುವಿಗೆ ತಂದೆ-ತಾಯಿಗಿಂತ, ಶಿಕ್ಷಕರೇ ಹತ್ತಿರದವರಾಗುತ್ತಾರೆ. ಮಗುವಿನ ಮೇಲೆ ಶಿಕ್ಷಕರ ಪ್ರಭಾವವೇ ಹೆಚ್ಚು. ಅದಕ್ಕೆ ಶಿಕ್ಷಕರ ಮಾತೇ ವೇದವಾಕ್ಯವಾಗುತ್ತದೆ ಎನ್ನುತ್ತಾ, ಅದಕ್ಕಾಗೇ ಸಮಾಜದಲ್ಲಿ ಶಿಕ್ಷಕರ ಪಾತ್ರ ತುಂಬಾ ಮಹತ್ವದ್ದಾಗಿದೆ. ನಮ್ಮ ಪ್ರಧಾನಿ ಮೋದಿಯವರಂತೂ ಭಾರತದ ಪ್ರತಿ ಮಗುವಿಗೂ ಉತ್ತಮವಾದ ಶಿಕ್ಷಣ ಸಿಗಬೇಕೆಂಬ ಕನಸು ಕಂಡಿದ್ದಾರೆ. ಅವರು ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಅನೇಕ ಯೋಜನೆಗಳನ್ನು ರೂಪಿಸಿದರು. ಒಂದು ಹೆಣ್ಣು ಮಗುವಿಗೆ ಶಿಕ್ಷಣ ನೀಡಿದರೆ, ಒಂದು ಪರಿವಾರಕ್ಕೇ ಶಿಕ್ಷಣ ನೀಡಿದಂತೆ ಎಂದು ತಿಳಿದಿದ್ದ ಅವರು ಗುಜರಾತನ್ನು ಬಿಟ್ಟು ಬರುವಾಗ ತಮ್ಮ ಉಳಿಕೆಯ 21 ಲಕ್ಷಕ್ಕೂ ಹೆಚ್ಚು ಹಣವನ್ನು ಸಚಿವಾಲಯದ 'ಡಿ' ಗುಂಪಿನ ನೌಕರರ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮೀಸಲಿಟ್ಟರು. ಇಂದು ಶಿಕ್ಷಣ ಕ್ಷೇತ್ರದಲ್ಲಿ ಶೇಕಡಾ 73ರಷ್ಟು ಶಿಕ್ಷಕಿಯರೇ ಇದ್ದಾರೆ. ಅದು ಶೇಕಡಾ 100 ಆಗಲಿ ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಭಾಷಣದ ಕೊನೆಯಲ್ಲಿ ಸಭಿಕರು ಕೇಳಿದ ಅನೇಕ ಪ್ರಶ್ನೆಗಳನ್ನು ಶಾಂತವಾಗಿ ಆಲಿಸಿ, ಸಮರ್ಪಕ ಉತ್ತರ ನೀಡಿದರು. ವೆಬಿನಾರ್‌ನ ಪ್ರಾರಂಭದಲ್ಲಿ ಶ್ರೀಮತಿ ತಿಲಕರವರು ಸರಸ್ವತಿ ವಂದನೆ ಮಾಡಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪೋಷಕರಾದ ಶ್ರೀಮತಿ ಆರ್ ಸೀತಾಲಕ್ಷ್ಮಿಯವರು ಪ್ರಾಸ್ತಾವಿಕ ಭಾಷಣ ಮಾಡಿದರು. ಮಹಿಳಾ ವಿಭಾಗದ ಪ್ರಮುಖರಾದ ಶ್ರೀಮತಿ ವಾಸುಕಿಯುವರು ಮಾನ್ಯ ಮಂತ್ರಿಗಳನ್ನು ಸ್ವಾಗತಿಸಿ, ಪರಿಚಯಿಸಿದರು. ಮಹಾಸಂಘದ ಮಹಿಳಾ ಕಾರ್ಯದರ್ಶಿಗಳಾದ ಶ್ರೀಮತಿ ಡಿ.ಕೆ ಮಮತಾರವರು ಕಾರ್ಯಕ್ರಮವನ್ನು ನಿರೂಪಿಸಿದರು. ಶ್ರೀಮತಿ ವಿಜಯಲಕ್ಷ್ಮಿಯವರು ವಂದನಾರ್ಪಣೆ ಮಾಡಿದರು. ಶಾಂತಿಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

•

# 'ಕೊರೊನೋತ್ತರ ಕಾಲದಲ್ಲಿ ಶಿಕ್ಷಣದ ಪುನಶ್ಚೇತನ ಹೇಗೆ?'


**ಸಂದೀಪ ಬೂದಿಹಾಳ**
ರಾಜ್ಯ ಅಧ್ಯಕ್ಷ,
ಕರ್ನಾಟಕ ರಾಜ್ಯ ಮಾಧ್ಯಮಿಕ
ಶಿಕ್ಷಕ ಸಂಘ, ಬೆಂಗಳೂರು




ಶಾಲಾ ಕೋಣೆಯಲ್ಲಿ ಮಕ್ಕಳಿಗೆ ಪಾಠ ಮಾಡದಿದ್ದರೆ ಕಲಿಕೆಯೂ ಆಗುವುದಿಲ್ಲ. ಹಾಗಾಗಿ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಶಾಲೆಗಳನ್ನು ಶುರು ಮಾಡಬೇಕು. ಇದು ಸರಕಾರದ ಜವಾಬ್ದಾರಿ ಕೂಡ ಹೌದು. ಶಾಲೆಗಳನ್ನು ಹೇಗೆ ಆರಂಭಿಸುವುದು, ತರಗತಿಗಳನ್ನು ಹೇಗೆ ನಡೆಸುವುದು, ಎಂಬುದರ ಬಗ್ಗೆ ಸ್ಪಷ್ಟತೆ ಪಡೆಯಲು ಸರಕಾರ, ಆಯಾ ಜಿಲ್ಲೆಗಳಿಗೆ ಪ್ರತ್ಯೇಕ ಜನಪ್ರತಿನಿಧಿಗಳು, ಜಿಲ್ಲಾಧಿಕಾರಿ, ಜಿಲ್ಲಾ ಆರೋಗ್ಯ ಇಲಾಖೆ, ಪೊಲೀಸ್, ಜಿ.ಪಂ. ಹಾಗೂ ಶಿಕ್ಷಣ ಸಂಸ್ಥೆಯ ಪ್ರತಿನಿಧಿಗಳನ್ನು ಒಳಗೊಂಡು ಸಮಿತಿ ರಚಿಸಿ ವರದಿ ಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು.

ಶಾಲೆ ಆರಂಭಿಸಬೇಕೋ, ಬೇಡವೋ ಎಂದು ಪಾಲಕರ ಅಭಿಪ್ರಾಯ ಸಂಗ್ರಹಿಸಿದ್ದು ತಪ್ಪು. ಶೈಕ್ಷಣಿಕ ನಿರ್ಧಾರಗಳನ್ನು ತೆಗೆದುಕೊಳ್ಳುವುದು, ನೀತಿ ನಿರೂಪಣೆ, ರೂಪುರೇಷೆ ಸಿದ್ಧಪಡಿಸುವುದು, ಶಾಲೆ ಆರಂಭಿಸುವುದು ಸರಕಾರದ ಜವಾಬ್ದಾರಿ ಎಂಬುದನ್ನು ಮರೆಯಬಾರದು. ಶಾಲೆ ಶುರು ಮಾಡೋದು ಬೇಡ ಎಂದು ಹೇಳುವವರು, ಮುಂದೆ ಪರೀಕ್ಷೆಗಳೂ ಬೇಡ ಎನ್ನುತ್ತಾರೆ. ಹೀಗೇ ಮುಂದುವರಿದರೆ ಭವಿಷ್ಯದಲ್ಲಿ ಶಿಕ್ಷಣ ನಾಶವಾಗುತ್ತದೆ. ಮೂಲಭೂತ ಹಕ್ಕನ್ನು ಕಸಿದು ಕೊಂಡಂತಾಗುತ್ತದೆ.

**ಶಾಲೆ ನಡೆಸೋದು ಹೇಗೆ?:** ವಾರದ 6 ದಿನಗಳನ್ನು ಮತ್ತು ಶಿಕ್ಷಕರನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಬೇಕು. ಮಕ್ಕಳು ದೈಹಿಕ ಅಂತರ ಕಾಯ್ದುಕೊಳ್ಳುವಂತೆ ಪ್ರತಿದಿನ ಒಂದೊಂದು ತರಗತಿ ಮಾತ್ರ ತೆಗೆದುಕೊಳ್ಳಬೇಕು. ಒಂದೊಂದು ಡೆಸ್ಕ್‌ಗೆ ಒಬ್ಬರಂತೆ ಮಕ್ಕಳನ್ನು ಕೂಡಿಸಿಕೊಂಡು ಪಾಠ ಮಾಡಬಹುದಾಗಿದೆ.

**ಖಾಸಗಿಯವರ ಕಾಳಜಿ ಬೇಕು:** ಸರಕಾರ ಸರಕಾರಿ ಶಾಲೆಗಳನ್ನು ನೋಡಿಕೊಳ್ಳುವಂತೆ ಖಾಸಗಿ ಶಿಕ್ಷಣ ಸಂಸ್ಥೆಗಳೂ ಮಕ್ಕಳ ಕಾಳಜಿ ವಹಿಸುವುದು ಅವಶ್ಯವಿದೆ. ಸರಕಾರಿ ಶಾಲೆಗಳಲ್ಲಿ ಮಕ್ಕಳು ಕಡಿಮೆ ಸಂಖ್ಯೆಯಲ್ಲಿ ಇರಬಹುದು. ಹಾಗಾಗಿ ಅಲ್ಲಿ ದಿನಕ್ಕೊಂದು ತರಗತಿ ತೆಗೆದುಕೊಳ್ಳಬಹುದು. ಖಾಸಗಿ ಶಾಲೆಗಳಲ್ಲಿ ಮಕ್ಕಳು ಜಾಸ್ತಿ ಇರುವಂತೆ ಕೋಣೆಗಳೂ ಹೆಚ್ಚಿರುತ್ತವೆ. ಇದರಿಂದ ಕ್ಲಾಸ್‌ಗಳನ್ನು ಅಂತರ ಕಾಯ್ದುಕೊಂಡು ನಡೆಸಿದರೆ ಏನೂ ಸಮಸ್ಯೆಯಾಗುವುದಿಲ್ಲ.


**ಪಿಯುಸಿ ನಂತರ ಆನ್ಲೈನ್ ಮಾಡಲಿ:** ಯಾವುದೇ ಕಾರಣಕ್ಕೂ 1 ರಿಂದ 10ನೇ ತರಗತಿವರೆಗೆ ಆನ್ಲೈನ್ ಶಿಕ್ಷಣ ಬೇಡವೇ ಬೇಡ, ಬೇಕಿದ್ದರೆ ಪಿಯುಸಿ ಮತ್ತು ನಂತರದ ಶಿಕ್ಷಣಕ್ಕೆ ಆನ್ಲೈನ್ ಶಿಕ್ಷಣ ಕೊಡಿ. ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್, ಇಂಟರ್ನೆಟ್ ಸಂಪರ್ಕ ಇರುವುದಿಲ್ಲ, ಇದರಿಂದ ಮಕ್ಕಳಿಗೆ ಆನ್ಲೈನ್ ಕ್ಲಾಸ್‌ಗಳು ದೊರೆಯುವುದಿಲ್ಲ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಮಕ್ಕಳಿಗೆ ಇದು ತರವಲ್ಲ. ಎಷ್ಟು ಮಕ್ಕಳು ಇದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ? ಎಂಬುದು ಗೊತ್ತಾಗುವುದಿಲ್ಲ. ಪಿಯುಸಿ ವಿದ್ಯಾರ್ಥಿಗಳಿಗೆ ಒಂದಷ್ಟು ಪ್ರಭುದ್ಧತೆ ಬಂದಿರುತ್ತದೆ. ಬೇಕಿದ್ದರೆ ಇವರಿಗೆ ಆನ್ಲೈನ್ ಕ್ಲಾಸ್‌ಗಳನ್ನು ತೆಗೆದುಕೊಳ್ಳಬಹುದು.

**ಅನುದಾನ ಹಿಂಪಡೆಯಬೇಡಿ:** ಶಿಕ್ಷಣ ವಲಯಕ್ಕೆ ಮೀಸಲಿಟ್ಟ ಅನುದಾನವನ್ನು ವಾಪಸ್ ಪಡೆದು ಬೇರೆ ಕ್ಷೇತ್ರಕ್ಕೆ ವರ್ಗಾಯಿಸುವುದು ಸರಿಯಲ್ಲ. ಮಧ್ಯಾಹ್ನ ಬಿಸಿಯೂಟಕ್ಕೆ ಬಳಕೆಯಾಗುವ 398 ಕೋಟಿ ರೂ., ಸೈಕಲ್ ಖರೀದಿಗೆ ವ್ಯಯಿಸುವ 2 ಸಾವಿರ ಕೋಟಿಯ ಹಣವನ್ನು ಶಿಕ್ಷಣಕ್ಕೆ ಉಪಯೋಗಿಸಬೇಕು. ಆರ್ಥಿಕ ಮಿತವ್ಯಯ ಹೆಸರಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲಿನ ನಿರ್ಬಂಧವನ್ನು ಹಿಂಪಡೆದುಕೊಳ್ಳಬೇಕು.

**ವಿಶೇಷ ಯೋಜನೆ ಅವಶ್ಯ:** ಸರಕಾರ ಕೊರೊನಾದಿಂದ ಶಿಕ್ಷಣ ವ್ಯವಸ್ಥೆಯಲ್ಲಿ ಯಾವುದೇ ಹಿನ್ನಡೆಯಾಗದಂತೆ ನೋಡಿಕೊಳ್ಳುವುದಾಗಿ ಎಲ್ಲ ಸರಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅಭಯ ನೀಡಬೇಕಿದೆ. ಶಿಕ್ಷಣ ವ್ಯವಸ್ಥೆ ಕುಸಿಯದಂತೆ ತಡೆಯುವ ನಿಟ್ಟಿನಲ್ಲಿ ಸರಕಾರ ವಿಶೇಷ ಯೋಜನೆ ರೂಪಿಸಬೇಕಾಗಿದೆ.

**ಬದಲಾವಣೆ ಈಗಿನ ಅಗತ್ಯ, ಕೌಶಲ ಆಧಾರಿತ ತರಬೇತಿ ಬೇಕು:** ಕೊರೊನೋತ್ತರ ಶಿಕ್ಷಣ ವ್ಯವಸ್ಥೆ ಸವಾಲಿನಿಂದ ಕೂಡಿದೆ. ಶಿಕ್ಷಣ ಸಂಸ್ಥೆಯಲ್ಲಿ ಆರ್ಥಿಕ, ಶೈಕ್ಷಣಿಕ ಬೆಳವಣಿಗೆ ಕಷ್ಟವಾಗುತ್ತಿದೆ. ಆನ್ಲೈನ್ ವ್ಯವಸ್ಥೆ ಸ್ಥಾಪಿಸಲು ಬಡವರಿಗೆ ಮೊಬೈಲ್ ಖರೀದಿಗೆ ಯೋಜನೆ ರೂಪಿಸಬೇಕು. ಶೈಕ್ಷಣಿಕ ಅವಧಿ ಕಡಿಮೆಯಾಗಿದ್ದರಿಂದ ಪಠ್ಯಕ್ರಮ ಪರಿಷ್ಕರಿಸಬೇಕು. ವೃತ್ತಿಪರ ಶಿಕ್ಷಣದಲ್ಲಿ ಪ್ರಾಕ್ಟಿಕಲ್ಗೆ ಒತ್ತು ಕೊಡದಿದ್ದರೆ ಅನುಭವವಿಲ್ಲದೇ ಆಸ್ಪತ್ರೆಗಳು ಮತ್ತು ಕಾರ್ಖಾನೆಗಳು ಸಂಕಷ್ಟಕ್ಕೆ ಒಳಗಾಗುತ್ತದೆ. ಕೌಶಲ ಆಧಾರಿತ ಲಘು ತರಬೇತಿ ಅವಶ್ಯ. ಕೊರೋನಾದಿಂದಾಗಿ ಶಿಕ್ಷಣ ಕ್ಷೇತ್ರಕ್ಕೆ ಹಿನ್ನಡೆಯಾಗಿದ್ದರೂ, ಅದನ್ನು ಸುಧಾರಿಸಿಕೊಂಡು 2022ರ ಹೊತ್ತಿಗೆ ನಾವು ಏನನ್ನೂ ಕಳೆದುಕೊಂಡಿಲ್ಲ ಎನಿಸುವಂತಾಗಬೇಕು.

# ಸ್ವರಾಜ್ಯದ ಮಂತ್ರ ಕೊಟ್ಟ ತಿಲಕರು



■ ಶ್ರೀ ನಾರಾಯಣ ಶೇವಿರೆ
ಪ್ರಬೋಧಿನಿ ಗುರುಕುಲ ಪ್ರಮುಖ್

ಯಾವುದೇ ಒಂದು ಆಂದೋಲನದ ಪ್ರಾರಂಭದ ಬಿಂದು ಯಾವುದಿರಬಲ್ಲದು?

ಈ ಪ್ರಶ್ನೆಗೆ ಪೂರಕವಾಗಿ ರೋಗಮೂಲದ ಕುರಿತಾದ ಮನಃಶಾಸ್ತ್ರೀಯವಾದ ಒಂದು ಹೇಳಿಕೆಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಅದೆಂದರೆ; ಯಾವುದೇ ರೋಗ ಮೊದಲು ಮನಸ್ಸಿನಲ್ಲಿ ಹುಟ್ಟುತ್ತದೆ, ಬಳಿಕ ಅದು ದೇಹದಲ್ಲಿ ಕಾಣಿಸಿಕೊಳ್ಳುತ್ತದೆ. ಇದೇ ಜಾಡಿನಲ್ಲಿ ಮುಂದೆ ಸರಿದರೆ; ಯಾವುದೇ ರೋಗದ ಪರಿಹಾರವು ಅದೇ ರೋಗದ ಮೂಲದಲ್ಲಿದೆ ಮತ್ತದು ಮನಸ್ಸೇ ಆಗಿರುತ್ತದೆ. ವಿಷಸಂಬಂಧಿತ ಸಮಸ್ಯೆಗೆ ವಿಷದಲ್ಲಿಯೇ ಪರಿಹಾರ ಎಂಬಂತೆ, ಮನಸ್ಸಿನಲ್ಲಿ ಹುಟ್ಟುವ ರೋಗಕ್ಕೆ ಮನಸ್ಸಿನಲ್ಲೇ ಪರಿಹಾರ.

## ಸ್ವರಾಜ್ಯದ ಸಂಕಲ್ಪನೆಯ ಮೂಲ

ರೋಗ ಮತ್ತದರ ಪರಿಹಾರಕ್ಕೆ ಸಂಬಂಧಿಸಿದ ಈ ತರ್ಕ, ಆಂದೋಲನಕ್ಕೂ ಸಲ್ಲುತ್ತದೆನಿಸುತ್ತದೆ. ಅಂದರೆ, ಯಾವುದೇ ಒಂದು ಆಂದೋಲನ ಯಾರದೋ ಮನಸ್ಸಿನಲ್ಲೇ ಹುಟ್ಟಬೇಕು. ಅದಕ್ಕೊಂದು ರೂಪುಕೊಡಬಲ್ಲ, ಅದನ್ನು ಆಂದೋಲನ ವಾಗಿಸಬಲ್ಲ ಮನಸ್ಸಿನಲ್ಲೇ ಹುಟ್ಟಬೇಕು. ಮನಸ್ಸಿನಲ್ಲಿದ್ದುದೇ ಅಭಿವ್ಯಕ್ತವಾಗುವುದಷ್ಟೇ. ಆಂದೋಲನವು ನಿರ್ದಿಷ್ಟ ಸವಾಲಿನ ವಿರುದ್ಧ ಇರುತ್ತದೆ ಮತ್ತು ಆ ಸವಾಲನ್ನು ಉತ್ತರಿಸುವ ನಿಟ್ಟಿನಲ್ಲಿ ಅದು ಪ್ರವೃತ್ತವಾಗುತ್ತದೆ.

ಹೀಗೆ ಆಂದೋಲನದ ಹುಟ್ಟು ಮನಲ್ಲಾಗುತ್ತದೆ ಎಂದರೆ ಅದು ನೀಡಹೊರಡುವ ಪರಿಹಾರವೂ ಮನಸ್ಸಿನಲ್ಲೇ ಜನ್ಮತಾಳುತ್ತದೆ.

ಮತ್ತೇನಿಲ್ಲ; ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಎಂದರಲ್ಲ ತಿಲಕರು, ಅವರು ಹಾಗೆ ಅಂದುದಕ್ಕೂ ಸ್ವರಾಜ್ಯ ಆಂದೋಲನವು ಅವರ ನೇತೃತ್ವದಲ್ಲಿ ಸ್ಪಷ್ಟತೆಯನ್ನು ಹೊಂದುವುದಕ್ಕೂ ಒಂದು ಸಂಬಂಧವಿದೆ. ಸ್ವರಾಜ್ಯದ ನಿಜ ಆಂದೋಲನವು ಮೊದಲು ತಿಲಕರ ಮನಸ್ಸಿನಲ್ಲಿಯೇ ಹುಟ್ಟುಪಡೆಯಿತು.

## ಸಂಗ್ರಾಮದ ಧ್ವನಿಗೆ ನೇತೃತ್ವ

ಅದು ಹೇಗೆಂದರೆ ಮತ್ತು ಯಾಕೆಂದರೆ;

ಮೊದಲ ಸ್ವಾತಂತ್ರ್ಯ ಸಂಗ್ರಾಮದ ತರುವಾಯ ಆಂಗ್ಲರ ವಿರುದ್ಧದ ಭಾರತೀಯರ ಅಸಂತೋಷವನ್ನು ವ್ಯಕ್ತಪಡಿಸುವುದಕ್ಕಾಗಿ ಎಂಬಂತೆ ಎ. ಓ. ಹ್ಯೂಂ ಎಂಬ ಆಂಗ್ಲನೊಬ್ಬನಿಂದಲೇ ಪ್ರಾರಂಭಗೊಂಡ ಕಾಂಗ್ರೆಸ್ ಪಕ್ಷ ಬಳಿಕ ಭಾರತೀಯರ ಸ್ವಾತಂತ್ರ್ಯ ಹೋರಾಟದ ವೇದಿಕೆಯಾದರೂ ಬಹುತೇಕ ಅದರ ಹೋರಾಟಗಳು ಆಂಗ್ಲರ ಮುಂದೆ ಮನವಿ ಸಲ್ಲಿಸುವುದಕ್ಕೇ ಸೀಮಿತವಾಗಿದ್ದುವು. ಭಾರತೀಯರ ಸ್ವಾತಂತ್ರ್ಯ ಹೋರಾಟವು ತೀವ್ರಸ್ವರೂಪ ಪಡಕೊಳ್ಳದಿರುವಂತೆ ತಡೆಯುವ, ಮತ್ತದಕ್ಕಾಗಿ ಸಣ್ಣಪುಟ್ಟ ಮನವಿಗಳನ್ನು ತನ್ನ ಮುಂದಿಡುವ ಹಾಗೂ ಅದನ್ನು ಪೂರೈಸಿದಷ್ಟರಿಂದಲೇ ತೃಪ್ತಿ ಹೊಂದುವ ಸಂಸ್ಥೆಯೊಂದರ ಅಗತ್ಯ ಆಗ ಆಂಗ್ಲ ಸರಕಾರಕ್ಕೂ ಇತ್ತು. ತನ್ನೀ ಅಗತ್ಯವನ್ನು ಪೂರೈಸಿಕೊಳ್ಳಲು ಆಂಗ್ಲ ಸರಕಾರ ಕಾಂಗ್ರೆಸನ್ನು ಸೂಕ್ತವಾಗಿ ಬಳಸಿಕೊಂಡಿತ್ತು.

ಈ ಹಿನ್ನೆಲೆಯಲ್ಲಿ ಕಾಂಗ್ರೆಸನ್ನು ಪರೋಕ್ಷವಾಗಿ ಆಂಗ್ಲ ಸರಕಾರದ ಪರಿಕರವಾಗುವುದನ್ನು ತಪ್ಪಿಸಿ ಪ್ರತ್ಯಕ್ಷ ಸ್ವಾತಂತ್ರ್ಯ ಹೋರಾಟದ ಗಟ್ಟಿ ವೇದಿಕೆಯನ್ನಾಗಿಲು ತಿಲಕರು ಸಂಕಲ್ಪಿಸಿದರು. ಈ ಕುರಿತಾಗಿ ಅವರು 'ಕೇಸರಿ' ಪತ್ರಿಕೆಯಲ್ಲಿ ಲೇಖನಗಳನ್ನೂ ಬರೆದರು, ಜನಜಾಗೃತಿಯನ್ನೂ ಮಾಡಿದರು. ಅವರ ಈಯೆಲ್ಲ ಪ್ರಯಾಸಗಳಿಗೆ ಒಂದು ಅಂತಿಮವೆಂಬಂತೆ ತಿರುವು ಲಭಿಸಿದ್ದು 1907ರ ಸೂರತ್ ಕಾಂಗ್ರೆಸ್ ಅಧಿವೇಶನದಲ್ಲಿ.

ಕಾಂಗ್ರೆಸ್ಸಿನ ಅದುವರೆಗಿನ ಜಾಯಮಾನದಂತೆ ಆಂಗ್ಲ ಸರಕಾರದ ಅಡಿಯಲ್ಲಿ ಕಾರ್ಯ – ಆಡಳಿತ ಮಾಡುವಂಥ ಅಧೀನ ಸರಕಾರ ರಚನೆಯ ಕುರಿತಾಗಿ ಬೇಡಿಕೆಯನ್ನಿಡುವ ಕೆಲಸವು ಅದರ ನಾಯಕರೆನಿಸಿಕೊಂಡವರಿಂದ ನಡೆಯುತ್ತಿತ್ತು. ಮತ್ತಿದು ವರ್ಷಕ್ಕೊಮ್ಮೆ ನಡೆಯುವ ತನ್ನ ಅಧಿವೇಶನದಲ್ಲಿ ಸಾಗುತ್ತಿತ್ತು. ಇದನ್ನೇ ಸ್ವಾತಂತ್ರ್ಯ ಹೋರಾಟ ಎನ್ನುವ ದರ್ದು ಆಗಿತ್ತು. ನಿಜಕ್ಕಾದರೆ ಇದರಲ್ಲಿ 'ಸ್ವ–ತಂತ್ರ' ಕ್ಕೆ ಅವಕಾಶವೇ ಇರಲಿಲ್ಲ. ಆದರೆ ಇದರಲ್ಲೇ ಇಷ್ಟರಲ್ಲೇ ಕೆಲವು ನಾಯಕರಿಗೆ ತೃಪ್ತಿಯಿತ್ತು. ಇದಕ್ಕಿಂತ ಹೆಚ್ಚಿನದನ್ನು ಕೇಳುವುದೇ ಸರಿಯಲ್ಲ ಎಂಬ ನಿರ್ಣಯ, ಹಾಗೆ ಕೇಳಿದರೆ ಏನಾದೀತೋ ಎಂಬ ಆತಂಕ ಅಂಥ ನಾಯಕರಲ್ಲಿ ಮನೆಮಾಡಿತ್ತು. ಆದರೆ ಈ ನಿರ್ಣಯ ಸರಿಯಲ್ಲ, ಯಾವುದೇ ಆತಂಕ ಬೇಕಿಲ್ಲ ಎಂಬ ಭಾವನೆಯುಳ್ಳವರೂ ಅದೇ ಕಾಂಗ್ರೆಸ್ಸಿನಲ್ಲಿ ಕ್ರಮೇಣ ತಮ್ಮ ಧ್ವನಿಯನ್ನು ಗಟ್ಟಿಗೊಳಿಸುತ್ತಾ ಹೋದರು. ಅಂಥ ನಿಜ ಸ್ವಾತಂತ್ರ್ಯದ ಕಾಂಗ್ರೆಸ್ಸಿಗರ ಧ್ವನಿಗೆ ನೇತೃತ್ವ ನೀಡಿದವರು ತಿಲಕರು.

## ಹೋರಾಟಕ್ಕೊದಗಿದ ನಿಖರತೆ

ಸ್ವಾತಂತ್ರ್ಯವೆಂದರೆ ಆಂಗ್ಲರ ಮುಂದೆ ನಾವು ಬೇಡುವ

ಪುಟ 20 ಕ್ಕೆ ➤

➤ ಪುಟ 19 ರಿಂದ.....

ಭಿಕ್ಷೆ ಅಲ್ಲ, ಅದು ನಮ್ಮೆಲ್ಲ ಸಮಸ್ಯೆಗಳಿಗೆ ನಾವೇ ಕಂಡುಕೊಳ್ಳುವ ಪರಿಹಾರದ ಮಾರ್ಗ ಎಂದು 1906ರ ಕೋಲ್ಕೋತಾ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷರಾಗಿದ್ದ ದಾದಾ ಭಾಯಿ ನವರೋಜಿ ಹೇಳಿದ್ದರು. ಅವರದನ್ನು ಆ ಸಂದರ್ಭದಲ್ಲಿ ಹೇಳಿದ್ದರು ಅನ್ನುವುದಕ್ಕಿಂತ ಮುಖ್ಯವಾಗಿ ಅದನ್ನು ಹಾಗೆ ಹೇಳಬಲ್ಲವರಾದ ಅವರು ಅಲ್ಲಿ ಅಧ್ಯಕ್ಷರಾಗಿ ನಿಯುಕ್ತರಾಗಿದ್ದರು ಅನ್ನುವುದೇ ಒಂದು ವಿಶೇಷ ಸಂಗತಿ. ಆದರೆ ಮುಂದಿನ ಅಧಿವೇಶನದಲ್ಲಿ ಮತ್ತೆ ಕಾಂಗ್ರೆಸ್ ತನ್ನ ಹಿಂದಿನ ಜಾಯಮಾನಕ್ಕೇ ಜಾರಿತ್ತು. ಆ ಅಧಿವೇಶನದಲ್ಲಿ ಹಾಗೆ ನಿಜ ಸ್ವಾತಂತ್ರ್ಯದ ಗಟ್ಟಿ ಧ್ವನಿ ಮೊಳಗಿಸಬಲ್ಲವರಾಗಿದ್ದ ಲಾಲಾ ಲಜಪತರಾಯರು ಅಧ್ಯಕ್ಷರಾಗುತ್ತಾರೆಂದೇ ಭಾವಿಸಲಾಗಿತ್ತು. ಆಗಲಿಲ್ಲ. ಆಗ ಸುಮ್ಮನಿರದ ತಿಲಕರು ಕಾಂಗ್ರೆಸ್ ನಿರ್ಣಯವನ್ನು ಪ್ರತಿಭಟಿಸಿದರು. ಅಧೀನ ಸರಕಾರದ ಒಲವಿರುವವರ ಬಣ ಪ್ರತ್ಯೇಕಗೊಂಡು ತಮ್ಮದೇ ಒಂದು ಅಧಿವೇಶನ ನಡೆಸಿದರೆ ನಿಜ ಸ್ವಾತಂತ್ರ್ಯದ ಹೋರಾಟಗಾರರು ಒಂದು ಅಧಿವೇಶನ ನಡೆಸಿದರು.

ಸ್ವರಾಜ್ಯ ಸಂಗ್ರಾಮದ ದಾರಿಯಲ್ಲಿ ಇದೊಂದು ಅನಪೇಕ್ಷಿತ ಘಟನೆಯಾದರೂ ಅದಕ್ಕೊಂದು ಸ್ಪಷ್ಟತೆಯನ್ನೂ ದೃಢತೆಯನ್ನೂ ತಂದುಕೊಡಲು ತಿಲಕರಿಗಿದು ಅನಿವಾರ್ಯ ಆಯ್ಕೆಯಾಗಿತ್ತು. ಜನರ ಪ್ರಾತಿನಿಧ್ಯದ ಮೂಲಕ ನಿಜ ಸ್ವಾತಂತ್ರ್ಯದ ಸಂಗ್ರಾಮಕ್ಕೆ ಇರುವ ಬಲ-ಬೆಂಬಲ ಏನೆಂಬುದು ಗೊತ್ತಾದ ಬಳಿಕ ತಿಲಕರ ನಿಲುವನ್ನು ದುರ್ಬಲ ಸ್ವರೂಪದಲ್ಲಾದರೂ ಒಪ್ಪಿಕೊಳ್ಳಲು ಕಾಂಗ್ರೆಸ್ ಮನಸ್ಸು ಮಾಡಿತು. ಮುಂದೆ ತಮ್ಮ ಅಂತಿಮ ದಿನಗಳವರೆಗೆ ತಿಲಕರದೇ ನೇತೃತ್ವವೂ ಕಾಂಗ್ರೆಸ್ಸಿಗೆ ಲಭಿಸುವಂತಾಯಿತೆನ್ನಿ. ಆ ಬಳಿಕ ಕಾಂಗ್ರೆಸ್ ಮತ್ತೆ ತನ್ನ ಹಳೆಯ ಜಾಯಮಾನಕ್ಕೆ ಸರಿದರೂ ಅದರೊಳಗೆ ಪೂರ್ಣ ಸ್ವಾತಂತ್ರ್ಯದ ನಿಟ್ಟಿನಲ್ಲಿ ಚಿಂತನೆ ಸಾಗುತ್ತಿದ್ದುದು, ಆ ನಿಟ್ಟಿನ ಕ್ರಾಂತಿಕಾರಿಗಳ ಕಾರ್ಯ ಆಂಗ್ಲರ ನಿದ್ದೆಗೆಡಿಸುತ್ತಿದ್ದುದು, ಸುಭಾಷ್ಚಂದ್ರ ಬೋಸರ ಸೇನಾಕಾರ್ಯದ ಪ್ರಭಾವ – ಪ್ರೇರಣೆಗಳು ತಮ್ಮ ಸೈನ್ಯದ ಮೇಲಾಗುತ್ತಿರುವ ಅಪಾಯವನ್ನು ಆಂಗ್ಲರು ಮನಗಂಡುದು, ಇವೆಲ್ಲದಕ್ಕೆ ಕಿರೀಟಪ್ರಾಯದಂತೆ ಎರಡನೆಯ ಮಹಾಯುದ್ಧದಲ್ಲಿ ಆಂಗ್ಲರು ಗೆದ್ದೂ ಬಸವಳಿದದ್ದು ಇವೆಲ್ಲ ಒಟ್ಟಿಗೆ ಸೇರಿ ಭಾರತಕ್ಕೆ ಪೂರ್ಣ ಸ್ವಾತಂತ್ರ್ಯವನ್ನೇ ನೀಡಿ ಆಂಗ್ಲರು ವಾಪಸ್ ಹೋಗಬೇಕಾಗಿ ಬಂತು. ಹಾಗೆ ಅವರು ಸ್ವಾತಂತ್ರ್ಯ ಕೊಟ್ಟುಹೋಗುವಾಗ ಕಾಂಗ್ರೆಸ್ ನೇತೃತ್ವ ಹಳೆಯ ಜಾಯಮಾನದವರ ಕೈಯಲ್ಲಿತ್ತು ಎನ್ನುವುದು ಈ ದೇಶದ ದುರ್ದೈವ. ಇರಲಿ.

## ಅಂತರಂಗದ ದನಿಗೆ ಓಗೊಟ್ಟವರು

ಈಗ ನಿಜ ಸ್ವಾತಂತ್ರ್ಯದ ಅಂದರೆ ಪೂರ್ಣ ಸ್ವಾತಂತ್ರ್ಯದ ಹೋರಾಟಕ್ಕೆ ನೇತೃತ್ವ ನೀಡಿದ ತಿಲಕರ ಆ ಕುರಿತಾದ ಮನೋಭಾವ, ನಿರ್ಣಯವಿಶೇಷತೆಗಳ ಬಗೆಗೆ ಸ್ವಲ್ಪ ಯೋಚಿಸಬೇಕೆನಿಸುತ್ತದೆ. ಯಾಕೆಂದರೆ; ನಂತರದ ದಿನಗಳಲ್ಲಿ ಇಂಥ ಗಟ್ಟಿ ನಿಲುವಿನಿಂದ ಕಾರ್ಯಗೈದ ಕ್ರಾಂತಿಕಾರಿಗಳನ್ನು ದಾರಿತಪ್ಪಿದ ದೇಶಭಕ್ತರೆಂದೂ ಆಂಗ್ಲ ಸರ್ಕಾರಕ್ಕೆ ಹಾನಿಯಾಗದಂತೆ ಮತ್ತು ಆ ಮೂಲಕ ತಮಗೂ ಕಠೋರ ಶಿಕ್ಷೆಯ ಆತಂಕ ಉಂಟಾಗದಂತೆ ಕಾರ್ಯಗೈದ ಹೋರಾಟಗಾರರನ್ನು ಅಂತಸ್ಸಾಕ್ಷಿಯ ರೂವಾರಿಗಳೆಂದೂ ಪರಿಗಣಿಸುವ ಒಂದು ಪ್ರಥೆ ಬೆಳೆಯಿತು. ಈ ಸಮಸ್ಯೆ ವರ್ತಮಾನದ ಬುದ್ಧಿಜೀವಿ ವಲಯವನ್ನೂ ಯಥೇಚ್ಛವಾಗಿ ಆವರಿಸಿಕೊಂಡುಬಿಟ್ಟಿದೆ. ತಿಲಕರ ಮನೋಭಾವ ನಿರ್ಣಯಗಳು ಅವರದಷ್ಟೇ ಅಲ್ಲ, ಎಲ್ಲರ ಅಂತಸ್ಸಾಕ್ಷಿಗೂ ಒಪ್ಪುವಂತಹವು ದಾಗಿರಲಿಲ್ಲವೆ? ಅವರ ನೇತೃತ್ವ ದಾರಿ ತಪ್ಪಿಸುವ ದೇಶಭಕ್ತಿಯದಾಗಿತ್ತೇ? ಇದಕ್ಕೆ ಹಲವು ಬಗೆಗಳಲ್ಲಿ ಉತ್ತರ ಕಂಡುಕೊಳ್ಳಬಹುದೆನ್ನಿ. ಅಂತಃಸಾಕ್ಷಿಯ ಪ್ರಶ್ನೆ ಬಂದದ್ದರಿಂದ ಆ ನಿಟ್ಟಿನಲ್ಲಿಯೂ ಉತ್ತರವನ್ನು ಕಂಡುಕೊಳ್ಳಬೇಕೆನಿಸುತ್ತದೆ.

ಮನಸ್ಸು ಅಂತರಂಗದ ಧ್ವನಿಗೆ ಓಗೊಟ್ಟರೆ ಅದು ಅಂತಃಸಾಕ್ಷಿಕವಾಗುತ್ತದೆಂದೂ ಬಹಿರಂಗದ ಧ್ವನಿಗೆ ಓಗೊಟ್ಟಾಗ ಅದು ಅಂತಃಸಾಕ್ಷಿಗೆ ವಿರುದ್ಧವಾಗುತ್ತದೆಂದೂ ಒಂದು ಸ್ಥೂಲಗ್ರಹಿಕೆಯಿದೆಯಷ್ಟೆ. ಕೆಲವೊಮ್ಮೆ ಎರಡೂ ಧ್ವನಿಗಳೂ ಒಂದೇ ಆಗಿರಬಲ್ಲ ಸಾಧ್ಯತೆಯಿರುತ್ತದೆ. ಅದಕ್ಕಾಗಿ ಇದನ್ನು ಸ್ಥೂಲಗ್ರಹಿಕೆಯೆಂದಿದ್ದು. ಅದಿರಲಿ. ಸಾಮಾನ್ಯವಾಗಿ ಅಂತರಂಗದ ಪರಿಚಯವಿರುವುದು ಕಡಮೆಯೇ. ಎಲ್ಲೋ ಅಪರೂಪಕ್ಕೆ ಕೆಲವರು ಸಿಗಬಹುದು. ಬಹಿರಂಗದ ಪರಿಚಯ ಮಾಡಿಕೊಳ್ಳುವುದು ಎಲ್ಲರಿಗೂ ಸಾಧ್ಯ. ಭಿನ್ನ ಭಿನ್ನ ವಿಧಾನಗಳಲ್ಲಿ ನಾವು ಮಾಹಿತಿಯನ್ನು ಗ್ರಹಿಸುವ ನಮ್ಮ ಕರಣಗಳೇ ಆ ಬಹಿರಂಗ. ಅಂದರೆ ಇಂದ್ರಿಯಪ್ರಪಂಚ. ಅವು ನಮ್ಮ ಅನುಭವಕ್ಕೆ ದಕ್ಕುತ್ತವೆ. ಹಾಗಾಗಿ ಅವುಗಳನ್ನು ತಿಳಿದುಕೊಳ್ಳುವುದು ಸಾಧ್ಯ. ಕನಿಷ್ಠ ಪಕ್ಷ ಇವೆ ಎಂಬುದನ್ನಂತೂ ತಿಳಿದುಕೊಳ್ಳಲಡ್ಡಿಯಿಲ್ಲ. ಅವಕ್ಕೆ ವಿಮುಖವಾಗಿರುವುದು ಅಂತರಂಗ ಎಂದಷ್ಟೆ ಇಲ್ಲಿಯ ಗ್ರಹಿಕೆಗಾಗಿ ಇಟ್ಟುಕೊಳ್ಳೋಣ.

ಎರಡರ ಬಯಕೆಗಳು ಬೇರೆ ಬೇರೆ. ಅಥವಾ ಒಂದಕ್ಕೆ ಬಯಕೆಗಳಿವೆ, ಬಯಕೆಗಳ ಬೆಟ್ಟವೇ ಆಗಿದೆ. ಮತ್ತೊಂದಕ್ಕೆ ಬಯಕೆಗಳೇ ಇಲ್ಲ, ಬಯಕೆ ಅದರ ಹತ್ತಿರವೂ ಸುಳಿಯಲಾರದು. ಬಯಕೆಗಳು ಸುಖದ ಬೆನ್ನು ಹತ್ತಿವೆ. ಅಂದರೆ ಇಂದ್ರಿಯಪ್ರಪಂಚ ಸುಖಕ್ಕಾಗಿ ಏನನ್ನೂ ಮಾಡಲು ಸಿದ್ಧ ಮತ್ತು ಏನನ್ನೂ ಮಾಡದಿರಲೂ ಸಿದ್ಧ. ಕಷ್ಟವನ್ನು ಅದು ಸಹಿಸುವುದಿಲ್ಲ, ಕಷ್ಟವನ್ನೆದುರಿಸುವ ಉಸಾಬರಿಗೂ ಹೋಗುವುದಿಲ್ಲ. ತನ್ನೆಲ್ಲ ಸುಖಕ್ಕಾಗಿ ಪರರು ಕಷ್ಟಪಟ್ಟರೆ ಅದಕ್ಕೆ ಒಪ್ಪಿಗೆಯೇ. ಇವೆಲ್ಲದಕ್ಕೂ ವಿರುದ್ಧ ಕ್ರಮದಲ್ಲಿದೆ ಅಂತರಂಗ ನಿಲುವುಗಳು. ಅದು ಇನ್ನೊಬ್ಬರ ಸುಖಕ್ಕಾಗಿ ತಾನು ಕಷ್ಟಪಡಬೇಕಾಗಿ ಬಂದರೆ ಅದಕ್ಕೆ ಹಿಂಜರಿಯದು. ಯಾವುದೇ ಬಯಕೆಗಳಿಲ್ಲದಾಗ ಕಷ್ಟಪಡಬೇಕೆಂಬ ಬಯಕೆಯೂ ಇರುವುದಿಲ್ಲ, ಕಷ್ಟವನ್ನೆದುರಿಸುವ ತೊಡಕೂ ಇರುವುದಿಲ್ಲ. ಸುಖ ಬೇಕೆಂಬ ಹಂಬಲ ಇಲ್ಲದಂತೆ ಬೇಡವೆಂಬ ಆಗ್ರಹವೂ ಅಲ್ಲಿ ಹುಟ್ಟಿಕೊಳ್ಳಲಾರದು.

ಪುಟ 21 ಕ್ಕೆ ➤

➢ ಪುಟ 20 ರಿಂದ.....

ಆಲೋಚನೆಗಳು ಏನಿದ್ದರೂ ಮನಸ್ಸಿನಲ್ಲಿ ಬರುವುದು ತಾನೇ. ಮತ್ತದಕ್ಕೆ ತಕ್ಕಂತೆ ನಿರ್ಣಯ. ಮನಸ್ಸು ಇಂದ್ರಿಯ ಮುಖಿಯಾಗಿದ್ದಾಗ ಬಯಕೆಗಳ ಈಡೇರಿಕೆಯ ಕುರಿತಾದ ಆಲೋಚನೆಗಳೇ ಸುತ್ತುತ್ತಿರುತ್ತವೆ, ಕಷ್ಟಗಳಿಂದ ಮುಕ್ತಗೊಳ್ಳುವ ದಾರಿಗಳನ್ನು ಹುಡುಕುತ್ತಿರುತ್ತದೆ. ಒಳಮುಖಿಯಾದಾಗ ನಂಬಿದ ಸತ್ಯಕ್ಕಾಗಿ ತತ್ತ್ವಕ್ಕಾಗಿ ಎಲ್ಲವನ್ನೂ ಎದುರಿಸುವ ನಿರ್ಣಯಕ್ಕೆ ಬಂದಿರುತ್ತದೆ.

ಒಂದೆಡೆ ಬಹಿರಂಗದ ಪ್ರಪಂಚಕ್ಕೆ ತೆರೆದುಕೊಂಡ ಇಂದ್ರಿಯಗಳು. ಅದರೆಡೆಗೆ ಅನಾಯಾಸವಾಗಿ ಮುಖಮಾಡಿರುವ ಮನಸ್ಸು. ಇನ್ನೊಂದೆಡೆ ಸತ್ಯ ನ್ಯಾಯ ಇತ್ಯಾದಿ ಧರ್ಮ ಸಂಬಂಧಿತ ಮೌಲ್ಯಗಳ ಮೂಲಕ ಆಂತರಿಕ ಜಗದೊಂದಿಗೆ ಅನುಸಂಧಾನದಲ್ಲಿರುವ ಸಾಕ್ಷಿ. ಅದರೆಡೆಗೆ ಅವಶ್ಯವಾಗಿ ಮುಖ ಮಾಡಬೇಕಾದರೂ ಹಾಗೆ ಮಾಡಲು ಹರಸಾಹಸಪಡುತ್ತಿರುವ ಮನಸ್ಸಿನ ಸಂಕಷ್ಟಸ್ಥಿತಿ! ಸ್ವಾತಂತ್ರ್ಯಸಂಗ್ರಾಮದ ಬಹುತೇಕ ನಾಯಕರು ಎರಡನೆಯದನ್ನೇ ಆಯ್ಕೆಮಾಡಿಕೊಂಡರೆಂದು ಬೇರೆ ಹೇಳಬೇಕಿಲ್ಲವಷ್ಟೆ.

## ಹೋರಾಟಗಳೆರಡೂ ಅಂತಸ್ಸಾಕ್ಷಿಕವೇ

ಸ್ವಾತಂತ್ರ್ಯಸಂಗ್ರಾಮದ ಆಧುನಿಕ ಸಂಕಥನದಲ್ಲಿ ಕೇವಲ ಒಂದು ಬಗೆಯ ಹೋರಾಟವನ್ನಷ್ಟೆ ಸ್ವಾತಂತ್ರ್ಯಹೋರಾಟವೆನ್ನುವ, ಅದರಲ್ಲಿ ಭಾಗಿಯಾದವರನ್ನು ಮಾತ್ರ ಸ್ವಾತಂತ್ರ್ಯ ತಂದುಕೊಟ್ಟವರೆನ್ನುವ, ಅಂತಿಮ ಘಟ್ಟದ ಅದರ ಕೆಲವು ಮುಖ್ಯರನ್ನು ಮಾತ್ರ ಪ್ರತಿಬಾರಿಯೂ ಸ್ಮರಿಸುವ ಮತ್ತು ಇವೆಲ್ಲದರ ಫಲಿತವಾಗಿ ಅಂಥ ಹೋರಾಟವು ಅಂತಃಸಾಕ್ಷಿಗನುಗುಣವಾಗಿ ನಡೆಯಿತೆನ್ನುವ ಧಾಟಿ ವಿವೃತವಾಗುತ್ತಿದೆ. ಈ ವಿವರಣೆ ಅಂತಃಸಾಕ್ಷಿಗನುಗುಣವಾಗಿ ಇದೆಯೇ ಎಂಬುದನ್ನು ಎಲ್ಲರೂ ಪ್ರಶ್ನಿಸಿಕೊಳ್ಳಬೇಕಾಗಿದೆ.

ಸತ್ಯ ಅಹಿಂಸೆಗಳ ಆಧಾರದಲ್ಲಿ ತೊಡಗಿದ ಗಾಂಧೀಜಿಯವರ ಹೋರಾಟದಲ್ಲಿ ಅವರೇ ತಿಳಿಸಿದಂತೆ ಅಂಥ ಒಂದು ಸಾಕ್ಷಿ ಕೆಲಸಮಾಡಿದೆಯೇನೋ ನಿಜ. ಹಾಗಾಗಿಯೇ ಅವರ ಹೋರಾಟ ಆಂಗ್ಲಪ್ರಭುತ್ವದ ವಿರುದ್ಧವೇ ವಿನಾ ಆಂಗ್ಲರ ವಿರುದ್ಧ ಅಲ್ಲ ಎನ್ನುವ ತಾತ್ತ್ವಿಕ ನಿಖರತೆಯನ್ನು ಪಡೆದಿತ್ತು. ಮತ್ತು ಆ ಹೋರಾಟಕ್ಕೆ ಗುರಿಯಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚು ಎಂಬಂತೆ ದಾರಿ ಮುಖ್ಯವಾಗಿತ್ತು. ಸತ್ಯದ ಆಗ್ರಹ ಮತ್ತು ಅಹಿಂಸೆಯ ಮಾರ್ಗವನ್ನು ಮುಖ್ಯವಾಗಿಸಿಕೊಂಡಿದ್ದ ಆ ಹೋರಾಟವು ತನ್ನೀ ದಾರಿಯಿಂದ ತಪ್ಪಿದಾಗ ಇಡಿಯ ಹೋರಾಟವನ್ನೇ ಹಿಂದೆಗೆದುಕೊಳ್ಳುವ ಛಾತಿಯನ್ನು ಗಾಂಧಿ ತಮ್ಮ ಅಂತಃಸಾಕ್ಷಿಗನುಗುಣವಾಗಿ ತೋರಿದ್ದರು. ಇದೇ ಸಾಕ್ಷಿಪ್ರಜ್ಞೆ ಅಥವಾ ಪ್ರಾಮಾಣಿಕತೆ ಆ ದಾರಿಯಲ್ಲಿದ್ದ ಉಳಿದವರೆಲ್ಲರಲ್ಲಿಯೂ ಇತ್ತೆನ್ನಲಾಗದು. ಇದ್ದಿದ್ದರೆ, ಈ ದಾರಿಗೆ ವಿರುದ್ಧವಾದ, ಆದರೆ ಸ್ವಾತಂತ್ರ್ಯದ ಧ್ಯೇಯವನ್ನೇ ಉಳ್ಳ ಮಿಕ್ಕವರನ್ನು ದಾರಿ ತಪ್ಪಿದವರೆಂದು ಹೀಯಾಳಿಸುವ ಪ್ರಮೇಯ ಬರುತ್ತಿರಲಿಲ್ಲ.

ಈಗ ಇದಕ್ಕೆ ವಿಲೋಮವಾಗಿ, ಕ್ರಾಂತಿಕಾರಿಗಳ ಕಾರ್ಯವನ್ನೂ ಅವರಲ್ಲಿದ್ದ ಮಾನಸಿಕತೆಯನ್ನೂ ಗಮನಿಸಿರಂತೆ. ಅವರು ಮಂದಧೋರಣೆಯ ಹೋರಾಟದಿಂದ ಗುರಿ ತಲುಪಲಾಗದು ಎಂದರಷ್ಟೇ ಹೊರತು ನಿಂದೆಯ ಕೂರಂಬುಗಳನ್ನು ಎಸೆಯಹೊರಡಲಿಲ್ಲ. ಅವರು ಪಾತಕಿ ಅಧಿಕಾರಿಗಳನ್ನು ತಮ್ಮ ಬಂದೂಕಿನ ಗುರಿಯಾಗಿಸಿಕೊಂಡರೇ ವಿನಾ ಉಳಿದವರಾರನ್ನೂ ಅಲ್ಲ. ಆ ಪಾತಕಿಗಳ ಅತಿ ಹತ್ತಿರದ ಬಂಧುಗಳನ್ನೂ ಕೂಡಾ ಅವರ ಬಂದೂಕು ಏನೂ ಮಾಡಲಿಲ್ಲವಷ್ಟೆ ಅಲ್ಲ, ಕೆಲವು ಸಂದರ್ಭಗಳಲ್ಲಿ ರಕ್ಷಿಸಿದರು ಕೂಡಾ. ಅಂತಃಸಾಕ್ಷಿಯ ಕೊರತೆ ಇದ್ದಿದ್ದರೆ ಇಂಥ ನಿಲುವು ತಳೆಯಲು ಯಾರಿಗೇ ಆದರೂ ಅಸಾಧ್ಯ.

## ತಿಲಕರ ಮಹತ್ತ್ವ

ಶಸ್ತ್ರರಹಿತವಿದ್ದಾಗ ತಳೆಯುವ ಅಂತರಂಗ ಸಂಯಮದ ಪ್ರಮಾಣಕ್ಕೂ ಶಸ್ತ್ರಸಹಿತವಿದ್ದಾಗ ತಳೆಯುವ ಅದೇ ಸಂಯಮಪ್ರಮಾಣಕ್ಕೂ ವ್ಯತ್ಯಾಸವಿದೆ. ಕ್ರಾಂತಿಕಾರಿಗಳು ಅಂತಿಂಥ ಶಸ್ತ್ರವಲ್ಲ, ಆಗಿನ ಕಾಲದ ಅತ್ಯಂತ ಪ್ರಬಲ ಶಸ್ತ್ರವಾದ ಬಂದೂಕನ್ನೇ ಹಿಡಕೊಂಡಿದ್ದರು. ಹಾಗೆ ಹಿಡಕೊಂಡ ಅವರು ಪಾತಕಿಗಳನ್ನಷ್ಟೆ ವಧಿಸಿದರು, ಉಳಿದ ಯಾವನೇ ಆಂಗ್ಲನ ಕೂದಲು ಕೊಂಕಲೂ ಬಿಡಲಿಲ್ಲ. ಇಂಥವರನ್ನು ಮತೀಯದ್ವೇಷಕ್ಕಾಗಿ ಸ್ತ್ರೀಪುರುಷ ಭೇದವಿಲ್ಲದೆ ಹಸುಳೆವೃದ್ಧರೆಂಬ ಪರಿಗಣನೆಯಿಲ್ಲದೆ ಸಾರ್ವಜನಿಕರನ್ನೆಲ್ಲ ಬಾಂಬಿಟ್ಟು ಅತಿ ಅಮಾನುಷವಾಗಿ ಕೊಲ್ಲುವ ಭಯೋತ್ಪಾದಕರೊಂದಿಗೆ ಹೋಲಿಸುವ 'ಅಹಿಂಸಾವಾದಿ' ಬುದ್ಧಿಜೀವಿಗಳು ನಮ್ಮ ನಡುವೆ ಇರುವುದು ದುರಂತ. ಕ್ರಾಂತಿಕಾರಿಗಳ ಆಂಗ್ಲಪ್ರಭುತ್ವವಿರೋಧ ಹಾಗೂ ಆಂಗ್ಲನಿರ್ದ್ವೇಷದ ಕುರಿತ ಸ್ಪಷ್ಟತೆ ಅವರ ಕ್ರಿಯೆಯಲ್ಲಿತ್ತೇ ವಿನಾ ಹೇಳಿಕೆಯಲ್ಲಲ್ಲ! ಅಂತಃಸಾಕ್ಷಿಗನುಗುಣವಾಗಿ ನಡಕೊಂಡರು, ಆ ಕುರಿತು ಯಾವುದೇ ಹೇಳಿಕೆಗಳನ್ನು ನೀಡಲಿಲ್ಲ. ಅವರದು ಪೂರ್ಣ ಸ್ವರಾಜ್ಯದ ಧ್ಯೇಯ, ಅದರ ಸಾಕಾರಕ್ಕಾಗಿ ನಿರ್ದುಷ್ಟ ಕ್ರಾಂತಿಕಾರ್ಯದ ದಾರಿ.

ಈ ಘಟ್ಟದಲ್ಲಿ ನಮ್ಮೆದುರು ಬಂದು ನಿಲ್ಲುವವರು ತಿಲಕರು. ಸ್ವರಾಜ್ಯದ ಧ್ಯೇಯವನ್ನು ಆ ದಿನಗಳಲ್ಲಿ ಅತ್ಯಂತ ನಿಷ್ಕೃಷ್ಟವಾಗಿ ನಮ್ಮೆದುರು ಇಟ್ಟವರು ಅವರು. ಅಧೀನ ಆಡಳಿತದ ಕನಸನ್ನಷ್ಟೇ ಕಾಣುತ್ತಿದ್ದ ದೊಡ್ಡ ಗಡಣದ ನಡುವೆ ಅವರು ಈ ನಿಟ್ಟಿನಲ್ಲಿ ಭಿನ್ನರಾದರು. ಅವರು ಬಂದೂಕಿನ ನಳಿಗೆಯ ಎದುರು ಅಸಾಧ್ಯವೆನಿಸಿದ ಈ ಸವಾಲನ್ನು ಧ್ಯೇಯವಾಗಿ ಕಂಡು ಕೊಂಡವರು. ಅದಕ್ಕಾಗಿ ಬರಬಹುದಾದ ಎಲ್ಲವನ್ನೂ ಎದುರಿಸಲು ಸಿದ್ಧರಾದವರು. ಇವರಿಗಿಂತ ತೀಕ್ಷ್ಣವಾಗಿ ಪ್ರತಿಭಟಿಸುತ್ತಿದ್ದ ಮಂದಿಯನ್ನು ಅಷ್ಟಾಗಿ ಶಿಕ್ಷಿಸದೆ ಆಂಗ್ಲಪ್ರಭುತ್ವವು ತಿಲಕರನ್ನೇ ಗುರಿಯಾಗಿಟ್ಟುಕೊಂಡು ಕಠಿಣಶಿಕ್ಷೆ ನೀಡುತ್ತಿತ್ತು. ಅಂದರೆ ಅಂದಿನ ಸ್ವಾತಂತ್ರ್ಯಸಂಗ್ರಾಮದಲ್ಲಿ ಅವರ ಮಹತ್ತ್ವವನ್ನು ಆಂಗ್ಲಕ್ರಮದ ಹಿನ್ನೆಲೆಯಲ್ಲಿಯೂ ಪರಿಗಣಿಸಬಹುದು. ಮತ್ತು

ಪುಟ 22 ಕ್ಕೆ ➢

➢ ಪುಟ 21 ರಿಂದ.....

ಇದೇ ಹಿನ್ನೆಲೆಯಲ್ಲಿ ಅವರು ತಮ್ಮೀ ಧ್ಯೇಯ–ನಿರ್ಣಯಕ್ಕಾಗಿ ಎಂಥ ತ್ಯಾಗಕ್ಕೂ ಸಿದ್ಧರಾಗಿದ್ದರು ಎಂಬುದನ್ನು ನೋಡಿದರೆ ಆ ನಿಲುವು ಅದೆಷ್ಟು ಅಂತಃಸಾಕ್ಷಿಕವಾಗಿತ್ತೆನ್ನುವುದನ್ನು ಅಂದಾಜಿಸಬಹುದು.

## ಅಂತರಂಗದಿಂದ ಉದಿಸಿಬಂದ ಮಂತ್ರ

ತಿಲಕರು ಆಗಿನ ಕಾಲದ ಉಳಿದೆಲ್ಲ ಹೋರಾಟಗಾರರಂತೆ ಗೀತೆಯನ್ನು ಓದಿ ಅಂತರಂಗಕ್ಕೆ ಹೊಳಪನ್ನು ತಂದಕೊಂಡಿದ್ದರ ಜತೆಗೆ ದಾರ್ಶನಿಕರಾಗಿ ಗೀತೆಗೆ ತಾವು ಕಂಡರಿಸಿದ ಭಾಷ್ಯವನ್ನು ಬರೆದವರು. ಈ ದಾರ್ಶನಿಕ ಸಾಮರ್ಥ್ಯದ ಹಿನ್ನೆಲೆಯಿಂದ ಕೂಡಾ ಅವರ ಅಂತರಂಗಸಮೃದ್ಧಿಯನ್ನು ನೋಡಬಹುದು. ಉತ್ತಮ ಉಪಾಧ್ಯಾಯ, ಪ್ಲೇಗಗಿನಂಥ ಮಹಾಮಾರಿಯ ನಿವಾರಣೆಯಲ್ಲಿ ಸೂಕ್ತ ಕಾರ್ಯಾಚರಣೆಗೈದ ಅಸಾಮಾನ್ಯ ಸೇವಾವೃತಿ, ಶಿವಾಜಿ ಉತ್ಸವ – ಗಣೇಶೋತ್ಸಗಳಂಥ ಹೊಸ ಹೊಸ ಪರಿಕಲ್ಪನೆಗಳನ್ನು ನೀಡುವ ಮೂಲಕ ಕಂಡುಬಂದ ಅಪೂರ್ವ ಸಮಾಜಸಂಘಟಕ, ಪಾನನಿರೋಧ ವಿಧವಾವಿವಾಹ ಇತ್ಯಾದಿ ವಿಷಯಗಳಲ್ಲಿ ಆಸ್ಥೆವಹಿಸಿದ ಸಮಾಜಸುಧಾರಕ, ಉತ್ತಮ ಪತ್ರಿಕಾ ಸಂಪಾದಕ ಹೀಗೆ ತಾವು ಕೈಹಾಕಿದೆಡೆಗಳಲ್ಲೆಲ್ಲ ಯಶಸ್ವಿಗಳೇ ಆದ ತಿಲಕರು ಸ್ವಾತಂತ್ರ್ಯೋದ್ಯಮಕ್ಕೆ ಒಂದು ಸ್ಪಷ್ಟವಾದ ಹೊಸ ದಿಕ್ಕನ್ನು ಕೊಡುವಲ್ಲಿ ಇದ್ದುದು ಬರಿಯ ಅವರ ದಾರ್ಶನಿಕ ಚಿಂತನೆ, ಹೋರಾಟದ ಮನಃಸ್ಥಿತಿ ಇತ್ಯಾದಿಗಳಷ್ಟೇ ಅಲ್ಲ, ಏನೇ ಬಂದರೂ ಎದುರಿಸಬಲ್ಲೆನೆಂಬ ದೃಢಿಷ್ಠ ನಿರ್ಭಯತೆ; ಬಹಿರಂಗದ ಸುಖಕ್ಕೆ ಪೂರ್ತಿ ತಿಲಾಂಜಲಿ ಇಟ್ಟು ಅಂತರಂಗಕ್ಕಷ್ಟೇ ಆತುಕೊಂಡ ತ್ಯಾಗಭಾವ.

"ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು" ಎಂಬ ವಾಕ್ಯ ಭಾಷಣದ ನಡುವೆ ಸುಳಿದುಹೋದ ಯಾವುದೋ ಆವೇಶದ ವಾಕ್ಯವಾಗಿರಲಿಲ್ಲ, ಅದು ದಾರ್ಶನಿಕರಾಗಿ ಅವರು ಕಂಡುಕೊಂಡ ಸ್ವಾತಂತ್ರ್ಯಮಂತ್ರವಾಗಿತ್ತು. ಅವರ ಉಸಿರಾಗಿತ್ತು. ಸ್ವಾತಂತ್ರ್ಯಸಂಗ್ರಾಮದ ಘೋಷವಾಕ್ಯವಾಯಿತು.

ಒಂದೆಡೆ ಅಧೀನ ಆಡಳಿತ ಸಿಕ್ಕರೆ ಸಾಕೆಂಬ ತೃಪ್ತಿಯಲ್ಲಿದ್ದ ಆಂಗ್ಲರನ್ನು ಮೆಚ್ಚಿಸುವ ರೀತಿಯ ಹೋರಾಟ, ಇನ್ನೊಂದೆಡೆ ಪಾತಕಿಗಳನ್ನೆಲ್ಲ ಯಮಸದನಕ್ಕಟ್ಟುವ ತೀವ್ರತರದ ಕ್ರಾಂತಿಕಾರ್ಯ – ಇವೆರಡಕ್ಕೂ ಮಧ್ಯಮಮಾರ್ಗದಲ್ಲಿದ್ದು ಎರಡೂ ಬಗೆಯ ಹೋರಾಟಗಳಿಗೆ ಸೇತುವಿನಂತೆಯೂ ನೇತಾರರಂತೆಯೂ ಇದ್ದವರು ತಿಲಕರು.

## ಕೊನೆಯಲ್ಲಿ ಹೀಗೆ ಹೇಳಬಹುದೇನೋ

ಹೀಗಿದ್ದ ತಿಲಕರ ಅಂತರಂಗಾಭಿಮುಖಿಯಾಗಿದ್ದ ಮನಸ್ಸಿನಲ್ಲಿ ನಿಜ ಸ್ವಾತಂತ್ರ್ಯದ ಸಂಕಲ್ಪ ಹುಟ್ಟಿಕೊಂಡಿತು ಮತ್ತದನ್ನು ಸಾಕಾರಗೊಳಿಸುವಲ್ಲಿ ಅವರದ್ದಾದ ಬದುಕನ್ನಿಡೀ ಧಾರೆಯೆರೆದರು.

●

# ಒಳ್ಳೆಯವರ ಸಹವಾಸವನ್ನೇ ಮಾಡಿ

**ಸಂಗ್ರಹ : ಚಾರಿತ್ರ್ಯವೇ ಜೀವನ ಪುಸ್ತಕದಿಂದ,**
**ಸಂಗ್ರಾಹಕರು : ಹೆಚ್.ಎನ್.ಆರ್**

**ದೂರೀಕರೋತಿಕುಮತಿಂ ವಿಮಲೀಕರೋತಿ**
**ಚೇತಶ್ಚಿರಂತನಮಘಂ ಚುಲುಕೀಕರೋತಿ।**
**ಭೂತೇಷು ಕಿಂಚ ಕರಣಾಂ ಬಹುಲೀಕರೋತಿ**
**ಸಂಗಃ ಸತಾಂ ಕಿಮು ನ ಮಂಗಲಮಾತನೋತಿ॥**

ಸತ್ಸಂಗವು ಬುದ್ಧಿಯ ಕಲುಷತೆಯನ್ನು ಹೋಗಲಾಡಿಸುತ್ತದೆ. ಚಿತ್ತವನ್ನು ಶುದ್ಧಿಗೊಳಿಸುತ್ತದೆ, ದೀರ್ಘಕಾಲದ ಪಾಪವನ್ನು ನಾಶಗೊಳಿಸುತ್ತದೆ, ಅಲ್ಲದೆ ಪ್ರಾಣಿಗಳ ವಿಷಯದಲ್ಲಿ ಕಾರುಣ್ಯವನ್ನು ಹೆಚ್ಚಿಸುತ್ತದೆ. ಸತ್ಸಂಗವು ಯಾವ ಮಂಗಳವನ್ನು ತಾನೇ ಮಾಡದಿರುವುದು?( ರಸಗಂಗಾಧರ).

ಒಬ್ಬ ಮನುಷ್ಯನ ಸ್ವಭಾವ, ಯೋಗ್ಯತೆ ಏನು ಎಂದುಕಂಡು ಹಿಡಿಯಬೇಕಾದರೆ ಅವನ ಸ್ನೇಹಿತರಾರು ಎಂಬುದನ್ನು ತಿಳಿಯಬೇಕು ಎಂಬ ಮಾತಿದೆ.ಇದನ್ನೇ 'ಸಹವಾಸದ ಪರಿಣಾಮ' ಎನ್ನುವುದು.ಅಂದರೆ, ಒಳ್ಳೆಯ ಸಹವಾಸ ಮಾಡಿದರೆ, ಅವನು ಒಳ್ಳೆಯ ವ್ಯಕ್ತಿಯಾಗುತ್ತಾನೆ. ಆದುದರಿಂದಲೇ 'ಸತ್ಸಂಗ' ಕಾಲಕ್ಷೇಪಕ್ಕೆ ನಮ್ಮ ಸಂಸ್ಕೃತಿಯಲ್ಲಿ ಹೆಚ್ಚಿನ ಮಹತ್ತ್ವ ನೀಡಲಾಗಿದೆ. ಇದನ್ನೇ ಸರ್ವಜ್ಞ ಕವಿ "ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ, ದುರ್ಜನರ ಸಂಗದೊಡನಾಟ ಕೆಸರಲ್ಲಿ ಮುಳ್ಳು ತುಳಿದಂತೆ" ಎಂಬ ಕವಿತೆಯಲ್ಲಿ ಹೇಳಿದ್ದಾನೆ.

ಸಾಧಾರಣವಾಗಿ ಎಲ್ಲ ಊರುಗಳಲ್ಲಿ ಮುಖ್ಯವಾಗಿ ದೇವಸ್ಥಾನಗಳಲ್ಲಿ ಭಜನಮಂದಿರಗಳಲ್ಲಿ 'ಸತ್ಸಂಗ' ಏರ್ಪಡಿಸುವುದರ ಜೊತೆಗೆ ಒಳ್ಳೆಯ ಸಹವಾಸ ಇಟ್ಟುಕೊಳ್ಳುವ ವ್ಯವಸ್ಥೆ ಮಾಡಿದರೆ, ವ್ಯಕ್ತಿಗೆ ಒಳ್ಳೆಯ ಸಂಸ್ಕಾರದೊರೆತು, ಒಳ್ಳೆಯವನಾಗುತ್ತಾನೆ. ದುಷ್ಟ ಬುದ್ಧಿ, ದುಶ್ಚಟಗಳಿಂದ ದೂರವಾಗುತ್ತಾನೆ. ಈ ಅಂಶವು ಅಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಎರಡು ಗಿಳಿಮರಿಗಳು ಬೇರೆ ಬೇರೆ ಸಹವಾಸದಲ್ಲಿ ಬೆಳೆದು ಮೈಗೂಡಿಸಿಕೊಂಡ ಗುಣಗಳ ಕಥೆಯಿಂದ ತಿಳಿಯುತ್ತದೆ. ಆದುದರಿಂದ, ಬಾಲ್ಯದಲ್ಲಿ ಈ ಬಗ್ಗೆ ಹೆಚ್ಚಿನ ಗಮನಕೊಡುವುದು ತಂದೆ ತಾಯಿಗಳ ಮತ್ತು ಶಿಕ್ಷಕರ ಮಹತ್ತ್ವದ ಜವಾಬ್ದಾರಿ. ಇಂದು ಈ ಕೆಲಸ ಆಗುತ್ತಿಲ್ಲ.

ದೇಶಕ್ಕೆ ಸ್ವಾತಂತ್ರ್ಯ ಬಂದ 60 ವರ್ಷಗಳಾದ ನಂತರ ಪರಿಸ್ಥಿತಿಯೆಂದರೆ, ಬಾಲಕ, ಬಾಲಕಿಯರಿಗೆ ಅಂತಹ ಸಂಸ್ಕಾರ ನೀಡಲು ತಂದೆ ತಾಯಿಯವರಿಗೆ ಮತ್ತು ಶಿಕ್ಷಕರಿಗೆ ಅಂತಹ ಶಿಕ್ಷಣ ಸಂಸ್ಕಾರ ಸಿಕ್ಕಿಲ್ಲದಿರುವುದು ನಮ್ಮ ಮೂಲಭೂತ ಸಮಸ್ಯೆಯಾಗಿದೆ. ಚಾರಿತ್ರ್ಯವಿಲ್ಲದ ವ್ಯಕ್ತಿಯಿಂದ ವಿದ್ಯಾರ್ಥಿಗಳ ಚಾರಿತ್ರ್ಯ ನಿರ್ಮಾಣ ಮಾಡಲು ಸಾಧ್ಯವಿಲ್ಲ ಎಂದು ಎಚ್ಚರಿಕೆಯ ಮಾತನ್ನು ಹೇಳುತ್ತ ಸ್ವಾಮಿ ವಿವೇಕಾನಂದರು ಶತಮಾನದ ಹಿಂದೆಯೇ ನಮ್ಮನ್ನು ಎಚ್ಚರಿಸಿದ್ದಾರೆ.

ಈಗಲಾದರೂ ನಮ್ಮ ಶಿಕ್ಷಣ ನೀತಿಯಲ್ಲಿ ಈ ನಿಟ್ಟಿನಲ್ಲಿ ಆಮೂಲಾಗ್ರ ಬದಲಾವಣೆ ಮಾಡಿದರೆ ಒಂದು ತಲೆಮಾರಿನ ನಂತರ ಅಂದರೆ ಸುಮಾರು ಮೂವತ್ತು ವರ್ಷ ನಂತರ ಅಂತಹ ಶಿಕ್ಷಣದ ಪ್ರತಿಫಲ ಪಡೆಯಬಹುದು.

●

# ಗುರುವಂದನಾ ಕಾರ್ಯಕ್ರಮ–ಕುಷ್ಟಗಿ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು, ಜಿಲ್ಲಾ ಘಟಕ ಕೊಪ್ಪಳ ಇವರ ಆಶ್ರಯದಲ್ಲಿ ಗುರುವಂದನಾ ಕಾರ್ಯಕ್ರಮವನ್ನು ವಿವೇಕಾ ಕಂಪ್ಯೂಟರ್ಸ್ ಕುಷ್ಟಗಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮಕ್ಕೆ ಸನ್ಮಾನ್ಯ ಶ್ರೀ ಬಿ. ಎಂ. ಜೋಶಿ ಮುಖ್ಯಸ್ಥರು, ವಿವೇಕ ಕಂಪ್ಯೂಟರ್ಸ್ ಕುಷ್ಟಗಿ ಇವರು ಉದ್ಘಾಟಿಸಿ ಮಾತನಾಡಿ 'ಗುರುಗಳನ್ನು ಸ್ಮರಿಸಿಕೊಳ್ಳುವ ಇಂತಹ ಕಾರ್ಯಕ್ರಮ ಶಿಕ್ಷಕರಲ್ಲಿ ಆತ್ಮಸ್ಥೈರ್ಯ, ನೈತಿಕ ಮೌಲ್ಯ ಮೂಡಿಸುತ್ತದೆ ಹಾಗೂ ಗುರುವಿನಿಂದ ಅಸಾಧ್ಯವಾಗಿದ್ದರೂ ಸಾಧ್ಯವಾಗಿಸುವ ಮಾರ್ಗವನ್ನು ಗುರು ಸಾಧಿಸಿ ತೋರಿಸುವುದು ದೊಡ್ಡ ಕಾರ್ಯವಾಗಿದೆ. ಆದ್ದರಿಂದ ಈ ಕಾರ್ಯಕ್ರಮ ಮಾದರಿಯಾಗಿದೆ' ಎಂದರು.

ಮುಖ್ಯಭಾಷಣಕಾರರಾಗಿ ಮಂಗಳೂರು ಸಹ್ಯಾದ್ರಿ ಕಾಲೇಜಿನ ಪ್ರಾಧ್ಯಾಪಕರಾದ ಡಾ॥ ಜಯಣ್ಣ ವಿ. ಗೊರೆ ಬಾಳವರವರು ಗುರುಪರಂಪರೆ ನಡೆದು ಬಂದ ದಾರಿ, ಗುರುವಿನ ಮಹತ್ವ, ಗುರುವಿನಿಂದ ಎಂತಹ ಸಾಧನೆಗಳು ಸಾಧ್ಯವಾಗುತ್ತದೆ ಎಂದು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿ ಗುರುವಂದನಾ ಕಾರ್ಯಕ್ರಮ ಸಂಘದವರು ಶಿಕ್ಷಕರಿಗಾಗಿ ಏರ್ಪಡಿಸಿ ಈ ಮೂಲಕ ಶಿಕ್ಷಕರಿಗೆ ಸ್ಫೂರ್ತಿದಾಯಕವಾಗುವಂತೆ ರಚನಾತ್ಮಕ ಕಾರ್ಯ ಇದಾಗಿದೆ ಎಂದರು. ಗುರು–ಗುರಿ ಇದ್ದರೆ ಯಶಸ್ಸು ತಾನಾಗಿಯೇ ಬರುತ್ತದೆ ಎಂದು ತಿಳಿಸಿದರು. ಶಿಕ್ಷಕರು ಕರ್ತವ್ಯನಿಷ್ಠೆ, ಸಮಯಪ್ರಜ್ಞೆ, ಶಿಸ್ತು, ಕಲಿಕೆ ಮೇಲೆ ಪ್ರೀತಿ, ಸ್ವಯಂಕಲಿಕೆ ನಿರಂತರ ಸಾಧಿಸಿ ಉತ್ತಮ ಶಿಕ್ಷಣ ನೀಡಿ ರಾಷ್ಟ್ರ ನಿರ್ಮಾಣದಂತಹ ಮಹತ್ಕಾರ್ಯ ನಡೆಯಲಿ ಎಂದು ಆಶಿಸಿದರು.

ಎಬಿಆರ್‌ಎಸ್‌ಎಮ್‌ನ ಮಹಿಳಾ ವಿಭಾಗದ ಸಹ ಕಾರ್ಯದರ್ಶಿ ಡಿ. ಕೆ. ಮಮತಾ ಇವರು ಸರಸ್ವತಿ ವಂದನೆ ನೆರವೇರಿಸಿದರು. ರಾಜ್ಯ ಕಾರ್ಯಕಾರಿಣಿ ಸದಸ್ಯರು ಗುಂಡಾಚಾರ್‌ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾಧ್ಯಕ್ಷ ಸೋಮಶೇಖರರವರು, ಬಸವರಾಜ ಮಾಸ್ತಿ, ಕೆ. ದಯಾನಂದ ಬಾಬು ಉಪಸ್ಥಿತರಿದ್ದರು.

ಅರವಿಂದ ದೇಸಾಯಿ ನಿರೂಪಿಸಿದರು. ಎಸ್.ಸಿ ಮಾಟೂರ್‌ರವರು ಮುಖ್ಯ ಭಾಷಣಕಾರರ ಪರಿಚಯ ಪರಿಚಯ ಮಾಡಿಕೊಟ್ಟರು. ಕೊನೆಯಲ್ಲಿ ಹನಮೇಶ ಕುಲಕರ್ಣಿ ವಂದಿಸಿದರು. ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.



**ಕ.ರಾ.ಮಾ.ಶಿ.ಸಂಘ ಅಥಣಿ, ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಗುರು ವಂದನಾ ಕಾರ್ಯಕ್ರಮ ದಿನಾಂಕ 26–07–20 ರಂದು ಸಾಯಂಕಾಲ 4 ಗಂಟೆಗೆ ಜರುಗಿತು.**

# ಕೊನೆಯ ಪರೀಕ್ಷೆ

ಒಬ್ಬ ಗುರುವಿದ್ದ. ಆತನ ಮೂವರು ಶಿಷ್ಯರ ವಿದ್ಯಾಭ್ಯಾಸ ಒಮ್ಮಲೇ ಮುಗಿಯಿತು. "ನಿಮಗೆ ಕೊನೆಯದೊಂದು ಪರೀಕ್ಷೆ ಮಾತ್ರವೇ ಉಳಿದಿವೆ, ಹೋಗುವಾಗ ಅದನ್ನು ಮಾಡುತ್ತೇನೆ" ಎಂದರು ಗುರುಗಳು. ಹೋಗುವ ದಿನವೂ ಬಂದಿತು. ಶಿಷ್ಯರನ್ನು ಗುರು ಬೀಳ್ಕೋಟ್ಟರು. ಯಾವುದೇ ಪರೀಕ್ಷೆ ಮಾಡದುದನ್ನು ಕಂಡ ಆ ಶಿಷ್ಯರು, ಪ್ರಾಯಶಃ ಗುರುಗಳು ಪರೀಕ್ಷೆಯನ್ನು ಮರೆತಿರಬೇಕು ಎಂದುಕೊಂಡರು.

ಶಿಷ್ಯರು ಹೊರಟಾಗ ಸಾಯಂಕಾಲವಾಗಿತ್ತು. ದಾರಿಯಲ್ಲಿ ಪೊದೆಯೊಂದರ ಸಮೀಪ ಮುಳ್ಳುಗಳು ಬಿದ್ದಿರುವುದನ್ನು ಅವರು ಕಂಡರು. ಮೊದಲನೇ ಶಿಷ್ಯ ಜೋರಾಗಿ ನೆಗೆದು ಮುಳ್ಳುಗಳಿಂದ ಪಾರಾಗಿ ಮುಂದೆ ಹೋದ. ಎರಡನೆಯವ ಪಕ್ಕದಲ್ಲಿದ್ದ ಪೊದೆಯನ್ನು ಸ್ವಲ್ಪ ಕಡಿದು ದಾರಿಮಾಡಿಕೊಂಡು ಮುಂದೆ ಹೊರಟ. ಆದರೆ ಮೂರನೆಯ ಶಿಷ್ಯ ದಾರಿಯಲ್ಲಿ ಬಿದ್ದಿದ್ದ ಮುಳ್ಳುಗಳನ್ನೆಲ್ಲ ಆರಿಸಿ ಪಕ್ಕದ್ದ ಪೊದೆಗೆ ಎಸೆದ. ದಾರಿಯನ್ನು ಸ್ವಚ್ಛ ಮಾಡಿ ಮುಂದೆ ನಡೆದ. ಇದನ್ನೆಲ್ಲ ಪೊದೆಯಲ್ಲಿ ಅವಿತು ನೋಡುತ್ತಿದ್ದ ಗುರು ಮೊದಲ ಇಬ್ಬರು ಶಿಷ್ಯರನ್ನು ಕುರಿತು " ನೀವು ಮತ್ತೆ ಆಶ್ರಮಕ್ಕೆ ಹೋಗಿ, ನಿಮ್ಮ ವಿದ್ಯಾಭ್ಯಾಸ ಇನ್ನೂ ಮುಗಿದಿಲ್ಲ" ಎಂದರು. "ನಿನ್ನ ಶಿಕ್ಷಣ ಮುಗಿದಿದೆ. ನೀನು ಉತ್ತೀರ್ಣನಾಗಿರುವಿ" ಎಂದು ಮೂರನೆಯ ಶಿಷ್ಯನನ್ನು ಹರಸಿ ಆ ಗುರು ಬೀಳ್ಕೊಟ್ಟರು.

# ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಪ್ರಮುಖರ ಹೇಳಿಕೆ



### ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿಗೆ ಸ್ವಾಗತ

ಮಾನವ ಸಂಪನ್ಮೂಲ ಇಲಾಖೆಯು ದೇಶದಲ್ಲಿ ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಡಾ. ಕೆ.ಕಸ್ತೂರಿರಂಗನ್ ಅಧ್ಯಕ್ಷತೆಯ ದೇಶದ ಪ್ರಮುಖ ಶಿಕ್ಷಣ ತಜ್ಞರನ್ನು ಒಳಗೊಂಡಿರುವಂತಹ ಸಮಿತಿಯು ಕಳೆದ ವರ್ಷ ಮೇ ತಿಂಗಳಲ್ಲಿ ಶಿಕ್ಷಣ ನೀತಿಯ ಕರಡು ಪ್ರತಿಯನ್ನು ಮಾನವ ಸಂಪನ್ಮೂಲ ಇಲಾಖೆಗೆ ಸಲ್ಲಿಸಿತ್ತು.

ವಿವಿಧ ಹಂತದಲ್ಲಿ ದೀರ್ಘವಾದ ಚರ್ಚೆ, ವಿಮರ್ಶೆ ಸಮಾಲೋಚನೆಯನ್ನು ಜರುಗಿಸಿದ ನಂತರ ಕೇಂದ್ರ ಸರ್ಕಾರವು ಇಂದು ಸಂಪುಟ ಸಭೆಯಲ್ಲಿ ಹೊಸ ಶಿಕ್ಷಣ ನೀತಿಗೆ ಸಮ್ಮತಿ ನೀಡಿರುವುದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಸ್ವಾಗತ ಮಾಡಿದೆ ಎಂದು ರಾಜ್ಯಾಧ್ಯಕ್ಷ ಸಂದೀಪ ಬೂದಿಹಾಳ ತಿಳಿಸಿದ್ದಾರೆ. ಹೊಸ ಶಿಕ್ಷಣ ನೀತಿಯಲ್ಲಿ ಶಾಲಾ ಶಿಕ್ಷಣ, ಉನ್ನತ ಶಿಕ್ಷಣ, ಶಿಕ್ಷಕರ ಶಿಕ್ಷಣ ಮತ್ತು ತರಬೇತಿ, ವೃತ್ತಿಪರ ಶಿಕ್ಷಣ, ಶಿಕ್ಷಣದಲ್ಲಿ ತಂತ್ರಜ್ಞಾನದ ಬಳಕೆ, ಗ್ರಾಮೀಣಾಭಿವೃದ್ಧಿ ಹಾಗೂ ಭಾರತೀಯ ಭಾಷೆಗಳಿಗೆ ಪ್ರಾಧ್ಯನತೆ ಹೀಗೆ ಹತ್ತು ಹಲವು ವಿಷಯಗಳ ಬಗ್ಗೆ ಆಳವಾದ ಮತ್ತು ಸಮಗ್ರವಾದ ಮಾಹಿತಿಯನ್ನು ಈ ಹೊಸ ಶಿಕ್ಷಣ ನೀತಿಯು ಹೊಂದಿದ್ದು, ಶಿಕ್ಷಣ ಕ್ಷೇತ್ರಕ್ಕೆ ನೂತನ ಕಾಯಕಲ್ಪವನ್ನು ಕಲ್ಪಿಸಲಿದೆ. ದೇಶದಲ್ಲಿ 1986 ನಂತರ ಈಗ ಹೊಸ ಶಿಕ್ಷಣ ನೀತಿಯು ಜಾರಿಗೆ ಬಂದಿರುವುದು ಶಿಕ್ಷಣ ಕ್ಷೇತ್ರಕ್ಕೆ ಹೊಸ ದಿಕ್ಕು ಮತ್ತು ಪ್ರೇರಣೆ ದೊರೆಯುವಂತಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರವು ಈ ಹೊಸ ಶಿಕ್ಷಣ ನೀತಿಯನ್ನು ತ್ವರಿತವಾಗಿ ಜಾರಿಗೆ ತರಬೇಕೆಂದು ಆಶಿಸುತ್ತೇನೆ.

### ರಾಷ್ಟ್ರೀಯ ಶಿಕ್ಷಣ ನೀತಿಗೆ ಸ್ವಾಗತ




"ರಾಷ್ಟ್ರೀಯ ಶಿಕ್ಷಣ ನೀತಿ–2020ಕ್ಕೆ ಬುಧವಾರ ನಡೆದ ಸಂಪುಟ ಸಭೆಯಲ್ಲಿ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದ್ದು, ಜಾರಿಗೊಳಿಸುವ ನಿರ್ಣಯ ಅಂಗೀಕರಿಸಿದೆ." ಎಂದು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ (ಎಬಿಆರ್‌ಎಸ್‌ಎಮ್)ದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಿವಾನಂದ ಸಿಂಧನಕೇರಾ ತಿಳಿಸಿದ್ದಾರೆ.

ಹೊಸ ಶೈಕ್ಷಣಿಕ ನೀತಿಯನ್ನು ಸಂಘ ಸ್ವಾಗತಿಸಲಿದೆ ಎಂದಿದ್ದಾರೆ. "ಮುಂದಿನ 30 ವರ್ಷಗಳಿಗೆ ಈ ಹೊಸ ಶಿಕ್ಷಣ ನೀತಿ ಜಾರಿಗೊಳಿಸಿದ್ದು, ದೇಶದ ಅಭಿವೃದ್ಧಿಯಲ್ಲಿ ಇದು ಹೊಸ ದಿಕ್ಕು ತೋರಿಸಲಿದೆ. ಭವಿಷ್ಯದ ಪೀಳಿಗೆಗೆ ಸಂಸ್ಕಾರಯುತ ಶಿಕ್ಷಣ ಮತ್ತು ದೇಶದ ಬಗ್ಗೆ ಅಭಿಮಾನನ್ನು ಹೊಂದುವಂತಹ ಹಾಗೂ ಆತ್ಮನಿರ್ಭರತೆಯನ್ನು ಉಂಟು ಮಾಡುವ ಆಶಯವನ್ನು ಒಳಗೊಂಡಿದೆ" ಎಂದು ತಿಳಿಸಿದ್ದಾರೆ.

ತಕ್ಷಣದಿಂದಲೇ ರಾಜ್ಯ ಸರ್ಕಾರ ರಾಷ್ಟ್ರೀಯ ಶಿಕ್ಷಣ ನೀತಿ–2020 ಅಳವಡಿಸಿಕೊಳ್ಳಲು ಮುಂದಾಗಬೇಕು ಎಂದಿದ್ದಾರೆ.

### ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕೆಆರ್‌ಎಂಎಸ್‌ಎಸ್ ಸ್ವಾಗತಿಸುತ್ತದೆ



ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಮಾಡಿದ ಕೇಂದ್ರ ಸರ್ಕಾರಕ್ಕೆ ಅಭಿನಂದನೆಗಳನ್ನು ಕರ್ನಾಟಕ ರಾಜ್ಯ ಮಹಾವಿದ್ಯಾಲಯಗಳ ಶಿಕ್ಷಕ ಸಂಘ ಸ್ವಾಗತಿಸುತ್ತದೆ ಎಂದು ರಾಜ್ಯಾಧ್ಯಕ್ಷ ರಘು ಅಕಮಂಚಿ ತಿಳಿಸಿದ್ದಾರೆ.

ಈ ನೀತಿಯನ್ನು ರೂಪಿಸಿದ ಎಲ್ಲ ಸಮಿತಿ ಸದಸ್ಯರಿಗೂ ಅಭಿನಂದನೆಗಳು. ಡಾ. ಕಸ್ತೂರಿ ರಂಗನ್, ಎಂ.ಕೆ ಶ್ರೀಧರ್ ಹಾಗೂ ಇತರರ ಶ್ರಮ ಸಾರ್ಥಕವಾಯಿತು. ಎಲ್ಲಾ ರಾಜ್ಯಗಳಲ್ಲಿ ಏಕಕಾಲಕ್ಕೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಅಳವಡಿಸಲಿ.

1986 ರ ನಂತರ ಬಂದ ಶಿಕ್ಷಣ ನೀತಿ 34 ವರ್ಷಗಳ ನಂತರ ದೇಶಕ್ಕೆ ರಾಷ್ಟ್ರೀಯ ಶಿಕ್ಷಣ ನೀತಿ ಬಂದಿರುವುದು ಭಾರತದ ಭವಿಷ್ಯಕ್ಕೆ ಬರೆದ ಮುನ್ನುಡಿಯಾಗಿದೆ.

ಹೊಸ ಶಿಕ್ಷಣ ನೀತಿಯಿಂದ ಹೊಸ ಮನ್ವಂತರ ಪ್ರಾರಂಭ ಮತ್ತು ಹೊಸ ಶಿಕ್ಷಣದ ಯುಗ ಪ್ರಾರಂಭವಾಗಿದೆ ಎಂದು ತಿಳಿಸಿದ್ದಾರೆ.



ಯಾವುದೇ ಒಂದು ದೇಶಕ್ಕೆ ಜೀವ ಕೊಡುವ ಒಂದೇ ಒಂದು ಭರವಸೆ ಎಂದರೆ ಶಿಕ್ಷಣ. ಅಂತೆಯೇ ಆತ್ಮ ನಿರ್ಭರ ಭಾರತ ಕಟ್ಟಲು ಬೇಕಾದ ಇಟ್ಟಿಗೆಗಳು ತಯಾರಾಗುವುದು ದೇಶದ ಶಾಲಾ ತರಗತಿಗಳಲ್ಲಿ.

ಆ ನಿಟ್ಟಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಿರುವದು ನಾವು ಸರಿಯಾದ ದಿಕ್ಕಿನಡೆಗೆ ಸಾಗುತ್ತಿದ್ದೇವೆ ಎನ್ನುವುದಕ್ಕೆ ಇದೊಂದು ಲಿಟಮಸ್ ಪರೀಕ್ಷೆ.

ಪೂರ್ವ ಪ್ರಾಥಮಿಕ ಶಿಕ್ಷಣ, ಸಂಶೋಧನೆ, ಶಿಕ್ಷಕರ ಶಿಕ್ಷಣ ಇವುಗಳು ಭವಿತವ್ಯದ ಭಾರತದ ಭವಿಷ್ಯವನ್ನು ಬರೆಯುವ ಸಂಗತಿಗಳಾಗಿವೆ.ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ನೀಡಿದ ತಂಡ, ಸರಕಾರವನ್ನು ದೇಶ ಬಹುಕಾಲ ನೆನಪಿಟ್ಟು ಕೊಳ್ಳುತ್ತದೆ ಎಂದು ಬಾಗಲಕೋಟೆ ಬಸವೇಶ್ವರ ಶಿಕ್ಷಕರ ತರಬೇತಿ ಸಂಸ್ಥೆಯ ಜಿ. ಕೆ. ತಳವಾರ ಅವರು ತಿಳಿಸಿದ್ದಾರೆ.



ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿ ದೂರಗಾಮಿ ಸಕಾರಾತ್ಮಕ ಪರಿಣಾಮ ಹೊಂದಿದ್ದು, ತಡವಾದರೂ ಜಾರಿಗೆ ತರಲು ಯೋಜಿಸಿದ್ದು ಸ್ವಾಗತಾರ್ಹ.

5ನೇ ತರಗತಿವರೆಗೆ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ನೀಡಬೇಕೆಂಬುದು ಅತ್ಯಂತ ಮಹತ್ವದ ನಿರ್ಧಾರ. ಕೇವಲ ಅಂಕಗಳ ಮೂಲಕ ಮಕ್ಕಳನ್ನು ಮೌಲ್ಯಮಾಪನ ಮಾಡದೇ ಅವರ ಕೌಶಲ್ಯ ಮತ್ತು ಸಾಮರ್ಥ್ಯಗಳನ್ನೂ ಮೌಲ್ಯಮಾಪನ ಮಾಡುವ ನಿರ್ಧಾರ ಉತ್ತಮ ಬೆಳವಣಿಗೆ. ಖಾಸಗಿ ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರವೇ ಶುಲ್ಕ ನಿಗದಿ ಮಾಡುವುದರಿಂದ ಶಿಕ್ಷಣದ ವ್ಯಾಪಾರೀಕರಣಕ್ಕೆ ಬ್ರೇಕ್ ಹಾಕಲು ಸಾಧ್ಯ. ನೂತನ ಶಿಕ್ಷಣ ನೀತಿಯಲ್ಲಿ ಹೇಳಲಾದ ಧನಾತ್ಮಕ ಬದಲಾವಣೆಗಳನ್ನು ಪರಿಣಾಮಕಾರಿಯಾಗಿ ಜಾರಿಯಾಗಲಿ ಎಂದು ಆಶಿಸುತ್ತೇನೆ ಎಂದು ಧಾರವಾಡದ ಸ್ವಾಮಿ ವಿವೇಕಾನಂದ ಯೂತ್ ಮೂವ್ ಮೆಂಟ್‌ನ ಜಯಂತ ಕೆ. ಎಸ್. ಅವರು ತಿಳಿಸಿದ್ದಾರೆ.

MAG(3)/NPP/26/2018-19 Registered No. RNI 45459/85
Posted at Bangalore PSO Bangalore -560 026
Date of Publishing : 17-08-2020
Date of Posting 20h or 21st of every month
Posted at Periodical Rate

# ಶಿಕ್ಷಕರ ಮತ್ತು ಶೈಕ್ಷಣಿಕ ಸಮಸ್ಯೆಗಳ ಚರ್ಚೆ




ಬೆಂಗಳೂರ ಸಮಗ್ರ ಶಿಕ್ಷಣ ಅಭಿಯಾನ ಕಟ್ಟಡದ ಸಭಾಭವನದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳ ನೇತೃತ್ವದಲ್ಲಿ "ಶಿಕ್ಷಕರ ಮತ್ತು ಶೈಕ್ಷಣಿಕ ಸಮಸ್ಯೆಗಳ " ಕುರಿತಂತೆ ಚರ್ಚಿಸಲಾಯಿತು.

ಸಭೆಯಲ್ಲಿ ಮಾನ್ಯ ಎಸ್. ಸುರೇಶ ಕುಮಾರ ಸರ್ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕಾರ್ಯಾಧ್ಯಕ್ಷರಾದ & ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ಅರುಣ್ ಶಹಾಪುರ, ಕ್ಯಾ. ಗಣೇಶ್ ಕಾರ್ಣಿಕ್, ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಉಮಾ ಶಂಕರ್, ಆಯುಕ್ತರಾದ ಡಾ. ಜಗದೀಶ್, ಎಚ್. ನಾಗಭೂಷಣ್ ರಾವ್, ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಅಧ್ಯಕ್ಷರಾದ ಸಂದೀಪ ಬೂದಿಹಾಳ, ರಾಜ್ಯ ಪ್ರಧಾನ ಕಾರ್ಯದರ್ಶಿ ಚಿದಾನಂದ ಪಾಟೀಲ, ಸಹ ಪ್ರಧಾನ ಕಾರ್ಯದರ್ಶಿ ಗಂಗಾಧರಾಚಾರಿ, ಶ್ರೀಮತಿ ಸೀತಾಲಕ್ಷ್ಮೀ, ರಾಜ್ಯ ಉಪಾಧ್ಯಕ್ಷರಾದ ಬಿ.ಹೆಚ್. ವರದರಾಜು, ರಾಜ್ಯ ಖಜಾಂಚಿಗಳಾದ ಜೆ. ಎಂ. ಜೋಶಿ ಮತ್ತು ವಿಭಾಗ ಪ್ರಮುಖರಾದ ಮಲ್ಲಿಕಾರ್ಜುನ ಕೂಡಗಿ ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.




**ಗಮನಿಸಿ**

ಶಿಕ್ಷಕ ಸಮಾಚಾರದ ಹೊಸ ಸಂಚಿಕೆಯ ಬಗ್ಗೆ ಅನಿಸಿಕೆ, ಅಭಿಪ್ರಾಯಗಳನ್ನು ಪ್ರತಿ ಸಂಚಿಕೆ 5ನೇ ತಾರೀಖಿನೊಳಗೆ
**akss1950@gmail.com Email**ಗೆ ಕಳುಹಿಸಿಕೊಡಿ.
ಉತ್ತಮ ಅನಿಸಿಕೆ, ಅಭಿಪ್ರಾಯವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

IF UNDELIVERED PLEASE RETURN TO SENDER

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com